ಕುವೆಂಪು ಕವನಗಳ ಓದು



ಸಿ.ಪಿ.ನಾಗರಾಜ

ಕುವೆಂಪು ಕವನಗಳ ಓದು

ಸಿ.ಪಿ.ನಾಗರಾಜ

ನಾಗು ಸ್ಮಾರಕ ಪ್ರಕಾಶನ
೭೫, 'ಎ' ಬ್ಲಾಕ್, ೫ ನೆಯ ಕ್ರಾಸ್, ಕ್ರಿಷ್ಣ ಗಾರ್ಡನ್
ಆರ್.ವಿ. ಕಾಲೇಜು ಪೋಸ್ಟ್, ಬೆಂಗಳೂರು–೫೬೦೦೫೯

KUVEMPU KAVANAGALA ODU :
by C.P.Nagaraja, Published by Nagu Smaraka Prakashana, 75, `A' Block, 5th Cross, Krishna Garden, R.V. College Post, Bengaluru-560059, Mobile: 9986347521.

First Edition : 2021

Page : 104

Price : Rs. 100/-

Paper : 80gsm Ns Maplitho

Size : Demy 1/8

Copies : 500

ಪುಟಗಳು : 104

ಪ್ರತಿಗಳು : 500

ಬೆಲೆ : ರೂ. 100/-

ಮುಖಪುಟ ವಿನ್ಯಾಸ : ಎಂ.ಎಲ್.ಸೋಮವರದ, ಮಂಡ್ಯ
ಮೊ.9743512174, 8618580924

ಪ್ರತಿಗಳು ದೊರೆಯುತ್ತವೆ:

ಹರಿವು ಬುಕ್ಸ್
67, ಸೌತ್ ಅವೆನ್ಯೂ ಕಾಂಪ್ಲೆಕ್ಸ್
ಡಿವಿಜಿ ರಸ್ತೆ, ನಾಗಸಂದ್ರ ಸರ್ಕಲ್ ಬಳಿ
ಬಸವನಗುಡಿ, ಬೆಂಗಳೂರು-560004
ದೂರವಾಣಿ: 080-2660 3000

ಆರ್. ಸುಧೀಂದ್ರ ಕುಮಾರ್
9, 20ನೆಯ ಮೈನ್, 3ನೆಯ ಕ್ರಾಸ್
ವಿಜಯನಗರ 2ನೆಯ ಹಂತ
ಹಂಪಿ ಸರ್ಕಲ್ ಹತ್ತಿರ, ಮೈಸೂರು-570017
ಮೊಬೈಲ್: 8892626269

ಸ್ವಾನ್ ಪ್ರಿಂಟರ್ಸ್
svanprint@gmail.com
☎ 080-26742233

ಸಮಾಜಮುಖಿ ಕವಿ ಕುವೆಂಪು

ಕನ್ನಡ ಕಾವ್ಯಲೋಕದ ಧ್ರುವತಾರೆಯಾಗಿ ಉಳಿದಿರುವ ಕುವೆಂಪು ಅವರ ವ್ಯಕ್ತಿತ್ವ ಮತ್ತು ಕೃತಿಗಳನ್ನು ಕುರಿತು ಅನೇಕ ಗ್ರಂಥಗಳು ಪ್ರಕಟವಾಗಿವೆ. ಇನ್ನೂ ಪ್ರಕಟವಾಗುತ್ತಲೇ ಇವೆ. ಅದಕ್ಕೆ ಕಾರಣ ಕುವೆಂಪು ಹುಟ್ಟು ಕವಿ, ಸಹಜ ಕವಿ.

ತಮ್ಮ ಹದಿನೆಂಟರ ವಯಸ್ಸಿಗೇ 'ಬಿಗಿನರ್ಸ್ ಮ್ಯೂಸ್' ಎಂಬ ಇಂಗ್ಲೀಷ್ ಕವಿತೆಗಳನ್ನು ಪ್ರಕಟಿಸಿದರು. ಇಪ್ಪತ್ತನಾಲ್ಕು ಆಗುವಷ್ಟರಲ್ಲಿ ವಿದ್ಯಾರ್ಥಿ ಕವಿ ಸಮ್ಮೇಳನದ ಅಧ್ಯಕ್ಷರಾಗಿಬಿಟ್ಟರು. ಇಪ್ಪತ್ತಾರಕ್ಕೆ ಮೊದಲ ಕವನ ಸಂಕಲನ 'ಕೊಳಲು' ಪ್ರಕಟವಾಯಿತು. ಇಪ್ಪತ್ತೊಂಬತ್ತಕ್ಕೆ ಹುಬ್ಬಳ್ಳಿಯಲ್ಲಿ ನಡೆದ ಕನ್ನಡ ಸಾಹಿತ್ಯ ಸಮ್ಮೇಳನದ ಕವಿ ಗೋಷ್ಠಿ ಅಧ್ಯಕ್ಷತೆಯ ಪಟ್ಟ ದೊರಕಿಬಿಟ್ಟಿತು. ಹಾಗೆಯೆ ಜ್ಞಾನಪೀಠದ ಕಿರೀಟವೂ ತ್ವರಿತಗತಿಯಲ್ಲಿಯೇ ಅಂದರೆ ಅವರ ೬೨ ನೆಯ ವಯಸ್ಸಿಗೆ ಮುಡಿಗೇರಿತು.

ಇದನ್ನು ಯಾಕೆ ಹೇಳಬೇಕಾಯಿತೆಂದರೆ ಭಾರತದ ಅಂದಿನ ಸಾಮಾಜಿಕ ಸಂದರ್ಭದಲ್ಲಿ ಇದ್ದಕ್ಕಿದ್ದಂತೆ ಬಿರುಗಾಳಿಯಂತೆ ಎದ್ದವರು ಕುವೆಂಪು. ಅದುವರೆವಿಗೂ ಓದು ಬರಹದಿಂದ ವಂಚಿತರಾಗಿದ್ದ ಸಮುದಾಯದಿಂದ ಬಂದು ಜಾತಿನಿಷ್ಠುರ ಮಧ್ಯೆ ವಿದ್ಯೆ ಪಡೆಯುವುದೇ ಕಷ್ಟವಾಗಿದ್ದ ಕಾಲದಲ್ಲಿ ಕುವೆಂಪು ಕಲ್ಪವೃಕ್ಷದಂತೆ ಏಕಾಂಗಿಯಾಗಿ ಮೇಲೆದ್ದರು. ಬರದೇ ಬರೆದರು.

ಶತಶತಮಾನಗಳ ಕಾಲ ಅದುಮಿಟ್ಟ ರೊಚ್ಚು ಅವರನ್ನು ಬಡಿದೆಬ್ಬಿಸಿತು. ಆದರೂ ಸ್ಫೋಟಗೊಳ್ಳಲಿಲ್ಲ. ತಮ್ಮ ಧೀಮಂತ ವ್ಯಕ್ತಿತ್ವಕ್ಕೆ ಚ್ಯುತಿ ಬಾರದಂತೆ ಬರೆದರು. ತಮ್ಮನ್ನು ಕವಿಯೇ ಅಲ್ಲ ಎನ್ನುವವರು ಆಸುಪಾಸಿನಲ್ಲೇ ಇದ್ದರೂ ಧೃತಿಗೆಡಲಿಲ್ಲ. ಚಾತುರ್ವರ್ಣ್ಯವನ್ನು ಭೇದಿಸಿ ಶೂದ್ರಲೋಕವನ್ನು ಅನಾವರಣ ಗೊಳಿಸಿದರು. ಇಂದಿನ ದಲಿತ–ಬಂಡಾಯ ಸಾಹಿತ್ಯಕ್ಕೆ ಅವರೇ ಮೇಲ್ಪಂಕ್ತಿಯನ್ನು ಹಾಕಿಕೊಟ್ಟರು.

'ಕುವೆಂಪು ಕವನಗಳ ಓದು' ಕೃತಿಯಲ್ಲಿ ಕವನಗಳ ಆಯ್ಕೆ ನನ್ನಲ್ಲಿ ಕುತೂಹಲವನ್ನು ಉಂಟುಮಾಡಿದೆ. ಮಿತ್ರರಾದ ಸಿ.ಪಿ.ನಾಗರಾಜ ಅವರು ಈ ಹಿಂದೆ ಬಸವಣ್ಣ, ಅಲ್ಲಮ, ಸರ್ವಜ್ಞ ಮುಂತಾದವರ ವಚನಗಳ ವಿಶ್ಲೇಷಣೆಯುಳ್ಳ ಕೃತಿಗಳನ್ನು ನೀಡಿದ್ದಾರೆ. ಅಲ್ಲಿಯೂ ಸಾಮಾಜಿಕ ಸ್ವಾಸ್ಥ್ಯವನ್ನು ಹೇಳುವ ವಚನಗಳನ್ನೇ ಹೆಕ್ಕಿ ತೆಗೆದು ವಿಶ್ಲೇಷಿಸಿದ್ದಾರೆ.

ಇಲ್ಲಿಯೂ ಸಹ ಕುವೆಂಪು ಅವರ ಸಾಮಾಜಿಕ ಕಳಕಳಿಯುಳ್ಳ ಕವಿತೆಗಳನ್ನೇ ಹೊರತೆಗೆದಿದ್ದಾರೆ. ಅವರ ಉದ್ದೇಶ ಓದುಗರಲ್ಲಿ ವೈಚಾರಿಕತೆಯನ್ನು ಉದ್ದೀಪಿಸುವುದು ಮತ್ತು ಗುರಿ ಯುವ ಮನಸ್ಸುಗಳನ್ನು ಅಂದರೆ ವಿದ್ಯಾರ್ಥಿಗಳನ್ನು ಮುಟ್ಟುವುದು. ಆದ್ದರಿಂದ ಸೀಮಿತವಾದರೂ ಒಂದು ಘನ ಉದ್ದೇಶದೊಂದಿಗೆ ಈ ಕೃತಿ ರೂಪು ಪಡೆದಿದೆ ಎನ್ನಬಹುದು.

ಕುವೆಂಪು ಪ್ರಾರಂಭದಲ್ಲಿ ರಚಿಸಿದ ಅನೇಕ ಕವಿತೆಗಳು ವೈಚಾರಿಕತೆಯ ನಿಕಷಕ್ಕೊಡ್ಡಿರುವ ರಚನೆಗಳು. ಅಂತಹ ೧೩ ಕವಿತೆಗಳನ್ನು ಇಲ್ಲಿ ಆರಿಸಿಕೊಳ್ಳಲಾಗಿದೆ. ಜೊತೆಗೆ ಎರಡು ಅನುವಾದಗಳೂ ಇವೆ. ವಿಪುಲವಾದ ಅವರ ಕಾವ್ಯ ಸೃಷ್ಟಿ ಒಂದು ಸಾವಿರ ರಚನೆಗಳಿಗೂ ಹೆಚ್ಚಾಗಿವೆ. ಅವುಗಳ ಮಧ್ಯೆ ಇವು ಸಣ್ಣ ಹನಿಗಳು ಎನಿಸಿದರೂ ಒಬ್ಬ ದಾರ್ಶನಿಕ ಕವಿಯನ್ನು ಹೀಗೆಯೆ ಬಿಡಿ ಬಿಡಿಯಾಗಿ ಓದಬೇಕು, 'ಸವಿಯ ಬೇಕು' ಎನಿಸುತ್ತದೆ.

ಕರ್ನಾಟಕಕ್ಕೆ, ಕನ್ನಡಕ್ಕೆ ಕುವೆಂಪು ಅವರ ಕೊಡುಗೆ ಅಪಾರವಾದದ್ದು. ಜಯ ಹೇ ಕರ್ನಾಟಕ ಮಾತೆ! ಅಂತಹ ನಾಡಗೀತೆಯನ್ನು, ನೇಗಿಲಯೋಗಿ ಎಂಬ ರೈತಗೀತೆಯನ್ನು ಈ ನಾಡಿಗೆ ಕೊಡಮಾಡಿದ್ದಾರೆ. ಅವರ ವಿಶ್ವಮಾನವ ಗೀತೆಯಾದ 'ಅನಿಕೇತನ' ಕನ್ನಡಿಗರ ಹೃನ್ಮನದಲ್ಲಿ ಚಿರಸ್ಥಾಯಿಯಾಗಿದೆ. ಆಧುನಿಕ ಕನ್ನಡ ಕಾವ್ಯದ ಸಂದರ್ಭದಲ್ಲಿ ಪರಂಪರೆಯನ್ನು ಪ್ರಶ್ನಿಸಿದ ಮೊದಲ ಕವಿ ಕುವೆಂಪು ಎಂದರೆ ಉತ್ಪ್ರೇಕ್ಷೆಯಾಗಲಾರದು. ಧರ್ಮ, ದೇವರುಗಳ ಆಡುಂಬೊಲವಾದ, ಸಂಸ್ಕೃತಿಯ ಪೋಷಾಕಿನಲ್ಲಿ ಮೌಢ್ಯಾಚರಣೆಯೇ ಪ್ರಧಾನವಾಗಿದ್ದ ಸಮಾಜದಲ್ಲಿ ಪಟ್ಟಭದ್ರರ ಎದುರು ನಿಂತು ಗಟ್ಟಿ ದನಿಯಲ್ಲಿ ಪ್ರಶ್ನಿಸಿದರು.

'ಸಗ್ಗದ ಬಾಗಿಲು ಎಲ್ಲಿಹುದಣ್ಣಾ/ ನುಗ್ಗಿದೆನೆಲ್ಲಿಯು ಸಿಗಲಿಲ್ಲಣ್ಣಾ/ ಕಾಶಿಗೆ ಹೋದೆನು ಅಲ್ಲಿಲ್ಲಣ್ಣಾ/ ಮುಳುಗಿದೆ ಗಂಗೆಯೊಳಲ್ಲಿಲ್ಲಣ್ಣಾ' ಎಂದು ಪುರೋಹಿತಶಾಹಿಯ ವಿರುದ್ಧ ಗುಡುಗಿದರು. 'ಇಂದಿನ ದೇವರು' ಕವಿತೆಯಲ್ಲಿ

'ನೂರು ದೇವರನೆಲ್ಲ ನೂಕಾಚೆ ದೂರ' ಎಂದರಲ್ಲದೆ, 'ಸತ್ತ ಕಲ್ಗಳ ಮುಂದೆ ಅತ್ತು ಕರೆದುದು ಸಾಕು/ ಜೀವದಾತೆಯನಿಂದು ಕೂಗಬೇಕು' ಎಂದು ಹೇಳಿದರು.

ಸ್ವಾತಂತ್ರ್ಯಪೂರ್ವದ ಭಾರತವನ್ನು ಕಂಡು ಅನುಭವಿಸಿದ್ದ ಕವಿಗೆ ನಂತರದ ವಿದ್ಯಮಾನಗಳನ್ನು ನೋಡಿ ಹತಾಶೆ ಕಾಡಿರಬೇಕು. 'ಕತ್ತಿ ಪರದೇಶಿಯಾದರೆ ಮಾತ್ರ ನೋವೆ/ ನಮ್ಮವರೆ ಹದಹಾಕಿ ತಿವಿದರದು ಹೂವೆ' ಎಂದು ಕೇಳಿದರು. 'ಯಾವ ಕಾಲದ ಶಾಸ್ತ್ರವೇನು ಹೇಳಿದರೇನು/ ಎದೆಯ ದನಿಗೂ ಮಿಗಿಲು ಶಾಸ್ತ್ರವಿಹುದೇನು' ಎಂದು ಶಾಸ್ತ್ರವನ್ನೆ ಕೆಣಕಿದರು.

'ಗುಡಿ ಚರ್ಚು ಮಸಜೀದಿಗಳ ಬಿಟ್ಟು ಹೊರಬನ್ನಿ/ ಬಡತನವ ಬುಡಮಟ್ಟ ಕೀಳಬನ್ನಿ' ಎಂದು ಕರೆಕೊಡುವುದು ಅಂದಿನ ಕಾಲದಲ್ಲಿ ಸುಲಭದ ಮಾತಾಗಿರಲಿಲ್ಲ. 'ಆ ಮತದ ಈ ಮತದ ಹಳೆಮತದ ಸಹವಾಸ/ ಸಾಕಿನ್ನು ಸೇರಿರೈ ಮನುಜ ಮತಕೆ/ ಓ ಬನ್ನಿ ಸೋದರರೆ ವಿಶ್ವಪಥಕೆ' ಎಂದು ಆಹ್ವಾನವಿತ್ತರು. ವಿಶ್ವಪಥವೆಂದರೆ ಜಾತಿ, ಮತ, ದೇವರುಗಳ ನೆಲೆಯಿಂದ ನಿಸರ್ಗದ ನೆಲೆಗೆ ಹೊರಳುವುದು. ಹೀಗೆ ಸರ್ವರಿಗೂ ಸಮ ಬಾಳು, ಸರ್ವರಿಗೂ ಸಮ ಪಾಲು ಎಂಬ ಆಶಯವನ್ನು ಬಿತ್ತುತ್ತಾ ಅನ್ನ, ಅಕ್ಷರಗಳಿಂದ ವಂಚಿತರಾದ ಕೆಳಸ್ತರದ ಜನವರ್ಗಕ್ಕೆ ದಾರಿದೀಪವಾದರು.

ಲೇಖಕರು ಇಲ್ಲಿ ಅಳವಡಿಸಿಕೊಂಡಿರುವ ವಿಧಾನಶಾಸ್ತ್ರ ನನಗೆ ಮೆಚ್ಚುಗೆ ಯಾಯಿತು. ಕವಿತೆ, ಕವಿತೆಯ ಆಶಯ, ಕವಿತೆಯ ಪ್ರತಿಯೊಂದು ಚರಣಕ್ಕೂ ವಿಶ್ಲೇಷಣೆ ಮತ್ತು ಪದ ನಿರುಕ್ತಿಗಳನ್ನು ಸವಿಸ್ತಾರವಾಗಿಯೆ ನೀಡಲಾಗಿದೆ. ಇದು ಹೊಸದಾಗಿ ಕಾವ್ಯ ಪ್ರವೇಶ ಮಾಡುವವರಿಗೂ ಅನುಕೂಲಕರವಾಗಿದೆ. ಇಂತಹ ಉಪಯುಕ್ತ ಗ್ರಂಥವನ್ನು ಕನ್ನಡಕ್ಕೆ ನೀಡಿದ ಪ್ರೊ. ಸಿ.ಪಿ.ನಾಗರಾಜ ಅವರನ್ನು ಮನಸಾರೆ ಅಭಿನಂದಿಸುತ್ತೇನೆ.

ದಿ. ೨-೧೨-೨೦೨೧ ಡಾ. ಮೂಡ್ನಾಕೂಡು ಚಿನ್ನಸ್ವಾಮಿ

ಬೆಂಗಳೂರು-೫೬೦೦೯೮

ಕುವೆಂಪು ಕವನಗಳ ಓದಿಗೆ ನೆರವಾದ ಪುಸ್ತಕಗಳು

ಕುವೆಂಪು ಸಮಗ್ರ ಕಾವ್ಯ : ಸಂಪುಟ-೧
ಕುವೆಂಪು ಸಮಗ್ರ ಕಾವ್ಯ : ಸಂಪುಟ-೨

ಸಂಯೋಜಕ ಸಂಪಾದಕ
ಡಾ. ಕೆ.ಸಿ.ಶಿವಾರೆಡ್ಡಿ

ಪ್ರಸಾರಾಂಗ
ಕನ್ನಡ ವಿಶ್ವವಿದ್ಯಾಲಯ
ಹಂಪಿ, ವಿದ್ಯಾರಣ್ಯ ೫೮೩೨೭೬
ಪ್ರಥಮ ಮುದ್ರಣ: ೨೦೦೦

ನನ್ನ ನುಡಿ

ಕುವೆಂಪು ಅವರ ಕವನಗಳನ್ನು ಓದುತ್ತಿದ್ದಾಗ, ನನಗೆ ಮೆಚ್ಚುಗೆಯಾದ ಕೆಲವು ಕವನಗಳನ್ನು ಓದುಗರ ಗಮನಕ್ಕೆ ತರಬೇಕೆಂಬ ಆಸೆಯಾಯಿತು.ಕುವೆಂಪು ಅವರ ಕವನಗಳನ್ನು ಮೊದಲ ಬಾರಿ ಓದುವವರಿಗೆ ನೆರವಾಗಲೆಂಬ ಉದ್ದೇಶದಿಂದ ಕವನದಲ್ಲಿ ಜತೆಗೂಡಿರುವ ಪದಗಳನ್ನು ಬಿಡಿಸಿ ಬರೆದು, ಪದಗಳ ತಿರುಳನ್ನು ತಿಳಿಸಿ ಬರೆದ ಬರಹವನ್ನು ಗುರುಗಳಾದ ಕೆ.ವಿ.ನಾರಾಯಣ ಅವರಿಗೆ ತೋರಿಸಿದೆನು. ಅದನ್ನು ನೋಡಿದ ಅವರು "ಹೊಸ ತಲೆಮಾರಿನ ಓದುಗರಿಗೆ ಈ ರೀತಿಯ ಬರಹ ಉಪಯೋಗಕ್ಕೆ ಬರಬಹುದು. ಇದನ್ನು ಮುಂದುವರಿಸಿ." ಎಂದು ಸಲಹೆಯನ್ನು ನೀಡಿ, ನನ್ನ ಬರವಣಿಗೆಗೆ ಮಾರ್ಗದರ್ಶನ ನೀಡಿದರು.

ಬರಹವನ್ನು ಹೊನಲು ಮಿಂದಾಣಕ್ಕೆ(honalu.net) ಕಳುಹಿಸಿದೆನು. ಹೊನಲು ಮಿಂದಾಣದ ಸಂಪಾದಕ ವರ್ಗದವರು ಹದಿನೇಳು ಕಂತುಗಳಲ್ಲಿ ಕವನಗಳನ್ನು ಪ್ರಕಟಿಸಿದರು. ಹೊನಲಿನಲ್ಲಿ ಮೂಡಿ ಬಂದ ಬರಹಕ್ಕೆ ಹೊನಲು ಮಿಂದಾಣದ ಓದುಗ ಬಳಗದವರು ಮೆಚ್ಚುಗೆಯನ್ನು ಸೂಚಿಸಿದರು. ಈ ರೀತಿ ಬರಹ ರೂಪುಗೊಳ್ಳಲು ಗುರುಗಳಾದ ಕೆ.ವಿ.ನಾರಾಯಣ ಅವರ ಮಾರ್ಗದರ್ಶನ, ಹೊನಲು ಮಿಂದಾಣದ ಸಂಪಾದಕ ವರ್ಗ ಮತ್ತು ಓದುಗರು ನೀಡಿದ ಉತ್ತೇಜನವೇ ಕಾರಣವಾಗಿದೆ.

ಈ ಬರಹದ ಕರಡು ಪ್ರತಿಯನ್ನು ನನ್ನ ಗುರುಹಿರಿಯರಿಗೆ ಮತ್ತು ಗೆಳೆಯರಿಗೆ ಅಂಚೆ ಮೂಲಕ ಕಳುಹಿಸಿದ್ದೆನು. ಅವರೆಲ್ಲರೂ ಓದಿ ನೋಡಿ ಮೆಚ್ಚುಗೆಯ ನುಡಿಗಳನ್ನಾಡಿದ್ದಾರೆ. ನನ್ನೆಲ್ಲಾ ಬರಹದ ಮೊದಲ ಓದುಗಳಾಗಿ ನನ್ನ ಹೆಂಡತಿ ಗಾಯತ್ರಿ ತನ್ನ ಅನಿಸಿಕೆಗಳನ್ನು ತಿಳಿಸಿದ್ದಾಳೆ.

"ಒಬ್ಬ ಕವಿಯ ಬಗ್ಗೆ ಮತ್ತೊಬ್ಬ ಕವಿಯ ಪ್ರತಿಕ್ರಿಯೆಯು ಹೇಗಿರುತ್ತದೆ" ಎಂಬುದನ್ನು ತಿಳಿಯಬೇಕೆಂಬ ಕುತೂಹಲದಿಂದ ಗೆಳೆಯರಾದ ಮೂಡ್ನಾಕೂಡು

ಚೆನ್ನಸ್ವಾಮಿಯವರನ್ನು "ಕುವೆಂಪು ಕವನಗಳ ಓದು" ಬರಹಕ್ಕೆ ಮುನ್ನುಡಿಯನ್ನು ಬರೆದುಕೊಡಬೇಕೆಂದು ಕೇಳಿಕೊಂಡೆನು. ಅವರು ಪ್ರೀತಿಯಿಂದ ಮುನ್ನುಡಿಯನ್ನು ಬರೆದುಕೊಟ್ಟಿದ್ದಾರೆ.

ಗುರು ಸಮಾನರಾದ ಡಿ.ಎನ್.ಶಂಕರ ಬಟ್ ಅವರು ಕನ್ನಡ ಬರಹದಲ್ಲಿ ಬಳಸಬೇಕಾದ ಲಿಪಿಗಳ ಬಗ್ಗೆ ಹೇಳಿರುವ ಸಂಗತಿಗಳನ್ನು ಕವನಗಳಿಗೆ ಟಿಪ್ಪಣಿಯನ್ನು ಬರೆಯುವಾಗ ಗಮನದಲ್ಲಿಟ್ಟುಕೊಂಡಿದ್ದೇನೆ.

ಕೆ.ಸಿ.ಶಿವಾರೆಡ್ಡಿ ಅವರ ಸಂಯೋಜಕ ಸಂಪಾದಕತ್ವದಲ್ಲಿ ಹಂಪಿಯ ಕನ್ನಡ ವಿಶ್ವವಿದ್ಯಾಲಯ ಪ್ರಕಟಿಸಿರುವ ಕುವೆಂಪು ಸಮಗ್ರ ಕಾವ್ಯ ಸಂಪುಟ-೧ ಮತ್ತು ಸಂಪುಟ-೨ ರಿಂದ ಕವನಗಳನ್ನು ಆಯ್ದುಕೊಂಡಿದ್ದೇನೆ.

ಕುವೆಂಪು ಕವನಗಳ ಓದಿಗೆ ನೆರವಾದ ಮೇಲ್ಕಂಡ ಎಲ್ಲಾ ಗುರು ಹಿರಿಯರಿಗೆ, ಗೆಳೆಯರಿಗೆ ಮತ್ತು ಸಂಪಾದಕ ವರ್ಗದವರಿಗೆ ನನ್ನ ವಂದನೆಗಳನ್ನು ಸಲ್ಲಿಸುತ್ತೇನೆ.

ಸಿ ಪಿ ನಾಗರಾಜ

ಕುವೆಂಪು (ಕ್ರಿ.ಶ. ೧೯೦೪-೧೯೯೪)

ಹೆಸರು: ಕುಪ್ಪಳಿ ವೆಂಕಟಪ್ಪಗೌಡ ಪುಟ್ಟಪ್ಪ

ತಾಯಿ: ಸೀತಮ್ಮ, ಹಿರೇಕೊಡಿಗೆ, ಕೊಪ್ಪ ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ.

ತಂದೆ: ವೆಂಕಟಪ್ಪಗೌಡ, ಕುಪ್ಪಳಿ, ತೀರ್ಥಹಳ್ಳಿ ತಾಲ್ಲೂಕು, ಶಿವಮೊಗ್ಗ ಜಿಲ್ಲೆ.

ವಿದ್ಯೆ: ಎಂ.ಎ., ಕನ್ನಡ

ಉದ್ಯೋಗ: ೧೯೨೯ ರಿಂದ ೧೯೬೦

ಕನ್ನಡ ಅಧ್ಯಾಪಕರು, ಮಹಾರಾಜ ಕಾಲೇಜು, ಮೈಸೂರು

ಕನ್ನಡ ಅಧ್ಯಾಪಕರು, ಸೆಂಟ್ರಲ್ ಕಾಲೇಜು, ಬೆಂಗಳೂರು

ಪ್ರಿನ್ಸಿಪಾಲರು, ಮಹಾರಾಜ ಕಾಲೇಜು, ಮೈಸೂರು

ಉಪ ಕುಲಪತಿಗಳು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು

ಬರಹ

ಸಮಗ್ರ ಕಾವ್ಯ ಸಂಪುಟ-೧

ಕೊಳಲು--ಪಾಂಚಜನ್ಯ--ಕಲಾಸುಂದರಿ--ನವಿಲು--ಕೋಗಿಲೆ ಮತ್ತು ಸೋವಿಯಟ್ ರಷ್ಯಾ--ಕೃತ್ತಿಕೆ--ಅಗ್ನಿಹಂಸ--ಪಕ್ಷಿಕಾಶಿ--ಕಿಂಕಿಣಿ--ಪ್ರೇಮ ಕಾಶ್ಮೀರ--ಷೋಡಶಿ--ಜೇನಾಗುವ.

ಸಮಗ್ರ ಕಾವ್ಯ ಸಂಪುಟ--೨

ಚಂದ್ರಮಂಚಕೆ ಬಾ ಚಕೋರಿ--ಇಕ್ಷುಗಂಗೋತ್ರಿ--ಅನಿಕೇತನ--ಅನುತ್ತರಾ--ಮಂತ್ರಾಕ್ಷತೆ--ಕದರಡಕೆ--ಪ್ರೇತ ಕ್ಯೂ--ಕುಟೀಚಕ--ಹೊನ್ನ ಹೊತ್ತಾರೆ--ಕಥನ ಕವನಗಳು--ಅಮಲನ ಕಥೆ--ಬೊಮ್ಮನಹಳ್ಳಿಯ ಕಿಂದರಿ ಜೋಗಿ--ಹಾಳೂರು--ನನ್ನ ಮನೆ—ಮರಿ ವಿಜ್ಞಾನಿ—ಮೇಘಪುರ—ಸಮುದ್ರಲಂಘನ——ಮಹಾದರ್ಶನ ಮತ್ತು ಪ್ರಾಯಶ್ಚಿತ್ತ--ಕೊನೆಯ ತೆನೆ ಮತ್ತು ವಿಶ್ವಮಾನವ ಗೀತೆ.

ಖಂಡ ಕಾವ್ಯ: ಚಿತ್ರಾಂಗದ

ಮಹಾ ಕಾವ್ಯ: ಶ್ರೀ ರಾಮಾಯಣ ದರ್ಶನಂ

ನಾಟಕ: ಮೋಡಣ್ಣನ ತಮ್ಮ--ಯಮನ ಸೋಲು--ಜಲಗಾರ--ನನ್ನ ಗೋಪಾಲ--ಬಿರುಗಾಳಿ--ಮಹಾರಾತ್ರಿ--ಶ್ಮಶಾನ ಕುರುಕ್ಷೇತ್ರಂ--ವಾಲ್ಮೀಕಿಯ ಭಾಗ್ಯ--ರಕ್ತಾಕ್ಷಿ---ಶೂದ್ರ ತಪಸ್ವಿ--ಬೆರಳ್ ಗೆ ಕೊರಳ್--ಬಲಿದಾನ--ಚಂದ್ರಹಾಸ--ಕಾನೀನ.

ಕಥಾ ಸಂಕಲನ: ಸಂನ್ಯಾಸಿ ಮತ್ತು ಇತರ ಕಥೆಗಳು--ನನ್ನ ದೇವರು ಮತ್ತು ಇತರ ಕಥೆಗಳು--ಕಥೆಗಳೊಡನೆ ಆರಂಭದಲ್ಲಿ--ನರಿಗಳಿಗೇಕೆ ಕೋಡಿಲ್ಲ

ಗದ್ಯ ಚಿತ್ರಗಳ ಸಂಕಲನ: ಮಲೆನಾಡಿನ ಚಿತ್ರಗಳು

ಕಾದಂಬರಿ: ಕಾನೂರು ಹೆಗ್ಗಡತಿ--ಮಲೆಗಳಲ್ಲಿ ಮದುಮಗಳು

ಜೀವನ ಚರಿತ್ರೆ: ಸ್ವಾಮಿ ವಿವೇಕಾನಂದ--ಶ್ರೀ ರಾಮಕೃಷ್ಣ ಪರಮಹಂಸ

ಆತ್ಮ ಚರಿತ್ರೆ: ನೆನಪಿನ ದೋಣಿಯಲ್ಲಿ

ಸಾಹಿತ್ಯ ವಿಮರ್ಶೆ: ಕಾವ್ಯ ವಿಹಾರ--ತಪೋನಂದನ--ವಿಭೂತಿ ಪೂಜೆ--ದ್ರೌಪದಿಯ ಶ್ರೀಮುಡಿ

ಕಾವ್ಯ ಮೀಮಾಂಸೆ: ರಸೋ ವೈ ಸಃ--ದಾರ್ಶನಿಕ ಕಾವ್ಯ ಮೀಮಾಂಸೆ

ಭಾಷಣಗಳ ಸಂಗ್ರಹ: ಸಾಹಿತ್ಯ ಪ್ರಚಾರ-ಆತ್ಮಶ್ರೀಗಾಗಿ ನಿರಂಕುಶಮತಿಗಳಾಗಿ--ಕುಲಪತಿ ಭಾಷಣಗಳ ಆಯ್ದ ಭಾಗಗಳು--ಷಷ್ಠಿ ನಮನ-ಶ್ರೀ ಕುವೆಂಪು ಭಾಷಣಗಳು ಬಿನ್ನವತ್ತಳೆಗಳು-ಮನುಜಮತ ವಿಶ್ವಪಥ--ವಿಚಾರ ಕ್ರಾಂತಿಗೆ ಆಹ್ವಾನ--ರಾಷ್ಟ್ರಕವಿ ಭಾಷಣಗಳು--ಜನತಾ ಪ್ರಜ್ಞೆ ಮತ್ತು ವೈಚಾರಿಕ ಜಾಗೃತಿ.

ಇತರ ಬರಹ: ಮುನ್ನುಡಿ ತೋರಣ--ಕುವೆಂಪು ಪತ್ರಗಳು--ಶ್ರೀ ರಾಮಕೃಷ್ಣ ವಚನವೇದ ನುಡಿ ನಮನ

ಭಾಷಾಂತರ: ವಿವೇಕವಾಣಿ--ವೇದಾಂತ--ಜನಪ್ರಿಯ ವಾಲ್ಮೀಕಿ ರಾಮಾಯಣ--ಗುರುವಿನೊಡನೆ ದೇವರಡಿಗೆ ಭಾಗ ೧ ಮತ್ತು ಭಾಗ ೨.

ಪರಿವಿಡಿ

ಕುವೆಂಪು ಕವನಗಳ ಓದು

1. ನೇಗಿಲಯೋಗಿ

ನೇಗಿಲ ಹಿಡಿದಾ ಹೊಲದೊಳು ಹಾಡುತ
ಉಳುವಾ ಯೋಗಿಯ ನೋಡಲ್ಲಿ

ಫಲವನು ಬಯಸದ ಸೇವೆಯೆ ಪೂಜೆಯು
ಕರ್ಮವೆ ಇಹಪರ ಸಾಧನವು
ಕಷ್ಟದೊಳನ್ನವ ದುಡಿವನೆ ತ್ಯಾಗಿ
ಸೃಷ್ಟಿನಿಯಮದೊಳಗವನೇ ಭೋಗಿ

ಲೋಕದೊಳೇನೇ ನಡೆಯುತಲಿರಲಿ
ತನ್ನೀ ಕಾರ್ಯವ ಬಿಡನೆಂದೂ
ರಾಜ್ಯಗಳುದಿಸಲಿ ರಾಜ್ಯಗಳಳಿಯಲಿ
ಹಾರಲಿ ಗದ್ದುಗೆ ಮಕುಟಗಳು
ಮುತ್ತಿಗೆ ಹಾಕಲಿ ಸೈನಿಕರೆಲ್ಲ
ಬಿತ್ತುಳುವುದನವ ಬಿಡುವುದೆ ಇಲ್ಲ

ಬಾಳಿತು ನಮ್ಮೀ ನಾಗರಿಕತೆ ಸಿರಿ
ಮಣ್ಣುಣಿ ನೇಗಿಲಿನಾಶ್ರಯದಿ
ನೇಗಿಲ ಹಿಡಿದಾ ಕೈಯಾಧಾರದಿ
ದೊರೆಗಳು ದರ್ಪದೊಳಾಳಿದರು
ನೇಗಿಲ ಬಲದೊಳು ವೀರರು ಮೆರೆದರು
ಶಿಲ್ಪಿಗಳೆಸೆದರು ಕವಿಗಳು ಬರೆದರು

ಯಾರೂ ಅರಿಯದ ನೇಗಿಲ ಯೋಗಿಯೆ
ಲೋಕಕೆ ಅನ್ನವನೀಯುವನು
ಹೆಸರನು ಬಯಸದೆ ಅತಿಸುಖಕೆಳಸದೆ
ದುಡಿವನು ಗೌರವಕಾಶಿಸದೆ

ನೇಗಿಲಕುಳದೊಳಗಡಗಿದೆ ಕರ್ಮ
ನೇಗಿಲ ಮೇಲೆಯೆ ನಿಂತಿದೆ ಧರ್ಮ.

ಜನರ ಮನಸ್ಸಿಗೆ ಅರಿವನ್ನು ನೀಡುವ ಯೋಗಿಯಂತೆಯೇ ಜನರ ಹೊಟ್ಟೆಗೆ ಅನ್ನವನ್ನು ನೀಡಿ ಮಾನವ ಸಮುದಾಯವನ್ನು ಕಾಪಾಡುತ್ತಿರುವ ಬೇಸಾಯಗಾರನನ್ನು ಕವಿಯು 'ನೇಗಿಲಯೋಗಿ' ಎಂದು ಕರೆದು, ಬೇಸಾಯಗಾರರ ದುಡಿಮೆಯಿಂದಲೇ ಜಗತ್ತು ಉಳಿದು ಬೆಳೆದು ಬಾಳುತ್ತಿರುವುದನ್ನು ಈ ಕವನದಲ್ಲಿ ಬಣ್ಣಿಸಿದ್ದಾರೆ.

(ನೇಗಿಲು=ಮಣ್ಣನ್ನು ಮೆತುಗೊಳಸಿ ಬೀಜವನ್ನು ಬಿತ್ತಲು ಮತ್ತು ಪಯಿರನ್ನು ನೆಡಲು ಹದಗೊಳಿಸುವುದಕ್ಕಾಗಿ ಭೂಮಿಯನ್ನು ಉಳುವ ಉಪಕರಣ;

ಯೋಗಿ=ತನ್ನ ಮಯ್ ಮನವನ್ನು ಹತೋಟಿಯಲ್ಲಿಟ್ಟುಕೊಂಡು, ಲೋಕದ ಒಳಿತಿಗಾಗಿ ನಿರಂತರವಾಗಿ ಚಿಂತಿಸುತ್ತ, ಜನರಿಗೆ ಒಳ್ಳೆಯ ಅರಿವನ್ನು ತಿಳಿಯ ಹೇಳುತ್ತ, ಜನಸಮುದಾಯಕ್ಕೆ ಒಳಿತನ್ನು ಮಾಡುವಂತಹ ವ್ಯಕ್ತಿ;

ಹೊಲ=ರಾಗಿ ಜೋಳ ಮುಂತಾದ ನೂರಾರು ಬಗೆಯ ಕಾಳು ಕಡ್ಡಿಗಳನ್ನು ಬೆಳೆಯುವ ಜಮೀನು; ಹಾಡು=ರಾಗಮಯವಾಗಿ ನುಡಿಗಳನ್ನು ಹೇಳುವುದು;

ಉಳುವಾ=ಉಳು+ಆ; ಉಳು=ದನಗಳ ಕೊರಳಿಗೆ ನೊಗವನ್ನು ಹೂಡಿ, ನೇಗಿಲನ್ನು ನೊಗಕ್ಕೆ ಬಿಗಿದು ಕಟ್ಟಿ, ದನಗಳನ್ನು ಮುನ್ನಡೆಸುತ್ತ ಭೂಮಿಯಲ್ಲಿ ಬಿಗಿಯಾಗಿರುವ ಮಣ್ಣನ್ನು ನೇಗಿಲಿನಿಂದ ಸೀಳಿ, ಬೆಳೆಗಳನ್ನು ಬೆಳೆಯಲು ಅನುಕೂಲವಾಗುವಂತೆ ಮಣ್ಣನ್ನು ಹದಗೊಳಿಸುವುದು; ನೋಡು+ಅಲ್ಲಿ;

ಉಳುವಾ ಯೋಗಿಯ ನೋಡಲ್ಲಿ=ಹೊಲದಲ್ಲಿ ಉಳುಮೆಯನ್ನು ಮಾಡುತ್ತಿರುವ ಆ ನೇಗಿಲಯೋಗಿಯನ್ನು ನೋಡು;

ಫಲ=ಬೆಳೆ/ಉತ್ಪತ್ತಿ/ಹುಟ್ಟುವಳಿ; ಬಯಸು=ಹಂಬಲಿಸು;

ಫಲವನು ಬಯಸದ=ಬೇಸಾಯಗಾರನು "ತನಗೆ ಇಚ್ಚೆ ಬಂದ ಪ್ರಮಾಣದಲ್ಲಿಯೇ ಬೆಳೆಯನ್ನು ಪಡೆಯುತ್ತೇನೆ" ಎಂಬ ಲೆಕ್ಕಾಚಾರವನ್ನು ಹಾಕಿಕೊಂಡು ಬೆಳೆಯನ್ನು ಒಡ್ಡಲಾಗುವುದಿಲ್ಲ. ಏಕೆಂದರೆ ಭೂಮಿಯಲ್ಲಿ ಬೆಳೆಯುವ ಬೆಳೆಯ ಪ್ರಮಾಣವು ಬೇಸಾಯಗಾರನ ದುಡಿಮೆಯ ಪರಿಶ್ರಮದ ಜತೆಗೆ ನಿಸರ್ಗದಲ್ಲಿ ನಡೆಯುವ ಆಗುಹೋಗುಗಳನ್ನು ಅವಲಂಬಿಸಿರುತ್ತದೆ. ಅಂದರೆ ಮಣ್ಣಿನ ಗುಣ, ಬಿಸಿಲು ಮಳೆ ಗಾಳಿಯಿಂದ ಕೂಡಿದ ವಾತಾವರಣವು ಬೆಳೆಗಳ ಮೇಲೆ ಪರಿಣಾಮವನ್ನು ಬೀರುತ್ತದೆ;

ಸೇವೆ=ಊಳಿಗ/ಚಾಕರಿ/ಕಸುಬು/ಕಾಯಕ; ಪೂಜೆ=ದೇವರನ್ನು ಒಲಿಸಿಕೊಳ್ಳಲೆಂದು ದೇವರ ವಿಗ್ರಹದ ಮುಂದೆ ಹೂಹಣ್ಣುಕಾಯಿಗಳನ್ನಿಟ್ಟು, ದೂಪದೀಪಗಳನ್ನು ಬೆಳಗಿಸುತ್ತ ಮಾಡುವ ಆಚರಣೆ;

ಸೇವೆಯೆ ಪೂಜೆಯು=ಮುಂಗಾರಿನ ಮಳೆಯು ಬರುವುದಕ್ಕೆ ಮೊದಲು ಹೊಲಗದ್ದೆ ತೋಟಗಳಿಗೆ ಗೊಬ್ಬರ ಗೋಡನ್ನು ಹೇರುವ; ದನಗಳ ಕೊರಳಿಗೆ ನೊಗವನ್ನು ಹೂಡಿ ಭೂಮಿಯನ್ನು ಉಳುವ; ಮಣ್ಣಿನ ಹೆಂಟೆಗಳನ್ನು ಒಡೆದು ಪುಡಿ ಮಾಡಿ ಭೂಮಿಯನ್ನು ಹದಗೊಳಿಸುವ; ಬೀಜವನ್ನು ಬಿತ್ತುವ; ಪಯಿರನ್ನು ನಾಟಿ ಮಾಡುವ; ಕಾಲಕಾಲಕ್ಕೆ ನೀರನ್ನು ಹಾಯಿಸುವ; ತೆಂಡೆಯೊಡೆದು ಬೆಳೆದಿರುವ ಸಸಿಗಳ ನಡುವೆ ಹುಟ್ಟಿಕೊಂಡಿರುವ ಕಳೆ ಗಿಡಗಳನ್ನು ಕೀಳುವ; ಬೆಳೆದ ಬೆಳೆಯನ್ನು ಕುಯ್ದು ಹೊರೆಕಟ್ಟಿ ಕಣಕ್ಕೆ ಸಾಗಿಸಿ ಒಕ್ಕಣೆ ಮಾಡುವ ಹತ್ತಾರು ಬಗೆಯ ಕೆಲಸಗಳೇ ಬೇಸಾಯಗಾರನು ಮಾಡುವ ಪೂಜೆಯಾಗಿರುತ್ತದೆ;

ಕರ್ಮ=ಕೆಲಸ/ದುಡಿಮೆ; ಇಹ=ಜೀವಜಗತ್ತು/ಪ್ರಪಂಚ; ಪರ=ಮತ್ತೊಂದು ಲೋಕ. ವ್ಯಕ್ತಿಯು ತನ್ನ ಜೀವನದಲ್ಲಿ ಇತರರಿಗೆ ಕೇಡನ್ನು ಮಾಡಿದ್ದರೆ ನರಕಲೋಕಕ್ಕೆ, ಒಳಿತನ್ನು ಮಾಡಿದ್ದರೆ ಸ್ವರ್ಗಲೋಕಕ್ಕೆ ಸತ್ತ ನಂತರ ಹೋಗುತ್ತಾನೆ ಎಂಬ ನಂಬಿಕೆಯು ಜನಮನದಲ್ಲಿದೆ; ಸಾಧನ=ಸಲಕರಣೆ/ಉಪಕರಣ;

ಕರ್ಮವೆ ಇಹಪರ ಸಾಧನವು=ನೇಗಿಲಯೋಗಿಯ ದುಡಿಮೆಯೇ ಅವನ ಪಾಲಿಗೆ ಎಲ್ಲ ರೀತಿಯಿಂದಲೂ ಒಲವು ನಲಿವು ನೆಮ್ಮದಿಯನ್ನು ಕೊಡುವುದು;

ಕಷ್ಟದೊಳ್+ಅನ್ನವ; ಕಷ್ಟ=ಸಂಕಟ/ತೊಂದರೆ; ಅನ್ನ=ಜೀವಿಗಳ ಉಳಿದು ಬೆಳೆದು ಬಾಳುವುದಕ್ಕೆ ಬೇಕಾದ ಎಲ್ಲಾ ಬಗೆಯ ಕಾಳುಕಡ್ಡಿ, ಹಣ್ಣುಕಾಯಿ, ದವಸ, ಸೊಪ್ಪುಸದೆ, ಹಾಲು ಮೊಸರು ಬೆಣ್ಣೆಯನ್ನು ಒಳಗೊಂಡ ವಸ್ತುಗಳು; ದುಡಿ=ಕೆಲಸ ಮಾಡು;

ಕಷ್ಟದೊಳಗೆ ಅನ್ನವ ದುಡಿವವನು=ಹಗಲು ಇರುಳು ಎನ್ನದೆ, ಮಳೆ ಗಾಳಿ ಬಿಸಿಲಿಗೆ ಮಯ್ಯನ್ನು ಒಡ್ಡಿ, ಬೇಸಾಯದ ಕೆಲಸಗಳನ್ನು ಮಾಡಿ ಬೆವರನ್ನು ಬಸಿಯುತ್ತ, ತಾನು ಬೆಳೆದ ಬೆಳೆಗಳಿಗೆ ಮತ್ತು ತನ್ನ ಜೀವಕ್ಕೆ ಹಾವು, ಹಕ್ಕಿ, ಕ್ರಿಮಿಕೀಟ, ಪ್ರಾಣಿಗಳಿಂದ ಹಾನಿಯುಂಟಾಗುವುದನ್ನು ಲೆಕ್ಕಿಸದೆ ಬೇಸಾಯಗಾರನು ಬೆಳೆಗಳನ್ನು ಬೆಳೆಯುತ್ತಾನೆ;

ತ್ಯಾಗ=ಇತರರ ಒಳಿತಿಗಾಗಿ ತನ್ನದೆಲ್ಲವನ್ನೂ ನೀಡುವುದು;

ತ್ಯಾಗಿ=ಬೇಸಾಯಗಾರನು ಬೆಳೆದ ಬೆಳೆಗಳಿಗೆ ಸರಿಯಾದ ಬೆಲೆ ಸಿಗದಿದ್ದಾಗ ಸಾಲಸೋಲಗಳಿಗೆ ಗುರಿಯಾಗಿ ನರಳುತ್ತಾನೆ. ತನ್ನ ಶ್ರಮದ ದುಡಿಮೆಯ ಜತೆಗೆ ತನ್ನಲ್ಲಿದ್ದ ಒಡವೆ ವಸ್ತುಗಳನ್ನು ಕಳೆದುಕೊಂಡು ಜನಸಮುದಾಯಕ್ಕೆ ಅಗತ್ಯವಾದ ಅನ್ನವನ್ನು ಕೊಡುಗೆಯಾಗಿ ನೀಡುತ್ತಾನೆ;

ಸೃಷ್ಟಿನಿಯಮ+ಒಳಗೆ+ಅವನೆ; ಸೃಷ್ಟಿ=ಜಗತ್ತು/ಪ್ರಪಂಚ; ನಿಯಮ=ಕಟ್ಟುಕಟ್ಟಲೆ; ಭೋಗಿ=ಒಲವು ನಲಿವು ನೆಮ್ಮದಿಯಿಂದ ಬಾಳುವವನು;

ಸೃಷ್ಟಿನಿಯಮದೊಳಗವನೇ ಭೋಗಿ=ನಿಸರ್ಗದ ಮಡಿಲಿನಲ್ಲಿ ಬೇಸಾಯವನ್ನು ಮಾಡುತ್ತ, ಸರಳವಾದ ರೀತಿಯಲ್ಲಿಯೇ ಆನಂದವನ್ನು ಪಡೆಯುತ್ತಾನೆ;

ಲೋಕದೊಳ್+ಏನೇ; ಲೋಕ=ಪ್ರಪಂಚ; ಏನೇ=ಯಾವುದೇ ಬಗೆಯ;

ಲೋಕದೊಳೇನೇ ನಡೆಯುತಲಿರಲಿ=ಪ್ರಪಂಚದಲ್ಲಿ ಯಾವುದೇ ಬಗೆಯ ಪ್ರಸಂಗಗಳು ನಡೆಯುತ್ತಿದ್ದರೂ, ಅಂದರೆ ನಿಸರ್ಗದಲ್ಲಿ ಏರುಪೇರು ಉಂಟಾದರೂ ಇಲ್ಲವೇ ಮಾನವ ಸಮುದಾಯದ ಜೀವನದಲ್ಲಿ ಒಳಿತು ಕೆಡುಕು ಉಂಟಾದರೂ;

ತನ್ನೀ=ತನ್ನ+ಈ; ಕಾರ್ಯವ=ಕೆಲಸವನ್ನು; ಬಿಡನ್+ಎಂದೂ; ಎಂದೂ= ಯಾವಾಗಲೂ;

ತನ್ನೀ ಕಾರ್ಯವ ಬಿಡನೆಂದು=ಯಾವೊಂದು ದಿನವೂ ಬೇಸಾಯದ ಕೆಲಸಗಳನ್ನು ನಿಲ್ಲಿಸುವುದಿಲ್ಲ. ಹೊಲಗದ್ದೆ ತೋಟಗಳಲ್ಲಿ ಒಂದಲ್ಲ ಒಂದು ಬಗೆಯ ಕೆಲಸ ನಡೆಯುತ್ತಲೇ ಇರುತ್ತದೆ;

ರಾಜ್ಯಗಳ್+ಉದಿಸಲಿ; ರಾಜ್ಯ=ರಾಜನೊಬ್ಬನ ಆಳ್ವಿಕೆಗೆ ಒಳಪಟ್ಟ ನಾಡು; ಉದಿಸು=ಹುಟ್ಟುವುದು; ರಾಜ್ಯಗಳ್+ಅಳಿಯಲಿ; ಅಳಿ=ನಾಶವಾಗುವುದು; ಹಾರು=ಇಲ್ಲವಾಗು; ಗದ್ದುಗೆ=ಸಿಂಹಾಸನ; ಮಕುಟ=ಕಿರೀಟ; ಮುತ್ತಿಗೆ=ಆಕ್ರಮಣ; ಸೈನಿಕರ್+ಎಲ್ಲ; ಸೈನಿಕ=ರಾಜನನ್ನು ಮತ್ತು ರಾಜ್ಯವನ್ನು ಕಾಪಾಡುವ ಹೊಣೆಯನ್ನು ಹೊತ್ತವನು;

ರಾಜ್ಯಗಳುದಿಸಲಿ ರಾಜ್ಯಗಳಳಿಯಲಿ ಹಾರಲಿ ಗದ್ದುಗೆ ಮಕುಟಗಳು=ಹೊಸ ರಾಜ್ಯಗಳು ಹುಟ್ಟಲಿ ಇಲ್ಲವೇ ಇರುವ ರಾಜ್ಯಗಳು ನಾಶಗೊಳ್ಳಲಿ; ರಾಜನು ಸಿಂಹಾಸನದಿಂದ ಹೊರಬಿದ್ದು, ಕಿರೀಟ ಕಳಚಿಬಿದ್ದರೂ ಅಂದರೆ ರಾಜನು ಆಡಳಿತವನ್ನು ಮಾಡುವ ಹಕ್ಕನ್ನು ಕಳೆದುಕೊಂಡರೂ;

ಬಿತ್ತು+ಉಳುವುದನು+ಅವ; ಬಿತ್ತು=ಬೀಜವನ್ನು ಹಾಕು/ಪಯಿರನ್ನು ನೆಡು; ಅವ=ಅವನು; ಬಿಡುವುದೆ ಇಲ್ಲ=ಬೇಸಾಯದ ಕೆಲಸಗಳನ್ನು ಮಾಡದೆ ಇರುವುದಿಲ್ಲ.

ಬಿತ್ತುಳುವುದನವ ಬಿಡುವುದೆ ಇಲ್ಲ=ನಾನಾ ರೀತಿಯ ದುಡಿಮೆಯನ್ನು ವರುಶದ ಉದ್ದಕ್ಕೂ ಮಾಡುತ್ತಲೇ ಇರುವ ನೇಗಿಲಯೋಗಿಯು ದುಡಿಮೆಯನ್ನು ಮಾಡದೇ ಇರಲು ಆಗುವುದೇ ಇಲ್ಲ. ಏಕೆಂದರೆ ಬೇಸಾಯವು ಹೊಲಗದ್ದೆತೋಟಗಳ ಮಣ್ಣಿನ ಗುಣ, ಉರಿಯುವ ಸೂರ್ಯ; ಸುರಿಯುವ ಮಳೆ; ಬೀಸುವ ಗಾಳಿಯಿಂದ ಕೂಡಿದ ನಿಸರ್ಗದ ವಾತಾವರಣವನ್ನು ಅವಲಂಬಿಸಿದೆ. ಮಳೆಗಾಲ, ಚಳಿಗಾಲ ಮತ್ತು ಬೇಸಿಗೆಕಾಲಗಳಲ್ಲಿ ಮಾಡಬೇಕಾದ ಬೇಸಾಯದ ಕೆಲಸಗಳನ್ನು ಕಾಲಕ್ಕೆ ತಕ್ಕಂತೆ ಮಾಡದಿದ್ದರೆ ಒಡ್ಡಿದ ಬೆಳೆ ಹಾಳಾಗುತ್ತದೆ. ಹದ ನೋಡಿ ಆರಂಬ ಮಾಡಿದಿದ್ದರೆ ನೆಟ್ಟ ಬೀಜ ಮೊಳಕೆಯೊಡೆಯುವುದಿಲ್ಲ. ಸಸಿ ಬೆಳೆಯುವುದಿಲ್ಲ. ಬೆಳೆದ ಪಯಿರು ತೆನೆ ಕಚ್ಚುವುದಿಲ್ಲ. ಬೆಳೆಯು ಹತ್ತಾರು ಬಗೆಯ ರೋಗರುಜಿನಗಳಿಗೆ ಒಳಗಾಗಿ ಬೆಳೆಯು ನೆಲಕಚ್ಚುತ್ತದೆ;

ನಮ್ಮ+ಈ; ನಾಗರಿಕತೆ=ನಗರಗಳಲ್ಲಿ ನೆಲೆಸಿರುವ ವ್ಯಕ್ತಿಗಳ ಉಡುಗೆ ತೊಡುಗೆ ಮತ್ತು ಆಚಾರ ವಿಚಾರಗಳಲ್ಲಿ ಕಂಡುಬರುವ ಹೊಸತನ; ಸಿರಿ=ಸಂಪತ್ತು; ಮಣ್ಣ್+ಉಣಿ; ಉಣ್=ತಿನ್ನು; ಮಣ್ಣುಣಿ=ಮಣ್ಣಿನೊಡನೆ ಬೆರೆತಿರುವ; ನೇಗಿಲಿನ+ಆಶ್ರಯದಿ; ಆಶ್ರಯ=ಆಸರೆ/ನೆರವು;

ಬಾಳಿತು ನಮ್ಮೀ ನಾಗರಿಕತೆ ಸಿರಿ ಮಣ್ಣುಣಿ ನೇಗಿಲಿನಾಶ್ರಯದಿ=ಜನಸಮುದಾಯದ ಸಿರಿಸಂಪದಗಳಿಗೆ, ಕಲೆ, ಸಂಗೀತ, ಸಾಹಿತ್ಯದಿಂದ ಕೂಡಿದ ನಾಗರಿಕತೆಯ ಬೆಳವಣಿಗೆಗೆ ಮತ್ತು ಎಲ್ಲ ಬಗೆಯ ಚಟುವಟಿಕೆಗಳಿಗೆ ನೇಗಿಲ ದುಡಿಮೆಯೇ ಮೂಲ ಆಸರೆಯಾಗಿದೆ;

ಕೈ+ಆಧಾರದಿ; ಆಧಾರ=ಅವಲಂಬನ/ಸಹಾಯ;

ನೇಗಿಲ ಹಿಡಿದಾ ಕೈಗಳು=ಹೊಲಗದ್ದೆತೋಟಗಳಲ್ಲಿ ದುಡಿಯುತ್ತಿರುವ ಬೇಸಾಯಗಾರರು;

ದರ್ಪದೊಳ್+ಆಳಿದರು; ದರ್ಪ=ಸೊಕ್ಕು/ಗತ್ತು; ಆಳಿದರು=ಆಳ್ವಿಕೆಯನ್ನು ನಡೆಸಿದರು; ಬಲ=ಶಕ್ತಿ; ವೀರ=ಕಲಿ; ಮೆರೆ=ಒಪ್ಪು/ಬೀಗು; ವೀರರು ಮೆರೆದರು=ವೀರರು ತಮ್ಮ ಪರಾಕ್ರಮವನ್ನು ತೋರಿಸಿದರು; ಶಿಲ್ಪಿಗಳ್+ಎಸೆದರು; ಶಿಲ್ಪಿ=ಶಿಲೆಯನ್ನು ಉಳಿಯಿಂದ ಕೆತ್ತಿ ವಿಗ್ರಹವನ್ನು ಕಡೆಯುವವನು; ಎಸೆ=ಕಂಗೊಳಿಸು; ಶಿಲ್ಪಿಗಳೆಸೆದರು=ಶಿಲ್ಪಿಗಳು ಕೀರ್ತಿವಂತರಾದರು; ಕವಿ=ಕಾವ್ಯವನ್ನು ರಚಿಸುವವನು;

ಬೇಸಾಯಗಾರರ ದುಡಿಮೆಯ ಉತ್ಪನ್ನದಿಂದಲೇ ದೊರೆಗಳು ದರ್ಪದಿಂದ ಆಳುತ್ತಿದ್ದಾರೆ; ವೀರರು ಪರಾಕ್ರಮದಿಂದ ಮೆರೆಯುತ್ತಿದ್ದಾರೆ; ಶಿಲ್ಪಿಗಳು ಶಿಲೆಯಲ್ಲಿ ಕಲೆಯ ಸೊಬಗನ್ನು ಮೂಡಿಸುತ್ತಿದ್ದಾರೆ; ಕವಿಗಳ ಕಾವ್ಯರಚನೆಯಿಂದ ಅಮರರಾಗಿದ್ದಾರೆ;

ಅರಿ=ತಿಳಿ; ಯಾರೂ ಅರಿಯದ=ಯಾರೊಬ್ಬರಿಗೂ ಗೊತ್ತಿಲ್ಲದ; ಅನ್ನವನ್+ಈಯುವನು; ಈಯು=ಕೊಡು;

ಯಾರೂ ಅರಿಯದ ನೇಗಿಲ ಯೋಗಿಯೇ ಲೋಕಕೆ ಅನ್ನವನೀಯುವನು =ಜನರಿಗೆ ತಾವು ಉಣ್ಣುತ್ತಿರುವ ಆಹಾರದ ಬೆಳೆಗಳನ್ನು ಬೆಳೆಯುತ್ತಿರುವ ಮತ್ತು ತಾವು ಕುಡಿಯುವ ಹಾಲನ್ನು ನೀಡುವ ಎಮ್ಮೆ ಹಸುಗಳನ್ನು ಸಾಕಿ ಸಲಹುತ್ತಿರುವ ವ್ಯಕ್ತಿಗಳು ಯಾರು ಮತ್ತು ಅವರ ಹೆಸರೇನು ಎಂಬುದು ಗೊತ್ತಿರುವುದಿಲ್ಲ. ಬೇಸಾಯಗಾರನೊಡನೆ ಹೆಗಲಿಗೆ ಹೆಗಲು ಕೊಟ್ಟು, ಅವನ ಜತೆಜತೆಯಲ್ಲಿಯೇ ಕೂಲಿಯವರು, ಜೀತದಾಳುಗಳು ಮತ್ತು ಹೆಂಗಸರು ಮಕ್ಕಳು ಹೊಲಗದ್ದೆತೋಟಗಳಲ್ಲಿ ತಮ್ಮ ಬೆವರನ್ನು ಬಸಿದು ಹಗಲಿರುಳು ಗೆಯ್ಯುತ್ತಿದ್ದಾರೆ. ಇಂತಹ ಕೋಟಿಗಟ್ಟಲೆ ಶ್ರಮಜೀವಿಗಳ ನಿರಂತರವಾದ ದುಡಿಮೆಯಿಂದಲೇ ಜನಸಮುದಾಯಕ್ಕೆ ಸದಾಕಾಲ ಅನ್ನ ದೊರೆಯುತ್ತಿದೆ;

ಹೆಸರನು ಬಯಸದೆ=ತನ್ನನ್ನು ಇತರರು ಹೊಗಳಬೇಕೆಂದು ಆಸೆಪಡದೆ;

ಅತಿಸುಖಕೆ+ಎಳಸದೆ; ಅತಿಸುಖ=ಹೆಚ್ಚಿನ ಆನಂದ; ಎಳಸು=ಇಚ್ಚಿಸು;

ಅತಿಸುಖಕೆಳಸದೆ=ಜೀವನದಲ್ಲಿ ಹೆಚ್ಚಿನ ಸವಲತ್ತುಗಳನ್ನು ಪಡೆದು, ಆನಂದ ತುತ್ತತುದಿಯಲ್ಲಿ ಓಲಾಡಬೇಕೆಂದು ಹಂಬಲಿಸದೆ;

ಗೌರವಕೆ+ಆಶಿಸದೆ; ಗೌರವ=ಮನ್ನಣೆ/ಹಿರಿಮೆ; ಆಶಿಸು=ಬಯಸು;

ಗೌರವಕಾಶಿಸದೆ=ಬಿರುದಾವಳಿಗಳನ್ನು ಪಡೆದು ಜನಮನ್ನಣೆಯನ್ನು ಹೊಂದಿ ದೊಡ್ಡ ಹೆಸರನ್ನು ಗಳಿಸಿ ಮೆರೆಯಬೇಕೆಂದು ಆಸೆಪಡದೆ;

ನೇಗಿಲ+ಕುಳ+ಒಳಗೆ+ಅಡಗಿದೆ;

ಕುಳ=ನೇಗಿಲಿನ ಬುಡದಲ್ಲಿರುವ ಮರದ ತುಂಡಿಗೆ ಜೋಡಿಸಿರುವ ಕಬ್ಬಿಣದ ಪಟ್ಟಿ. ಇದರಿಂದ ಭೂಮಿಯ ಮಣ್ಣನ್ನು ಸೀಳಿ ಮಿದುಮಾಡಿ ಹದಗೊಳಿಸಲು ಆಗುತ್ತದೆ; ಅಡಗು=ಸೇರಿಕೆ/ಜೋಡಣೆ;

ಧರ್ಮ=ವ್ಯಕ್ತಿಯು ತಾನು ಆಡುವ ಮಾತು ಮತ್ತು ಮಾಡುವ ದುಡಿಮೆಯಿಂದ ತನಗೆ ಮತ್ತು ತನ್ನ ಕುಟುಂಬಕ್ಕೆ ಒಳಿತನ್ನು ಬಯಸುವಂತೆಯೇ ಸಹಮಾನವರಿಗೆ ಮತ್ತು ಸಮಾಜಕ್ಕೆ ಒಳಿತನ್ನು ಮಾಡುವುದು;

ನೇಗಿಲಕುಳದೊಳಗಡಗಿದೆ ಕರ್ಮ=ಲೋಕದಲ್ಲಿ ನಡೆಯುವ ಮಾನವನ ಎಲ್ಲ ಬಗೆಯ ಚಟುವಟಿಕೆಗಳಿಗೂ ನೇಗಿಲಯೋಗಿಯ ದುಡಿಮೆಯಿಂದ ಬೆಳೆಯುವ ಬೆಳೆಗಳೇ ಜೀವಶಕ್ತಿಯಾಗಿವೆ;

ನೇಗಿಲ ಮೇಲೆಯೆ ನಿಂತಿದೆ ಧರ್ಮ=ಮಾನವ ಸಮುದಾಯದ ಹೊಟ್ಟೆಯ ಹಸಿವನ್ನು ತಣಿಸಿ, ಜನರು ಒಲವು ನಲಿವು ನೆಮ್ಮದಿಯಿಂದ ಬಾಳುವುದಕ್ಕೆ ನೇಗಿಲ ದುಡಿಮೆಯೇ ತಳಹದಿಯಾಗಿದೆ. ಕೋಟಿಗಟ್ಟಲೆ ಬೇಸಾಯಗಾರರ ದುಡಿಮೆಯಿಂದ ರೂಪುಗೊಂಡಿರುವ **'ನೇಗಿಲ ಧರ್ಮ'** ಜಗತ್ತಿನ ಜನಸಮುದಾಯದಲ್ಲಿ ಜಾತಿ ಮತ ಲಿಂಗ ಪ್ರಾಂತ್ಯವೆಂಬ ತಾರತಮ್ಯವನ್ನು ಮಾಡದೆ ಎಲ್ಲರಿಗೂ ಅನ್ನವನ್ನು ನೀಡುತ್ತಿದೆ.)

❖❖

೨. ಸಗ್ಗದ ಬಾಗಿಲು

ಸಗ್ಗದ ಬಾಗಿಲು ಎಲ್ಲಿಹುದಣ್ಣಾ
ನುಗ್ಗಿದೆನೆಲ್ಲಿಯು ಸಿಗಲಿಲ್ಲಣ್ಣಾ

ಕಾಶಿಗೆ ಹೋದೆನು ಅಲ್ಲಿಲ್ಲಣ್ಣಾ
ಮುಳುಗಿದೆ ಗಂಗೆಯೊಳಲ್ಲಿಲ್ಲಣ್ಣಾ

ಘಣಘಣ ಘಣಘಣ ಗಂಟೆಯ ಬಾರಿಸಿ
ಮಣಮಣ ಮಣಮಣ ಮಂತ್ರವ ಹೇಳಿದೆ
ಪೂಜೆಯ ಮಾಡಿದೆ ಧೂಪವ ಹಾಕಿದೆ
ದಕ್ಷಿಣೆಯಿತ್ತೆನು ಹಾರುವರಾಳಿಗೆ
ಪಂಡಿತವರ್ಯರ ಸೇವೆಯ ಮಾಡಿದೆ
ವೇದವನೋದಿದೆ ತರ್ಕವ ಮಾಡಿದೆ

ಸಗ್ಗದ ಬಾಗಿಲು ಎಲ್ಲಿಯು ಇಲ್ಲ
ನುಗ್ಗಿದ ಕಡೆ ತಲೆ ತಾಗದೆ ಇಲ್ಲ

ಸಗ್ಗದ ಬಾಗಿಲು ಎಲ್ಲಿಹುದಣ್ಣಾ
ನುಗ್ಗಿದೆನೆಲ್ಲಿಯು ಸಿಗಲಿಲ್ಲಣ್ಣಾ

ಸಗ್ಗದ ಬಾಗಿಲು ಅಲ್ಲಿಹುದಣ್ಣಾ
ನುಗ್ಗಿದರಲ್ಲೇ ತೆರೆಯುವುದಣ್ಣಾ

ಹಕ್ಕಿಯ ಟುವ್ವಿಯೊಳವಿತಿದೆಯಣ್ಣಾ
ಹೂವಿನ ಬಣ್ಣದೊಳಡಗಿದೆಯಣ್ಣಾ

ದುಡಿಯುವ ರೈತನ ನೇಗಿಲೊಳಡಗಿದೆ
ಕಡಿಯುವ ಕೂಲಿಯ ಕತ್ತಿಯೊಳಡಗಿದೆ

ನೇಗಿಲ ಗೆರೆಯೇ ಸಗ್ಗದ ಹಾದಿ
ಕರ್ಮವೆ ಬಾಗಿಲಿಗೊಯ್ಯುವ ಬೀದಿ

ಹಕ್ಕಿಗಳುಲಿಯಲು ಹೂವುಗಳರಳಲು
ತಾಯಿಯು ಕಂದನ ಮುದ್ದಿಸಿ ನಲಿಯಲು
ಬರೆಯಲು ವೇದವ ರೈತನ ನೇಗಿಲು
ತೆರೆವುದು ದಿನದಿನ ಸಗ್ಗದ ಬಾಗಿಲು

ಸಗ್ಗದ ಬಾಗಿಲು ಅಲ್ಲಿಹುದಣ್ಣಾ
ನುಗ್ಗಿದರಲ್ಲೇ ತೆರೆಯುವುದಣ್ಣಾ.

'ಸ್ವರ್ಗ' ಎಂಬ ಸಂಸ್ಕೃತ ಪದ ಕನ್ನಡದಲ್ಲಿ 'ಸಗ್ಗ' ಎಂದು ಬಳಕೆಗೆ ಬಂದಿದೆ. ಸ್ವರ್ಗವೆಂಬುದು ಮಾನವನ ಮನದ ಕಲ್ಪನೆಯಲ್ಲಿ ಮೂಡಿರುವ ಒಂದು ಲೋಕ. ನರಲೋಕದಲ್ಲಿ ಪುಣ್ಯದ ಕೆಲಸವನ್ನು ಮಾಡಿ ಸಾವನ್ನಪ್ಪಿದ ವ್ಯಕ್ತಿಗಳಿಗೆ ಮಾತ್ರ ಸಗ್ಗದ ಬಾಗಿಲು ತೆರೆಯುತ್ತದೆ ಮತ್ತು ಸ್ವರ್ಗದಲ್ಲಿ ಎಲ್ಲಾ ಬಗೆಯ ಚೆಲುವು ಒಲವು ನಲಿವು ನೆಲೆಗೊಂಡಿದೆ ಎಂಬ ನಂಬಿಕೆಯು ಜನಮನದಲ್ಲಿದೆ. ಇಂತಹ ಕಲ್ಪಿತ ಸ್ವರ್ಗವನ್ನು ಸೇರುವುದಕ್ಕಾಗಿ ಹಿಂದಿನಿಂದಲೂ ಜನರು ಮಾಡಿಕೊಂಡು ಬರುತ್ತಿರುವ ಆಚರಣೆಗಳ ಪೊಳ್ಳುತನವನ್ನು ಗುರುತಿಸಿರುವ ಕವಿಯು ಅವನ್ನು ನಿರಾಕರಿಸಿ, ಕಣ್ಣ ಮುಂದಿನ ವಾಸ್ತವ ಲೋಕದಲ್ಲಿನ ನಿಸರ್ಗದ ಚೆಲುವಿನಲ್ಲಿ, ತಾಯಿಯು ಕಂದನನ್ನು ಮುದ್ದಿಸುವ ಒಲವಿನ ನಂಟಿನಲ್ಲಿ ಮತ್ತು ಬೇಸಾಯಗಾರರ ದುಡಿಮೆಯ ನೆಲೆಯಲ್ಲಿ ಸಗ್ಗದ ಬಾಗಿಲು ತೆರೆದುಕೊಂಡಿದೆಯೆಂದು ಹೇಳಿದ್ದಾರೆ.

(ಬಾಗಿಲು=ಕದ/ಪ್ರವೇಶ ದ್ವಾರ; ಎಲ್ಲಿ+ಇಹುದು+ಅಣ್ಣಾ; ಎಲ್ಲಿ=ಯಾವ ಕಡೆ; ಇಹುದು=ಇರುವುದು; ಅಣ್ಣ=ಗಂಡಸರನ್ನು ಒಲವು ನಲಿವಿನಿಂದ ಮಾತನಾಡಿಸುವಾಗ ಬಳಸುವ ಪದ; ನುಗ್ಗಿದೆನ್+ಎಲ್ಲಿಯು; ನುಗ್ಗು=ವ್ಯಕ್ತಿಯು ಇತರರನ್ನು ಹಿಂದಕ್ಕೆ ಇಲ್ಲವೇ ಪಕ್ಕಕ್ಕೆ ತಳ್ಳಿ, ಆತುರಾತುರದಿಂದ ತಾನು ಮುಂದಕ್ಕೆ ಹೋಗುವುದು; ಎಲ್ಲಿಯು=ಯಾವ ಕಡೆಯಲ್ಲಿಯೂ; ಸಿಗಲಿಲ್ಲ+ಅಣ್ಣಾ; ಸಿಗು=ದೊರಕು; ಸಿಗಲಿಲ್ಲ=ದೊರಕಲಿಲ್ಲ/ಕಾಣಲಿಲ್ಲ;

ಕಾಶಿ=ಉತ್ತರ ಪ್ರದೇಶ ರಾಜ್ಯದ ವಾರಣಾಸಿ ಜಿಲ್ಲೆಯಲ್ಲಿ ಗಂಗಾ ನದಿಯ ತಟದಲ್ಲಿರುವ ಒಂದು ಪಟ್ಟಣ. ಈ ಪಟ್ಟಣಕ್ಕೆ 'ವಾರಣಾಸಿ/ಬನಾರಸ್/ಕಾಶಿ' ಎಂಬ ಮೂರು ಬಗೆಯ ಹೆಸರುಗಳಿವೆ. ಇಲ್ಲಿರುವ ಶಿವಲಿಂಗವನ್ನು 'ವಿಶ್ವನಾಥ' ಎಂದು ಕರೆಯುತ್ತಾರೆ. ಈ ಶಿವಲಿಂಗವನ್ನು ನೋಡುವ ವ್ಯಕ್ತಿಗೆ ಪುಣ್ಯ ದೊರೆಯುವುದೆಂದು,

ಕಾಶಿಯಲ್ಲಿ ಸತ್ತರೆ ಸ್ವರ್ಗಕ್ಕೆ ಹೋಗುತ್ತಾನೆ ಎಂಬ ನಂಬಿಕೆಯು ಜನಮನದಲ್ಲಿದೆ;

ಅಲ್ಲಿ+ಇಲ್ಲ+ಅಣ್ಣಾ; ಮುಳುಗು=ತಲೆಯನ್ನು ನೀರಿನಲ್ಲಿ ಅದ್ದಿ ಸ್ನಾನವನ್ನು ಮಾಡುವುದು; ಗಂಗೆ+ಒಳ್+ಅಲ್ಲಿ+ಇಲ್ಲ+ಅಣ್ಣಾ;

ಗಂಗೆ=ಹಿಮಾಲಯದ ತಪ್ಪಲಲ್ಲಿ ಹುಟ್ಟಿ ಉತ್ತರ ಇಂಡಿಯಾದ ರಾಜ್ಯಗಳಲ್ಲಿ ಹರಿದು ಬಂಗಾಳ ಕೊಲ್ಲಿಯನ್ನು ಸೇರುವ ಒಂದು ನದಿ. ಈ ನದಿಯಲ್ಲಿ ಮಿಂದೆದ್ದರೆ ಇಲ್ಲವೇ ಇದರ ನೀರನ್ನು ಕುಡಿದರೆ ವ್ಯಕ್ತಿಗೆ ಒಳಿತಾಗುವುದೆಂಬ ನಂಬಿಕೆಯು ಜನಮನದಲ್ಲಿದೆ;

ಘಣಘಣ ಘಣಘಣ=ಗಂಟೆಯನ್ನು ಬಾರಿಸಿದಾಗ ಉಂಟಾಗುವ ದನಿಯನ್ನು ಸೂಚಿಸುವ ಅನುರಣನ ಪದ; ಗಂಟೆ=ಕಂಚು, ಹಿತ್ತಾಳೆ, ತಾಮ್ರ ಮುಂತಾದ ಲೋಹಗಳಿಂದ ಮಾಡಿರುವ ಒಂದು ಉಪಕರಣ; ಬಾರಿಸು=ಗಂಟೆಯನ್ನು ಹೊಡೆಯುವುದು; ಮಣಮಣ ಮಣಮಣ=ವ್ಯಕ್ತಿಯು ಎಡೆಬಿಡದೆ ಒಂದೇ ಸಮನೆ ಪದ ಇಲ್ಲವೇ ವಾಕ್ಯಗಳನ್ನು ಉಚ್ಚರಿಸುತ್ತಿರುವುದನ್ನು ಸೂಚಿಸುವ ಅನುಕರಣ ಶಬ್ದ;

ಮಂತ್ರ=ದೇವರ ಹೆಸರು, ಶಕ್ತಿ ಮತ್ತು ಮಹಿಮೆಯನ್ನು ಕೊಂಡಾಡುವ ನುಡಿಗಳು. ಮಂತ್ರಗಳನ್ನು ಪದೇ ಪದೇ ಉಚ್ಚರಿಸುವುದರಿಂದ ವ್ಯಕ್ತಿಯು ದೇವರ ಅನುಗ್ರಹಕ್ಕೆ ಪಾತ್ರನಾಗಿ ಒಳಿತನ್ನು ಪಡೆಯುತ್ತಾನೆ ಎಂಬ ನಂಬಿಕೆಯು ಜನಮನದಲ್ಲಿದೆ;

ಪೂಜೆ=ದೇವರನ್ನು ಒಲಿಸಿಕೊಳ್ಳಲೆಂದು ದೇವರ ವಿಗ್ರಹದ ಮುಂದೆ ಹೂಹಣ್ಣು ಕಾಯಿಗಳನ್ನಿಟ್ಟು, ದೀಪಗಳನ್ನು ಬೆಳಗಿಸುತ್ತ ಮಾಡುವ ಆಚರಣೆ; ಧೂಪ= ಸಾಂಬ್ರಾಣಿ ಹಾಲುಮಡ್ಡಿ ಮುಂತಾದ ವಸ್ತುಗಳು. ಇದನ್ನು ಕೆಂಡದ ಮೇಲೆ ಹಾಕಿದಾಗ ಸುವಾಸನೆಯಿಂದ ಕೂಡಿದ ಹೊಗೆಯು ಹೊರಹೊಮ್ಮುತ್ತದೆ;

ದಕ್ಷಿಣೆ+ಇತ್ತೆನು; ದಕ್ಷಿಣೆ=ಕಾಣಿಕೆ; ಇತ್ತೆನ್=ಕೊಟ್ಟೆನು; ಹಾರುವರ+ಆಳಿಗೆ; ಹಾರುವ=ಬ್ರಾಹ್ಮಣ; ಆಳಿ=ಗುಂಪು; ಪಂಡಿತವರ್ಯ=ಓದುಬರಹವನ್ನು ಚೆನ್ನಾಗಿ ಬಲ್ಲವನು; ಸೇವೆ=ಊಳಿಗ/ಚಾಕರಿ;

ವೇದ+ಅನ್+ಓದಿದೆ;

ವೇದ=ಅರಿವು/ತಿಳುವಳಿಕೆ. ಸಂಸ್ಕೃತ ನುಡಿಯಲ್ಲಿ 'ಋಗ್ವೇದ–ಯಜುರ್ವೇದ–ಸಾಮವೇದ–ಅಥರ್ವಣ ವೇದ' ಎಂಬ ನಾಲ್ಕು ವೇದಗಳು ರಚನೆಗೊಂಡಿವೆ. ನಿಸರ್ಗದಲ್ಲಿನ ಭೂಮಿ–ಗಾಳಿ–ಬೆಂಕಿ–ನೀರು ಮುಂತಾದವನ್ನು ಒಬ್ಬೊಬ್ಬ ದೇವತೆಯೆಂದು ಕಲ್ಪಿಸಿಕೊಂಡು ಪೂಜಿಸುವ ಆಚರಣೆಯ ವಿವರಗಳು ವೇದಗಳಲ್ಲಿದೆ;

ಅನ್=ಅನ್ನು; ತರ್ಕ=ವ್ಯಕ್ತಿಯು ತಾನು ಹೇಳುತ್ತಿರುವ ಸಂಗತಿಯೇ ಸರಿಯೆಂದು ವಾದವನ್ನು ಮಾಡುವುದು; ತಾಗು=ಹೊಡೆ/ಬಡಿ; ಅಲ್ಲಿ+ಇಹುದು+ಅಣ್ಣಾ; ನುಗ್ಗಿದರೆ+ಅಲ್ಲೇ; ತೆರೆಯುವುದು+ಅಣ್ಣಾ; ತೆರೆ=ತೆಗೆ/ಬಿಚ್ಚು/ಕಾಣು;

ಟುವ್ವಿ+ಒಳ್+ಅವಿತು+ಇದೆ+ಅಣ್ಣಾ; ಹಕ್ಕಿಯ ಟುವ್ವಿ=ಹಕ್ಕಿಯ ಕೂಗು/ದನಿ; ಅವಿ=ಅಡಗು/ಬಚ್ಚಿಟ್ಟುಕೊ; ಅವಿತಿದೆ=ನೆಲೆಸಿದೆ;

ಹಕ್ಕಿಯ ಟುವ್ವಿಯೊಳವಿತಿದೆ=ಹಕ್ಕಿಯ ಕೊರಳೊಳಗಿಂದ ಹೊರಹೊಮ್ಮುತ್ತಿರುವ ಇಂಪಾದ ದನಿಯಲ್ಲಿ ಸಗ್ಗ ನೆಲೆಸಿದೆ;

ಬಣ್ಣ+ಒಳ್+ಅಡಗಿದೆ+ಅಣ್ಣಾ; ಬಣ್ಣ=ರಂಗು/ಹೊಳಪು; ಅಡಗು=ನೆಲೆಸು;

ಹೂವಿನ ಬಣ್ಣದೊಳಡಗಿದೆ=ಬಗೆಬಗೆಯ ಬಣ್ಣಗಳಿಂದ ಕಂಗೊಳಿಸುತ್ತಿರುವ ಹೂವಿನ ದಳಗಳಲ್ಲಿ ಸಗ್ಗ ನೆಲೆಸಿದೆ;

ದುಡಿ=ಕೆಲಸ ಮಾಡು; ನೇಗಿಲ್+ಒಳ್+ಅಡಗಿದೆ; ನೇಗಿಲು=ಮಣ್ಣನ್ನು ಮೆತುಗೊಳಸಿ ಬೀಜವನ್ನು ಬಿತ್ತಲು ಮತ್ತು ಪಯಿರನ್ನು ನೆಡಲು ಹದಗೊಳಿಸುವುದಕ್ಕಾಗಿ ಭೂಮಿಯನ್ನು ಉಳುವ ಉಪಕರಣ;

ದುಡಿಯುವ ರೈತನ ನೇಗಿಲೊಳಡಗಿದೆ=ಜೀವಿಗಳಿಗೆ ಅನ್ನವನ್ನು ನೀಡುವ ಬೇಸಾಯಗಾರನ ದುಡಿಮೆಯಲ್ಲಿ ಸಗ್ಗ ನೆಲೆಸಿದೆ;

ಕಡಿ=ಕತ್ತರಿಸು/ಸೀಳು; ಕೂಲಿ=ಬೇಸಾಯಗಾರನ ಜತೆಯಲ್ಲಿ ದುಡಿಮೆಯನ್ನು ಮಾಡುವವನು; ಕತ್ತಿ+ಒಳ್+ಅಡಗಿದೆ; ಕತ್ತಿ=ಹರಿತವಾದ ಮೊನೆಯುಳ್ಳ ಒಂದು ಹತಾರ;

ಕಡಿಯುವ ಕೂಲಿಯ ಕತ್ತಿಯೊಳಡಗಿದೆ=ಬೀಜವನ್ನು ಬಿತ್ತಿ ಇಲ್ಲವೇ ಪಯಿರನ್ನು ನಾಟಿ ಮಾಡಿ ಬೆಳೆಯನ್ನು ತೆಗೆಯುವ ತನಕ ಬೇಸಾಯಗಾರನ ಜತೆಜತೆಯಲ್ಲಿಯೇ ಹತಾರಗಳನ್ನು ಹಿಡಿದು ಹತ್ತಾರು ಬಗೆಯ ದುಡಿಮೆಯಲ್ಲಿ ತೊಡಗುವ ಕೂಲಿಯವನ ಪರಿಶ್ರಮದಲ್ಲಿ ಸಗ್ಗ ನೆಲೆಸಿದೆ;

ನೇಗಿಲ ಗೆರೆ=ನೇಗಿಲಿನಿಂದ ಭೂಮಿಯನ್ನು ಉಳುವಾಗ ಕಾಣುವ ಮಣ್ಣಿನ ಗೆರೆಗಳು; ಹಾದಿ=ದಾರಿ;

ನೇಗಿಲ ಗೆರೆಯೇ ಸಗ್ಗದ ಹಾದಿ=ಜನಸಮುದಾಯದ ಹಸಿವು ತಣಿದು ನೆಮ್ಮದಿಯು ದೊರೆಯುವಂತೆ ಮಾಡುವ ಬೇಸಾಯಗಾರನ ದುಡಿಮೆಯೇ ಸಗ್ಗದ ಹಾದಿಯಾಗಿದೆ;

ಕರ್ಮ=ಕೆಲಸ; ಬಾಗಿಲಿಗೆ+ಒಯ್ಯುವ; ಒಯ್ಯು=ತೆಗೆದುಕೊಂಡು ಹೋಗು; ಬೀದಿ=ದಾರಿ;

ಕರ್ಮವೆ ಬಾಗಿಲಿಗೊಯ್ಯುವ ಬೀದಿ=ದುಡಿಮೆಯಿಂದಲೇ ಜನಸಮುದಾಯದ ಬದುಕು ನೆಮ್ಮದಿಯ ನೆಲೆಯತ್ತ ಸಾಗುತ್ತದೆ;

ಹಕ್ಕಿಗಳ್+ಉಲಿಯಲು; ಉಲಿ=ಕೂಗು/ದನಿ ಮಾಡು; ಹೂವುಗಳ್+ಅರಳಲು; ಅರಳು=ಹೂವಿನ ದಳಗಳು ಬಿರಿಯುವುದು; ಕಂದ=ಮಗು/ಕೂಸು; ಮುದ್ದಿಸು=

ಒಲವಿನಿಂದ ಮಯ್ಯನ್ನು ನೇವರಿಸುವುದು/ತಬ್ಬಿಕೊಳ್ಳುವುದು; ನಲಿ=ಆನಂದವನ್ನು ಪಡು;

ತಾಯಿಯು ಕಂದನ ಮುದ್ದಿಸಿ ನಲಿಯಲು=ಹೆತ್ತ ಕಂದನೊಡನೆ ತಾಯಿಯು ಹೊಂದುವ ಒಲವು ವ್ಯಕ್ತಿಗಳ ನಡುವಣ ನಂಟಿನಿಂದ ದೊರೆಯುವ ಆನಂದವನ್ನು ಸೂಚಿಸುತ್ತದೆ;

ಬರೆಯಲು ವೇದವ ರೈತನ ನೇಗಿಲು=ಬೇಸಾಯಗಾರನ ನೇಗಿಲಿನ ಉಳುಮೆಯಿಂದ ಹುಟ್ಟುವಳಿಯಾಗುವ ಅನ್ನವೇ ಜನಸಮುದಾಯದ ಎಲ್ಲ ಬಗೆಯ ಓದು ಬರಹ ಮತ್ತು ಅರಿವಿಗೆ ಮೊದಲ ಆಸರೆಯಾಗಿದೆ;

ತೆರೆವುದು=ಮುಚ್ಚಿದ್ದ ಬಾಗಿಲು ತೆರೆದುಕೊಳ್ಳುವುದು;

ತೆರೆವುದು ದಿನದಿನ ಸಗ್ಗದ ಬಾಗಿಲು=ಸಗ್ಗವೆಂಬುದು ಬೇರೆಲ್ಲೋ ಇಲ್ಲ. ಅದು ಜನಸಮುದಾಯದ ಕಣ್ಣ ಮುಂದಿನ ಜಗತ್ತಿನಲ್ಲಿಯೇ ಇದೆ. ನಿತ್ಯವೂ ಹೊಚ್ಚ ಹೊಸತಾಗಿ ಮೂಡಿ ಕಂಗೊಳಿಸುತ್ತಿರುವ ನಿಸರ್ಗದ ಚೆಲುವಿನಲ್ಲಿ, ವ್ಯಕ್ತಿಗಳ ನಡುವಣ ಒಲವಿನ ನಂಟಿನಲ್ಲಿ ಮತ್ತು ಬೇಸಾಯಗಾರರ ದುಡಿಮೆಯಲ್ಲಿ ನೆಲೆಗೊಂಡಿದೆ.)

❖❖

೩. ಕವಿ

ವಸಂತವನದಲಿ ಕೂಗುವ ಕೋಗಿಲೆ
ರಾಜನ ಬಿರುದನು ಬಯಸುವುದಿಲ್ಲ

ಹೂವಿನ ಮರದಲಿ ಜೇನುಂಬುಳುಗಳು
ಮೊರೆವುದು ರಾಜನ ಭಯದಿಂದಲ್ಲ

ವನದೇಕಾಂತದಿ ಪೆಣ್ ನವಿಲೆಡೆಯಲಿ
ಮಯೂರ ನೃತ್ಯೋನ್ಮತ್ತ ವಿಲಾಸಕೆ
ರಾಜನ ಕತ್ತಿಯ ಗಣನೆಯೆ ಇಲ್ಲ

ನಿದಾಘವ್ಯೋಮದಿ ಮೆಲ್ಲಗೆ ಮೆಲ್ಲಗೆ
ತನ್ನೊಂದಿಚ್ಛೆಗೆ ತೇಲುವ ಮೇಘದ
ಆಲಸ್ಯಕೆ ಅರಸನ ಅಳುಕಿಲ್ಲ

ಗಾಳಿಯ ಮುತ್ತಿಗೆ ಮೈ ಜುಮ್ಮೆನ್ನಲು
ತೆರೆತೆರೆತೆರೆಯಹ ತಿಳಿಗೊಳದೆದೆಯಲಿ
ಮಿನುಮಿನು ಮಿಂಚುವ ನುಣ್ ಬೆಳುದಿಂಗಳ
ಲೀಲೆಗೆ ದೊರೆ ಮೆಚ್ಚುಗೆ ಬೇಕಿಲ್ಲ

ಸಿಡಲನು ಸಿಡಿಯುತೆ ಮೊಳಗುತೆ ನುಗ್ಗುವ
ಕಾರ್ಗಾಲದ ಕರ್ಮುಗಿಲಿಂ ಹೊಮ್ಮುವ
ಕೆಂಗಿಡಿ ಬಣ್ಣದ ಹೊಂಗೆರೆ ಮಿಂಚಿಗೆ
ಆಸ್ಥಾನದ ದಾಸ್ಯದ ಹುರುಪಿಲ್ಲ

ಕತ್ತಲೆ ಮುತ್ತಿದ ಬಾನಲಿ ಮಿಣುಕುವ
ತಾರೆಗೆ ದೊರೆಯಾಣತಿ ತೃಣವಿಲ್ಲ

ವಿಪ್ಲವ ಮೂರ್ತಿಯ ಸಖನಾಗಿಹನೈ
ಕವಿಗರಸುಗಿರಸುಗಳ ಋಣವಿಲ್ಲ
ಅವನಗ್ನಿಮುಖಿ
ಪ್ರಳಯಶಿಖಿ.

ನಾಡನ್ನು ಆಳುವ ರಾಜನ ಮುಂದೆ ಕವಿಯ ವ್ಯಕ್ತಿತ್ವ ಯಾವ ರೀತಿಯಲ್ಲಿರುತ್ತದೆ ಎಂಬುದನ್ನು ಈ ಕವನದಲ್ಲಿ ಹೇಳಲಾಗಿದೆ.

(ವಸಂತ=ಮಾರ್ಚಿ ತಿಂಗಳಿನಿಂದ ಮೇ ತಿಂಗಳವರೆಗಿನ ಸಮಯ. ವಸಂತಕಾಲದಲ್ಲಿ ಹಣ್ಣೆಲೆಗಳು ಉದುರಿ ಚಿಗುರೆಲೆಗಳು ಸೊಂಪಾಗಿ ಬೆಳೆದು ಮರಗಿಡಗಳು ಕಂಗೊಳಿಸುತ್ತಿರುತ್ತವೆ; ವನ=ಕಾಡು/ಉದ್ಯಾನ; ವಸಂತವನ=ಹಚ್ಚಹಸಿರಾದ ಮರಗಿಡಬಳ್ಳಿಗಳಿಂದ ತುಂಬಿರುವ ವನ; ಕೂಗು=ದನಿ ಮಾಡು; ಕೋಗಿಲೆ=ಕಪ್ಪನೆಯ ಬಣ್ಣದ ಒಂದು ಹಕ್ಕಿ. ಇದರ ಕೊರಳಿನಿಂದ ಹೊರಹೊಮ್ಮುವ ಇಂಪಾದ ದನಿಯನ್ನು ಕೇಳಿದ ಜನರು 'ಕೋಗಿಲೆಯು ಹಾಡುತ್ತಿದೆ' ಎಂದು ತಿಳಿದು ಆನಂದಪಡುತ್ತಾರೆ; ರಾಜ=ದೊರೆ; ಬಿರುದು=ಮೆಚ್ಚುಗೆಯ ಸೂಚಕವಾಗಿ ಕೊಡುವ ಪ್ರಶಸ್ತಿ; ಬಯಸು=ಹಂಬಲಿಸು;

ವಸಂತವನದಲಿ ಕೂಗುವ ಕೋಗಿಲೆ ರಾಜನ ಬಿರುದನು ಬಯಸುವುದಿಲ್ಲ= ಕೋಗಿಲೆಯು ತನ್ನ ಪಾಡಿಗೆ ತಾನು ತನ್ನ ಆನಂದಕ್ಕಾಗಿ ದನಿ ಮಾಡುತ್ತದೆಯೇ ಹೊರತು ರಾಜನು ಕೇಳಿ ಮೆಚ್ಚಿಕೊಂಡು ಬಿರುದನ್ನು ದಯಪಾಲಿಸಲೆಂದು ಹಂಬಲಿಸುವುದಿಲ್ಲ;

ಜೇನ್+ಪುಳು=ಜೇನುಂಬುಳು; ಜೇನು=ಸಿಹಿಯಾದ ಮಕರಂದ; ಪುಳು=ಹುಳು; ಜೇನುಹುಳು=ಹೂಗಳ ಮಕರಂದವನ್ನು ಹೀರಿಕೊಂಡು ಬಂದು ಸಿಹಿಯಾದ ಜೇನನ್ನು ತಯಾರುಮಾಡುವ ಹುಳು; ಮೊರೆ=ಜೇಂಕರಿಸು/ಗುಯ್ ಎಂದು ದನಿ ಮಾಡುವುದು; ಭಯ+ಇಂದ+ಅಲ್ಲ; ಭಯ=ಹೆದರಿಕೆ;

ಹೂವಿನ ಮರದಲಿ ಜೇನುಂಬುಳುಗಳು ಮೊರೆವುದು ರಾಜನ ಭಯದಿಂದಲ್ಲ= ಹೂವುಗಳ ಮಕರಂದವನ್ನು ಹೀರಿಕೊಂಡು ಬಂದು ಸಿಹಿಯಾದ ಜೇನನ್ನು ತಯಾರುಮಾಡುವಾಗ ಕೇಳಿಬರುವ ಜೇಂಕಾರದ ದನಿಯು ಜೇನುಹುಳಗಳ ಕೆಲಸದ ದನಿಯೇ ಹೊರತು, ರಾಜನಿಂದ ಎಲ್ಲಿ ಕೇಡಾಗುವುದೋ ಎಂಬ ಹೆದರಿಕೆಯಿಂದ ಅರಚುತ್ತಿರುವ ದನಿಯಲ್ಲ;

ವನದ+ಏಕಾಂತದಿ; ವನ=ಕಾಡು; ಏಕಾಂತ=ಜನ, ಪ್ರಾಣಿ, ಹಕ್ಕಿಗಳ ಗುಂಪಿಲ್ಲದ ಜಾಗ; ಪೆಣ್=ಹೆಣ್ಣು; ನವಿಲ್+ಎಡೆಯಲಿ; ನವಿಲು=ಒಂದು ಬಗೆಯ ಹಕ್ಕಿ; ಎಡೆ=ಬಳಿ/ಹತ್ತಿರ; ಮಯೂರ=ನವಿಲು; ನೃತ್ತೋನ್ಮತ್ತ=ನೃತ್ತ+ಉನ್ಮತ್ತ; ನೃತ್ತ=ಕುಣಿತ;

ಉನ್ಮತ್ತ=ಆವೇಶಗೊಂಡು; ವಿಲಾಸ=ಉಲ್ಲಾಸ/ಕ್ರೀಡೆ; ಕತ್ತಿ=ಹರಿತವಾದ ಹತಾರ; ಗಣನೆ=ಲೆಕ್ಕ;

ವನದೇಕಾಂತದಿ ಪೆಣ್ ನವಿಲೆಡೆಯಲಿ ಮಯೂರ ನೃತ್ತೋನ್ಮತ್ತ ವಿಲಾಸಕೆ ರಾಜನ ಕತ್ತಿಯ ಗಣನೆಯೆ ಇಲ್ಲ=ಕಾಡಿನ ನಿಸರ್ಗದ ಮಡಿಲಿನಲ್ಲಿ ಹೆಣ್ಣು ನವಿಲಿನ ಜತೆಗೂಡಿ ಒಲವು ನಲಿವಿನ ತುಡಿತಗಳಿಂದ ಕೂಡಿ ಕುಣಿಯುತ್ತಿರುವ ಗಂಡು ನವಿಲಿಗೆ ರಾಜನ ಕತ್ತಿಯ ಅಂಕೆಯಿಲ್ಲ;

ನಿದಾಘ+ವ್ಯೋಮದಿ; ನಿದಾಘ=ಬೇಸಿಗೆಯ ಕಾಲ; ವ್ಯೋಮ=ಆಕಾಶ; ಮೆಲ್ಲಗೆ=ಮಂದಗತಿಯಲ್ಲಿ ಸಾಗುವುದು; ತನ್ನ+ಒಂದು+ಇಚ್ಛೆಗೆ; ಇಚ್ಛೆ=ಬಯಕೆ; ತೇಲು=ಗಾಳಿಯಲ್ಲಿ ಹಾರುವುದು; ಮೇಘ=ಮೋಡ; ಆಲಸ್ಯ=ಜಡತ್ವ/ಸೋಂಬೇರಿತನ; ಅರಸ=ರಾಜ; ಅಳುಕು+ಇಲ್ಲ; ಅಳುಕು=ಹೆದರಿಕೆ;

ನಿದಾಘವ್ಯೋಮದಿ ಮೆಲ್ಲಗೆ ಮೆಲ್ಲಗೆ ತನ್ನೊಂದಿಚ್ಛೆಗೆ ತೇಲುವ ಮೇಘದ ಆಲಸ್ಯಕೆ ಅರಸನ ಅಳುಕಿಲ್ಲ=ಬೇಸಗೆಯ ಮುಗಿಲಲ್ಲಿ ತನ್ನ ಪಾಡಿಗೆ ತಾನು ತೇಲುತ್ತ ಮಂದಗತಿಯಲ್ಲಿ ಸಾಗುತ್ತಿರುವ ಮೋಡಕ್ಕೆ ಅರಸನು ತನಗೆ ಏನು ಮಾಡುವನೋ ಎಂಬ ಚಿಂತೆಯಿಲ್ಲ;

ಮುತ್ತು=ಚುಂಬನ; ಜುಮ್ಮ್+ಎನ್ನಲು; ಜುಮ್ಮ್=ಮಯ್ ನವಿರೇಳುವುದು ; ತೆರೆ+ತೆರೆ+ತೆರೆ+ಅಹ; ತೆರೆ=ಅಲೆ/ತರಂಗ; ತಿಳಿ+ಕೊಳದ+ಎದೆಯಲಿ; ತಿಳಿ=ಕಸಕಡ್ಡಿಗಳಿಲ್ಲದೆ ಶುಚಿಯಾಗಿರುವ; ಕೊಳ=ಸರೋವರ; ಕೊಳದ ಎದೆಯಲಿ=ನೀರಿನ ಅಲೆಗಳ ಏರಿಳಿತದಲ್ಲಿ; ಮಿನುಮಿನು=ಚೆನ್ನಾಗಿ ಹೊಳೆಯುತ್ತಿರುವುದನ್ನು ಸೂಚಿಸುವ ಅನುಕರಣ ಶಬ್ದ; ಮಿಂಚು=ಪ್ರಕಾಶಮಾನವಾಗಿ ಕಂಗೊಳಿಸುವ; ನುಣ್=ಅಂದವಾದ/ಚೆಂದದ; ಬೆಳುಂದಿಗಳು=ಚಂದ್ರನಿಂದ ಹೊರಹೊಮ್ಮುತ್ತಿರುವ ಬೆಳಕು; ಲೀಲೆ=ಬೆಡಗು; ದೊರೆ=ರಾಜ; ಮೆಚ್ಚುಗೆ=ಹೊಗಳಿಕೆ; ಬೇಕು+ಇಲ್ಲ; ಬೇಕಿಲ್ಲ=ಅಗತ್ಯವಿಲ್ಲ;

ಗಾಳಿಯ ಮುತ್ತಿಗೆ ಮೈ ಜುಮ್ಮೆನ್ನಲು ತೆರೆತೆರೆತೆರೆಯಹ ತಿಳಿಗೊಳದೆದೆಯಲಿ ಮಿನುಮಿನು ಮಿಂಚುವ ನುಣ್ ಬೆಳುದಿಂಗಳ ಲೀಲೆಗೆ ದೊರೆ ಮೆಚ್ಚುಗೆ ಬೇಕಿಲ್ಲ =ಕೊಳದ ಮೇಲೆ ಬೀಸುತ್ತಿರುವ ಗಾಳಿಯ ಬಡಿತದಿಂದ ಉಂಟಾಗಿರುವ ನೀರಿನ ಅಲೆಗಳ ನಡುವೆ ಮಿನುಮಿನು ಹೊಳೆಯುತ್ತಿರುವ ಬೆಳುದಿಂಗಳಿನ ಸೊಬಗಿಗೆ ರಾಜನ ಮೆಚ್ಚುಗೆ ಬೇಕಿಲ್ಲ;

ಸಿಡಿಲು=ಮೋಡಗಳ ತಿಕ್ಕಾಟದಿಂದ ಕೋಲ್ಮಿಂಚಿನೊಡನೆ ಕೇಳಿಬರುವ ದೊಡ್ಡ ದನಿ; ಸಿಡಿ=ಚಿಮ್ಮುವ/ಹೊರಹೊಮ್ಮುವ; ಮೊಳಗು=ದನಿ/ಶಬ್ದ; ನುಗ್ಗು=ತಳ್ಳಿಕೊಂಡು ಮುಂದಕ್ಕೆ ಬರುವ; ಕಾರ್ಗಾಲ=ಕಾರ್+ಕಾಲ; ಕಾರ್=ಮಳೆಯ ಮೋಡ; ಕಾರ್ಗಾಲ=ಮಳೆಗಾಲ; ಕರ್ಮುಗಿಲ್=ಕರಿದು+ಮುಗಿಲ್; ಕರಿದು=ಕಪ್ಪನೆಯ ಬಣ್ಣ;

ಮುಗಿಲ್=ಮೋಡ; ಕರ್ಮುಗಿಲ್=ಕಪ್ಪನೆಯ ಮೋಡ; ಹೊಮ್ಮು=ಹೊರಸೂಸು/ಕಾಣಿಸಿಕೊಳ್ಳುವುದು; ಕೆಂಗಿಡಿ=ಕೆಚ್ಚನೆಯ+ಕಿಡಿ; ಕೆಚ್ಚನೆ=ಕೆಂಪನೆಯ ಬಣ್ಣದ; ಕಿಡಿ=ಬೆಂಕಿಯ ತುಣುಕು; ಕೆಂಗಿಡಿ=ಬೆಂಕಿಯ ಕೆಂಪನೆಯ ಕಣ; ಹೊಂಗೆರೆ=ಹೊನ್+ಗೆರೆ; ಹೊನ್=ಬಂಗಾರ/ಚಿನ್ನ; ಗೆರೆ=ಸಾಲು; ಹೊಂಗೆರೆ=ಹೊನ್ನಿನ ಎಳೆ/ಗೆರೆ; ಮಿಂಚು=ಮೋಡಗಳ ತಿಕ್ಕಾಟದಿಂದಾಗಿ ಹೊರಹೊಮ್ಮುವ ಬೆಳಕು; ಆಸ್ಥಾನ=ರಾಜನ ಒಡ್ಡೋಲಗ; ದಾಸ್ಯ=ಊಳಿಗ; ಹುರುಪು+ಇಲ್ಲ; ಹುರುಪು=ಹುಮ್ಮಸ್ಸು;

ಸಿಡಿಲನು ಸಿಡಿಯುತೆ ಮೊಳಗುತೆ ನುಗ್ಗುವ ಕಾರ್ಗಾಲದ ಕರ್ಮುಗಿಲಿಂ ಹೊಮ್ಮುವ ಕೆಂಗಿಡೆ ಬಣ್ಣದ ಹೊಂಗೆರೆ ಮಿಂಚಿಗೆ ಆಸ್ಥಾನದ ದಾಸ್ಯದ ಹುರುಪಿಲ್ಲ=ಮುಂಗಾರಿನ ಕಪ್ಪು ಮೋಡಗಳ ಎಡೆಯಿಂದ ಹೊರಹೊಮ್ಮುತ್ತಿರುವ ಸಿಡಿಲ ಗರ್ಜನೆಗೆ ಮೊದಲು ಹೊರಹೊಮ್ಮುವ ಚಿನ್ನದ ಗೆರೆಯ ಕೋಲ್ಮಿಂಚಿಗೆ ರಾಜನ ಒಡ್ಡೋಲಗದಲ್ಲಿ ಮಯ್ ಮನವನ್ನು ಮುದುಡಿಕೊಂಡು ಅಡಿಯಾಳಿನಂತೆ ನಡೆದುಕೊಳ್ಳಬೇಕಾದ ಅಗತ್ಯವಿಲ್ಲ;

ಮುತ್ತು=ಕವಿದಿರುವ/ಆವರಿಸಿರುವ; ಬಾನ್+ಅಲಿ; ಬಾನು=ಆಕಾಶ; ಬಾನಲಿ=ಆಕಾಶದಲ್ಲಿ; ಮಿಣುಕು=ಹೊಳೆಹೊಳೆಯುತ್ತಿರುವ; ತಾರೆ=ಚುಕ್ಕಿ; ದೊರೆ+ಆಣತಿ; ಆಣತಿ=ಅಪ್ಪಣೆ; ತೃಣ+ಇಲ್ಲ; ತೃಣ=ತುಸು/ಕಿಂಚಿತ್ತು ; ತೃಣವಿಲ್ಲ=ಕಿಂಚಿತ್ತಾದರೂ ಇಲ್ಲ;

ಕತ್ತಲೆ ಮುತ್ತಿದ ಬಾನಲಿ ಮಿಣುಕುವ ತಾರೆಗೆ ದೊರೆಯಾಣತಿ ತೃಣವಿಲ್ಲ=ಕತ್ತಲೆಯಿಂದ ತುಂಬಿರುವ ಗಗನದಲ್ಲಿ ಮಿಣುಕುತ್ತಿರುವ ಚುಕ್ಕಿಗೆ ದೊರೆಯ ಅಪ್ಪಣೆಯು ಕಿಂಚಿತ್ತಾದರೂ ತಟ್ಟುವುದಿಲ್ಲ;

ವಿಪ್ಲವ=ಕ್ರಾಂತಿ; ಮೂರ್ತಿ=ಪ್ರತಿಮೆ/ವಿಗ್ರಹ; ವಿಪ್ಲವಮೂರ್ತಿ=ಕ್ರಾಂತಿಕಾರಿ/ಕೆಡುಕನ್ನು ನಾಶಪಡಿಸಿ, ಒಳಿತನ್ನು ನೆಲೆಗೊಳಿಸುವ ವ್ಯಕ್ತಿ; ಸಖನ್+ಆಗಿ+ಇಹನ್ನೈ; ಸಖ=ಗೆಳೆಯ; ಇಹನ್=ಇರುವನು; ಆಗಿಹನ್ನೈ=ಆಗಿದ್ದಾನೆ; ಕವಿಗೆ+ಅರಸು+ಗಿರಸು+ಗಳ; ಕವಿ=ಕಾವ್ಯವನ್ನು ರಚಿಸುವವನು;

ಅರಸುಗಿರಸು=ಯಾವುದೇ ವ್ಯಕ್ತಿ ಇಲ್ಲವೇ ವಸ್ತುವಿನ ಬಗ್ಗೆ ಬೇಸರವನ್ನು ಇಲ್ಲವೇ ತಿರಸ್ಕಾರವನ್ನು ಸೂಚಿಸುವಾಗ ಈ ರೀತಿಯ ಪದಗಳನ್ನು ಬಳಸಲಾಗುತ್ತದೆ; ಋಣ+ಇಲ್ಲ; ಋಣ=ಹಂಗು;

ವಿಪ್ಲವ ಮೂರ್ತಿಯ ಸಖನಾಗಿಹನ್ನೈ ಕವಿಗರಸುಗಿರಸುಗಳ ಋಣವಿಲ್ಲ=ಕ್ರಾಂತಿಕಾರಿಯ ಗೆಳೆಯನಾಗಿರುವ ಕವಿಗೆ ಅರಸನ ಹಂಗಿಲ್ಲ;

ಅವನ್+ಅಗ್ನಿ+ಮುಖಿ; ಅವನ್=ಕವಿಯು; ಅಗ್ನಿ=ಬೆಂಕಿ; ಮುಖಿ=ಮೊಗದವನು; ಅಗ್ನಿಮುಖಿ=ಬೆಂಕಿಯಂತೆ ಉರಿಯುವವನು; ಪ್ರಳಯ=ನಾಶ/ಅಳಿವು/ಎಲ್ಲವನ್ನೂ

ಕೊನೆಗೊಳಿಸುವುದು; ಶಿಖಿ=ಬೆಂಕಿ; ಪ್ರಳಯಶಿಖಿ=ಪ್ರಳಯಕಾಲದ ಬೆಂಕಿಯಂತಿರುವವನು;

ಜನಪರವಾಗಿ ಚಿಂತಿಸುವ ಮತ್ತು ಜನರ ಒಳಿತಿಗಾಗಿ ಹೋರಾಡುವ ಕವಿಯು ರಾಜನಿಂದ ಯಾವುದೇ ಬಗೆಯ ಬಿರುದನ್ನು ಬಯಸುವುದಿಲ್ಲ; ರಾಜನನ್ನು ಕಂಡು ಅಂಜುವುದಿಲ್ಲ; ರಾಜನಿಂದ ಉಂಟಾಗುವ ಹಿಂಸೆಯನ್ನು ಲೆಕ್ಕಿಸುವುದಿಲ್ಲ; ರಾಜನ ಮೆಚ್ಚುಗೆಗಾಗಿ ನಡುಬಗ್ಗಿಸಿ ತಲೆತಗ್ಗಿಸಿ ನಡೆಯುವುದಿಲ್ಲ; ರಾಜನಿಗೆ ಅಡಿಯಾಳಾಗುವುದಿಲ್ಲ;

ನಿಸರ್ಗದ ನೆಲೆಯಲ್ಲಿ ಹಾಡುವ ಕೋಗಿಲೆ, ಅರಳುವ ಹೂವು, ಕುಣಿಯುವ ನವಿಲು, ತೇಲುವ ಮೋಡ, ಹೊಳೆಯುವ ಬೆಳುದಿಂಗಳು, ಮೊಳಗುವ ಸಿಡಿಲು, ಕಂಗೊಳಿಸುವ ಮಿಂಚು, ಮಿನುಗುವ ಚುಕ್ಕಿಗಳು ಹೇಗೆ ನಿರಂಕುಶವಾಗಿ ಅಂದರೆ ಯಾವುದೇ ಬಗೆಯ ಅಂಕೆಶಂಕೆಗಳಿಗೆ ಒಳಗಾಗದೆ ಸಹಜವಾಗಿ ತಂತಮ್ಮ ಇರುವಿಕೆಯನ್ನು ತೋರಿಸುತ್ತವೆಯೋ ಅಂತೆಯೇ ಕವಿಯು ನಿರಂಕುಶಮತಿಯಾಗಿರಬೇಕು. ಇಲ್ಲದಿದ್ದರೆ ರಾಜನಿಂದ ಬಿರುದನ್ನು ಪಡೆಯುವ ಕವಿಯು ರಾಜನ ಹಂಗಿಗೆ ಒಳಗಾಗುತ್ತಾನೆ; ರಾಜನನ್ನು ಕಂಡು ಹೆದರುವ ಕವಿಯು ರಾಜನ ತಪ್ಪುಗಳನ್ನು ಗುರುತಿಸಿ ಹೇಳುವ ಎದೆಗಾರಿಕೆಯನ್ನು ಕಳೆದುಕೊಳ್ಳುತ್ತಾನೆ; ರಾಜನು ನೀಡುವ ದಂಡನೆಗೆ ನಡುಗುವ ಕವಿಯು ರಾಜನ ದಬ್ಬಾಳಿಕೆಯ ಆಡಳಿತವನ್ನು ಮೂಕನಾಗಿ ಸಹಿಸಿಕೊಳ್ಳುತ್ತಾನೆ; ರಾಜನು ನೀಡುವ ಸಂಪತ್ತಿಗೆ ಕಯ್ ಒಡ್ಡುವ ಕವಿಯು ರಾಜನಿಗೆ ಅಡಿಯಾಳಾಗುತ್ತಾನೆ. ಈ ರೀತಿಯ ನಡೆನುಡಿಗಳಿಂದ ತನ್ನ ವ್ಯಕ್ತಿತ್ವವನ್ನೇ ಕಳೆದುಕೊಂಡ ವ್ಯಕ್ತಿಯು ಎಂದಿಗೂ ಕವಿಯಾಗಲಾರ.

ಕವಿಯ ವ್ಯಕ್ತಿತ್ವವನ್ನು 'ಅಗ್ನಿಮುಖಿ ಪ್ರಳಯಶಿಖಿ' ಎಂಬ ರೂಪಕದ ನುಡಿಯಲ್ಲಿ ಬಣ್ಣಿಸಲಾಗಿದೆ. ಪ್ರಳಯದ ಬೆಂಕಿಯು ಜಗತ್ತಿನಲ್ಲಿ ಇರುವುದೆಲ್ಲವನ್ನೂ ಸುಟ್ಟು ಬರಿದುಮಾಡಿ, ಹೊಸ ಹುಟ್ಟಿಗೆ ಹೇಗೆ ಕಾರಣವಾಗುವುದೋ ಅಂತೆಯೇ ರಾಜನ ಆಳ್ವಿಕೆಯಲ್ಲಿ ಕಂಡುಬರುವ ಸುಲಿಗೆ, ವಂಚನೆ ಮತ್ತು ಕ್ರೂರತನದ ದಬ್ಬಾಳಿಕೆಯನ್ನು ಕವಿಯು ತನ್ನ ಬರಹದಿಂದ ಜನಸಮುದಾಯಕ್ಕೆ ಮನವರಿಕೆ ಮಾಡಿ, ಅವರನ್ನು ಅರಿವಿನ ಮೂಲಕ ಎಚ್ಚರಿಸಿ, ರಾಜನ ಆಡಳಿತದಲ್ಲಿರುವ ಕೆಟ್ಟದ್ದರ ಎದುರಾಗಿ ಹೋರಾಡಬಲ್ಲ ಕಸುವನ್ನು ಜನಮನದಲ್ಲಿ ತುಂಬುತ್ತಾನೆ. ರಾಜನ ದುರಾಡಳಿತವನ್ನು ಕೊನೆಗಾಣಿಸಿ, ಜನಸಮುದಾಯದ ಬದುಕಿನಲ್ಲಿ ಒಳಿತನ್ನು ನೆಲೆಗೊಳಿಸಬಲ್ಲ ವ್ಯಕ್ತಿತ್ವವನ್ನು ಕವಿಯು ಹೊಂದಿದ್ದಾನೆ ಎಂಬುದನ್ನು 'ಅವನ್ ಅಗ್ನಿಮುಖಿ ಪ್ರಲಯಶಿಖಿ' ಎಂಬ ರೂಪಕದ ನುಡಿಗಳು ಸೂಚಿಸುತ್ತವೆ.)

❖❖

೪. ಇಂದಿನ ದೇವರು

ನೂರು ದೇವರನೆಲ್ಲ ನೂಕಾಚೆ ದೂರ
ಭಾರತಾಂಬೆಯೆ ದೇವಿ ನಮಗಿಂದು ಪೂಜಿಸುವ ಬಾರ

ಶತಮಾನಗಳು ಬರಿಯ ಜಡಶಿಲೆಯ ಪೂಜಿಸಾಯ್ತು
ಹಾವ್ಗಳಿಗೆ ಹಾಲೆರೆದು ಪೋಷಿಸಾಯ್ತು
ಬಿಸಿಲು ಮಳೆ ಗಾಳಿ ಬೆಂಕಿಯನೆಲ್ಲ ಬೇಡಿಯಾಯ್ತು
ದಾಸರನು ಪೂಜಿಸಿಯೆ ದಾಸ್ಯವಾಯ್ತು

ಗುಡಿಯೊಳಗೆ ಕಣ್ ಮುಚ್ಚಿ ಬೆಚ್ಚಗಿರುವರನೆಲ್ಲ
ಭಕ್ತ ರಕ್ತವ ಹೀರಿ ಕೊಬ್ಬಿಹರನೆಲ್ಲ
ಗಂಟೆ ಜಾಗಟೆಗಳಿಂ ಬಡಿದು ಕುತ್ತಿಗೆ ಹಿಡಿದು
ಕಡಲಡಿಗೆ ತಳ್ಳಿರೈ ಶಂಖದಿಂ ನುಡಿದು

ನಿದ್ದೆ ಮಾಡುತ್ತಿಹರು ಹಲವು ದೇವತೆಗಳೆಲ್ಲ
ಬಿದ್ದವರು ಕಲ್ಲಾಗಿ ಕೆಲವರಿಹರು
ಕ್ಲೀಬತನದಲಿ ಮರೆತು ತಮ್ಮ ಪೌರುಷವನೆಲ್ಲ
ಸತ್ತೆ ಹೋದಂತಿಹರು ಮತ್ತುಳಿದಮರರು

ಅವರ ಗುಡಿ ಹಾಳಾಯ್ತು ಅವರ ನುಡಿ ಮಡಿದುಹೋಯ್ತು
ಅವರ ನೆಮ್ಮಿದ ನಮಗೆ ಬೀಳುಗತಿಯಾಯ್ತು
ಮುಂದಿವಳನಾರಾಧಿಸುವ ಶಕ್ತಿಯಾರ್ಜಿಸುವ
ಒಂದು ಶತಮಾನವನು ಒಂದೆ ದಿನ ಜೈಸುವ

ಸತ್ತ ಕಲ್ಗಳ ಮುಂದೆ ಅತ್ತು ಕರೆದುದು ಸಾಕು
ಜೀವದಾತೆಯನಿಂದು ಕೂಗಬೇಕು
ಶಿಲೆಯ ಮೂರ್ತಿಗೆ ನೆಯ್ದ ಕಲೆಯ ಹೊದಿಕೆಯನೊಯ್ದು
ಚಳಿಯು ಮಳೆಯಲಿ ನವೆವ ತಾಯ್ಗೆ ಹಾಕು

ಭಾರತಾಂಬೆಯೆ ನಮಗಿಂದು ಜೀವನದ ದೇವತೆಯು
ವಿಶ್ವರೂಪಿಣಿಯವಳು ವಿಶ್ವಮುಖಿಯೈ
ನಮ್ಮೆಲ್ಲರಂಗಗಳೆ ನಮ್ಮಂಬೆಯಂಗವೈ
ನಮ್ಮ ಸ್ವಾತಂತ್ರ್ಯದೊಳೆ ನಮ್ಮಮ್ಮ ಸುಖಿಯೈ

ಇಂದೊ ನಾಳೆಯೊ ದಾಸನೀಶನಾಗಲೆ ಬೇಕು
ಎಂದಿದೆ ಎದ್ದೇಳಿ ನಾಳೆಯೆನೆ ಹೋಕು
ನಾವೆ ದೇವತೆಗಳೈ ಭಾರತವೆ ಸ್ವರ್ಗವೈ
ಭಾರತಾಂಬೆಯೆ ನಮಗೆ ದೇವಿಯೈ ಜನನಿ.

ಭಾರತೀಯರು ತಮ್ಮ ಮಯ್ ಮನಕ್ಕೆ ಕಟ್ಟಬಿಗಿದಿರುವ ದಾಸ್ಯದ ಸಂಕೋಲೆಗಳನ್ನು ತಾವೇ ಕಿತ್ತೊಗೆದು, ತಮ್ಮ ಬದುಕನ್ನು ಒಳ್ಳೆಯ ರೀತಿಯಲ್ಲಿ ತಾವೇ ರೂಪಿಸಿಕೊಂಡು, ತಾಯಿ ಸಮಾನಳಾದ ಭಾರತಾಂಬೆಯೊಬ್ಬಳನ್ನೇ ದೇವರೆಂದು ತಿಳಿದು ಪೂಜಿಸುವಂತೆ ಈ ಕವನದಲ್ಲಿ ಕರೆ ನೀಡಲಾಗಿದೆ.

ಕ್ರಿ.ಶ.೧೯೩೧ ರಲ್ಲಿ ಈ ಕವನ ರಚನೆಗೊಂಡಿದೆ. ಅಂದು ಇಂಡಿಯಾ ದೇಶದ ಜನಸಮುದಾಯವು ಆಂಗ್ಲರ ಆಡಳಿತದಲ್ಲಿ ರಾಜಕೀಯ ದಾಸ್ಯಕ್ಕೆ ಸಿಲುಕಿರುವುದರ ಜತೆಗೆ ನೂರಾರು ದೇವರುಗಳನ್ನು ಪೂಜಿಸುತ್ತ ಮಾನಸಿಕ ದಾಸ್ಯದಿಂದ ನರಳುತ್ತಿತ್ತು.

(ಇಂದು=ಈಗ/ಈ ದಿನ; ದೇವರು=ಜೀವನದಲ್ಲಿ ಬರುವ ಎಡರು ತೊಡರುಗಳನ್ನು ನಿವಾರಿಸಿ, ತಮಗೆ ಒಳಿತನ್ನು ಮಾಡಿ ಕಾಪಾಡುವ ವ್ಯಕ್ತಿಯನ್ನು ಇಲ್ಲವೇ ಶಕ್ತಿಯನ್ನು ದೇವರೆಂದು ಮಾನವ ಸಮುದಾಯ ಕಲ್ಪಿಸಿಕೊಂಡಿದೆ;

ಇಂದಿನ ದೇವರು=ದೇಶದ ಜನಸಮುದಾಯದ ಮಯ್ ಮನವನ್ನು ಕಟ್ಟಿ ಬಿಗಿದಿರುವ ದಾಸ್ಯದ ಸಂಕೋಲೆಗಳನ್ನು ಕಡಿದು ತುಂಡರಿಸಿ, ಒಳ್ಳೆಯ ಬದುಕನ್ನು ನೀಡುವ ದೇವರು. ವ್ಯಕ್ತಿಯ ಮಯ್ ಮನದಲ್ಲಿ ಒಳಿತಿನ ನಡೆನುಡಿಗಳಿಗೆ ಪ್ರೇರಣೆಯನ್ನು ನೀಡುವ ಅರಿವು ಮತ್ತು ಸಾಮಾಜಿಕ ಎಚ್ಚರವನ್ನು 'ಇಂದಿನ ದೇವರು' ಎಂದು ಕರೆಯಲಾಗಿದೆ;

ದೇವರ್+ಅನ್+ಎಲ್ಲ; ಅನ್=ಅನ್ನು; ನೂಕು+ಆಚೆ; ನೂಕು=ತಳ್ಳು; ಆಚೆ=ಹೊರಗಡೆ;

ನೂರು ದೇವರನೆಲ್ಲ ನೂಕಾಚೆ ದೂರ=ಇದುವರೆಗೆ ನೀನು ಪೂಜಿಸಿಕೊಂಡು ಬಂದಿರುವ ಎಲ್ಲ ದೇವರನ್ನು ನಿನ್ನಿಂದ ಬಹು ದೂರ ತಳ್ಳು. ನಿನ್ನ ಮನಸ್ಸಿನಿಂದಲೇ ಹೊರಹಾಕು. ಏಕೆಂದರೆ ನಿನ್ನ ಬದುಕನ್ನು ಒಳ್ಳೆಯ ರೀತಿಯಲ್ಲಿ ರೂಪಿಸಿಕೊಳ್ಳಲು

ಯಾವ ದೇವರನ್ನು ನೀನು ಅವಲಂಬಿಸಬೇಕಾಗಿಲ್ಲ. ನಿನ್ನ ಬದುಕನ್ನು ಒಳ್ಳೆಯ ರೀತಿಯಲ್ಲಿ ರೂಪಿಸಿಕೊಳ್ಳುವ ಶಕ್ತಿಯು ನಿನ್ನಲ್ಲಿಯೇ ಇದೆ ಎಂಬುದನ್ನು ತಿಳಿ;

ಭಾರತ+ಅಂಬೆ; ಭಾರತ=ದೇಶದ ಜನಸಮುದಾಯ ನೆಲೆಸಿರುವ ಪ್ರಾಂತ್ಯದ ಹೆಸರು; ಅಂಬೆ=ತಾಯಿ; ಭಾರತಾಂಬೆ=ಭಾರತ ಮಾತೆ; ದೇವಿ=ದೇವತೆ; ನಮಗೆ+ಇಂದು; ಪೂಜೆ=ದೇವರ ವಿಗ್ರಹದ ಮುಂದೆ ಹೂಹಣ್ಣುಕಾಯಿಗಳನ್ನು ಸಲ್ಲಿಸಿ, ದೂಪದೀಪಗಳನ್ನು ಬೆಳಗುವ ಆಚರಣೆ; ಬಾರ=ಬನ್ನಿರಿ;

ಭಾರತಾಂಬೆಯೆ ದೇವಿ ನಮಗಿಂದು ಪೂಜಿಸುವ ಬಾರ=ಇಂದಿನಿಂದ ಭಾರತಾಂಬೆಯನ್ನು ಮಾತ್ರ ದೇವರೆಂದು ತಿಳಿದು ಪೂಜಿಸೋಣ ಬನ್ನಿರಿ. ನಾವು ಪೂಜಿಸುವ ಭಾರತಾಂಬೆಯು ಇನ್ನಿತರ ದೇವರುಗಳಂತೆ ಕಲ್ಲು, ಮಣ್ಣು, ಮರ, ಲೋಹದಿಂದ ಮಾಡಿದ ವಿಗ್ರಹರೂಪಿಯಲ್ಲ. ಅವಳು ದೇಶದ ಜನಮಾನಸದಲ್ಲಿ ನೆಲೆಸಿರುವ ದೇವಿ. ಆಕೆಯನ್ನು ಪೂಜಿಸುವುದು ಎಂದರೆ ಅವಳಿಗೆ ಹೂವು ಹಣ್ಣು ಕಾಯಿಗಳನ್ನು ಸಲ್ಲಿಸುವುದಲ್ಲ; ಅವಳ ಮುಂದೆ ದೂಪ ದೀಪಗಳನ್ನು ಬೆಳಗುವುದಲ್ಲ; ದೇಶದಲ್ಲಿರುವ ಪ್ರತಿಯೊಬ್ಬ ವ್ಯಕ್ತಿಯು ತನ್ನ ಮತ್ತು ತನ್ನ ಕುಟುಂಬದ ಹಿತವನ್ನು ಕಾಪಾಡಿಕೊಳ್ಳುವಂತೆಯೇ ಸಹಮಾನವರ, ಸಮಾಜದ ಮತ್ತು ದೇಶದ ಹಿತಕ್ಕಾಗಿ ಪ್ರಾಮಾಣಿಕವಾದ ನಡೆನುಡಿಗಳಿಂದ ಬಾಳುವುದೇ ಭಾರತಾಂಬೆಗೆ ಮಾಡುವ ಪೂಜೆಯಾಗಿರುತ್ತದೆ;

ಶತಮಾನ=ಒಂದು ನೂರು ವರ್ಷ; ಬರಿ=ಕೇವಲ; ಜಡ=ಜೀವವಿಲ್ಲದ್ದು; ಶಿಲೆ=ಕಲ್ಲು; ಜಡಶಿಲೆ=ಕಲ್ಲಿನಿಂದ ರೂಪುಗೊಂಡಿರುವ ದೇವರ ವಿಗ್ರಹ; ಪೂಜಿಸಿ+ಆಯ್ತು; ಪೂಜಿಸಾಯ್ತು=ಪೂಜೆಯನ್ನು ಮಾಡಿದೆವು; ಪಾವ್+ಗಳಿಗೆ; ಪಾವು=ಹಾವು ; ಪಾಲ್+ಎರೆದು; ಪಾಲ್=ಹಾಲು; ಎರೆ=ಸುರಿ; ಪಾಲೆರೆದು=ನಾಗರಕಲ್ಲಿನ ಮೇಲೆ ಹಾಲನ್ನು ಎರೆದು ಪೂಜಿಸುವ ಆಚರಣೆ; ಪೋಷಿಸಿ+ಆಯ್ತು; ಪೋಷಿಸು=ಸಲಹು; ಬೇಡಿ+ಆಯ್ತು; ಬೇಡು=ಯಾಚಿಸು;

ದಾಸರು=ಮಾನವ ಜೀವನದ ಒಳಿತು ಕೆಡುಕುಗಳೆಲ್ಲಕ್ಕೂ ದೇವರೇ ಕಾರಣ. ಮಾನವರಾದ ನಾವು ಕೇವಲ ಅವನ ಕಯ್ ಗೊಂಬೆಗಳು. ಮಾನವರ ಬದುಕನ್ನು ನಿಯಂತ್ರಿಸುವ ಮತ್ತು ಮುನ್ನಡೆಸುವ ಶಕ್ತಿಯು ದೇವರಲ್ಲಿದೆ. ಅವನ ಇಚ್ಚೆಯಂತೆಯೇ ಜಗತ್ತು ನಡೆಯುತ್ತಿದೆ. ಅವನ ಅಪ್ಪಣೆಯಿಲ್ಲದೆ ಒಂದು ಹುಲ್ಲು ಕಡ್ಡಿಯು ಅಲುಗದು. ಆದ್ದರಿಂದ ದೇವರಿಗೆ ನಾವು ಸಂಪೂರ್‍ಣವಾಗಿ ಶರಣಾಗಬೇಕು ಎಂದು ಜನಗಳಿಗೆ ಹೇಳಿದವರು;

ಪೂಜಿಸಿಯೆ=ದಾಸರ ಮಾತುಗಳನ್ನು ನಂಬಿ ನಡೆದದ್ದರಿಂದಲೇ; ದಾಸ್ಯ+ಆಯ್ತು; ದಾಸ್ಯ=ಅಡಿಯಾಳುತನ;

ದಾಸರನು ಪೂಜಿಸಿಯೆ ದಾಸ್ಯವಾಯ್ತು=ದಿಟ್ಟತನದಿಂದ ಹಗೆಗಳನ್ನು ಎದುರಿಸುವ ಬದಲು ದೇವರು ಮಾಡಿದಂತಾಗಲಿ ಎಂದು ಕಯ್ ಕಟ್ಟಿ ಕುಳಿತಿದ್ದರಿಂದಲೇ ನಮ್ಮ ದೇಶದ ಮೇಲೆ ದಂಡೆತ್ತಿ ಬಂದವರು ಮತ್ತು ನಮ್ಮ ದೇಶಕ್ಕೆ ವ್ಯಾಪಾರಿಗಳಾಗಿ ಬಂದವರು ನಮ್ಮ ದೇಶವನ್ನು ವಶಪಡಿಸಿಕೊಂಡು ಆಳತೊಡಗಿದ್ದರಿಂದ ಭಾರತೀಯರು ನೂರಾರು ವರುಶಗಳ ಕಾಲ ಸ್ವಾತಂತ್ರ್ಯವನ್ನು ಕಳೆದುಕೊಂಡು ಅನ್ಯರಿಗೆ ಅಡಿಯಾಳಾದರು;

ಗುಡಿ+ಒಳಗೆ; ಗುಡಿ=ದೇಗುಲ; ಬೆಚ್ಚಗೆ+ಇರುವವರನ್+ಎಲ್ಲ; ಬೆಚ್ಚಗೆ= ನೆಮ್ಮದಿಯಾಗಿ; ಭಕ್ತ=ದೇವರನ್ನು ನಂಬಿದವನು; ರಕ್ತ=ನೆತ್ತರು; ಹೀರು=ಕುಡಿ; ಕೊಬ್ಬು+ಇಹರನ್+ಎಲ್ಲ; ಕೊಬ್ಬು=ದಪ್ಪನಾಗು/ನೆಣ; ಇಹರನ್=ಇರುವವರನ್ನು; ಕೊಬ್ಬಿಹರನ್=ಸೊಕ್ಕಿನಿಂದ ಮೆರೆಯುತ್ತಿರುವವರನ್ನು; ಗಂಟೆ=ಕಂಚು ಹಿತ್ತಾಳೆ ಮುಂತಾದ ಲೋಹಗಳಿಂದ ಮಾಡಿರುವ ಉಪಕರಣ. ಇದರಿಂದ ನಾದವನ್ನು ಹೊಮ್ಮಿಸಲಾಗುತ್ತದೆ; ಜಾಗಟೆ=ದನಿಯನ್ನು ಹೊರಡಿಸಲು ಬಳಸುವ ಉಪಕರಣ; ಬಡಿದು=ದನಿ ಹೊರಡುವಂತೆ ಮಾಡಿ; ಕುತ್ತಿಗೆ=ಕೊರಳು; ಕಡಲ್+ಅಡಿಗೆ; ಕಡಲ್=ಸಮುದ್ರ; ಅಡಿ=ಕೆಳಕ್ಕೆ; ತಳ್ಳಿರೈ=ತಳ್ಳಿರಿ; ಶಂಖ=ನಾದವನ್ನು ಹೊಮ್ಮಿಸುವ ಒಂದು ಬಗೆಯ ವಾದ್ಯ ; ಶಂಖದಿಂ ನುಡಿದು=ಶಂಖದಿಂದ ನಾದವನ್ನು ಮಾಡುತ್ತ;

ನಿದ್ದೆಮಾಡುತ್ತ+ಇಹರು; ದೇವತೆ+ಗಳ್+ಎಲ್ಲ; ದೇವತೆ=ಪ್ರಾಚೀನ ಕಾಲದಿಂದಲೂ ಜನಮನದ ಕಲ್ಪನೆಯಲ್ಲಿ ಮೂಡಿಬಂದಿರುವ ದೇವರುಗಳು; ಕೆಲವರ್+ಇಹರು; ಇಹರು=ಇರುವರು; ಕಲ್ಲಾಗಿ ಕೆಲವರಿಹರು=ಕೆಲವರು ಜಡರಾಗಿದ್ದಾರೆ;

ಕ್ಲೀಬತನ=ಹೇಡಿತನ; ಪೌರುಷ+ಅನ್+ಎಲ್ಲ; ಪೌರುಷ=ಜೀವಿಯು ತಾನು ಉಳಿದು ಬೆಳೆದು ಬಾಳುವುದಕ್ಕಾಗಿ ಮಾಡುವ ಪ್ರಯತ್ನಗಳು; ಅನ್=ಅನ್ನು; ಸತ್ತೆಹೋದಂತೆ+ಇಹರು; ಮತ್ತ್+ಉಳಿದ+ಅಮರರು; ಅಮರ=ದೇವತೆ;

ಹಾಳ್+ಆಯ್ತು; ಹಾಳು=ನಾಶ; ನುಡಿ=ಮಾತು/ಸೊಲ್ಲು; ಮಡಿದುಹೋಯ್ತು= ಇಲ್ಲವಾಯಿತು; ನೆಮ್ಮು=ಅವಲಂಬಿಸು; ಬೀಳುಗತಿ+ಆಯ್ತು; ಬೀಳುಗತಿ=ಕುಸಿತ;

ಮುಂದೆ+ಇವಳನ್+ಆರಾಧಿಸುವ; ಆರಾಧಿಸು=ಪೂಜಿಸು; ಶಕ್ತಿ+ಆರ್ಜಿಸುವ; ಶಕ್ತಿ=ಕಸುವು; ಆರ್ಜಿಸು=ಸಂಪಾದಿಸು; ಜೈಸುವ=ಗೆಲುವನ್ನು ಪಡೆಯೋಣ; ಸತ್ತ ಕಲ್ಗಳು=ಜಡರೂಪದ ದೇವರ ವಿಗ್ರಹಗಳು;

ಜೀವದಾತೆ+ಅನ್+ಇಂದು; ಜೀವದಾತೆ=ಉಸಿರನ್ನು ನೀಡಿದವಳು; ಕೂಗಬೇಕು=ಕರೆಯಬೇಕು; ಶಿಲೆ=ಕಲ್ಲು; ಮೂರ್ತಿ=ವಿಗ್ರಹ; ಶಿಲೆಯ ಮೂರ್ತಿ=ದೇವರ ಕಲ್ಲಿನ ವಿಗ್ರಹ; ನೆಯ್=ಹತ್ತಿಯ ನೂಲನ್ನು ಹೆಣೆದು ಬಟ್ಟೆಯನ್ನು ತಯಾರಿಸುವುದು; ಕಲೆ=ಕುಶಲ ವಿದ್ಯೆ; ಹೊದಿಕೆ+ಅನ್+ಒಯ್ದು; ಹೊದಿಕೆ=ಚಳಿಮಳೆಗಾಳಿಯಿಂದ

ಕಾಪಾಡಿಕೊಳ್ಳಲು ಮಯ್ ಮೇಲೆ ಹಾಕಿಕೊಳ್ಳುವ ಅಗಲವಾಗಿಯೂ ಉದ್ದವಾಗಿಯೂ ಇರುವ ಬಟ್ಟೆ; ಒಯ್=ತೆಗೆದುಕೊಂಡು ಹೋಗು; ನವೆ=ಕೊರಗುತ್ತಿರುವ; ತಾಯ್ಗೆ=ತಾಯಿಗೆ;

ಶಿಲೆಯ ಮೂರ್ತಿಗೆ ನೆಯ್ದ ಕಲೆಯ ಹೊದಿಕೆಯನೊಯ್ದು ಚಳಿಯು ಮಳೆಯಲಿ ನವೆವ ತಾಯ್ಗೆ ಹಾಕು=ಜಡರೂಪಿಯಾದ ದೇವರಿಗೆ ಹೊದಿಸಬೇಕೆಂದು ನೆಯ್ದಿರುವ ಹೊದಿಕೆಯನ್ನು ತೆಗೆದುಕೊಂಡು ಹೋಗಿ ಚಳಿಯಲ್ಲಿ ನಡುಗುತ್ತ ಸಂಕಟಪಡುತ್ತಿರುವ ಜೀವಂತ ತಾಯಿಗೆ ಹೊದಿಸು;

ಭಾರತಿ=ಇಂಡಿಯಾ ದೇಶದ ಜನಮಾನಸದಲ್ಲಿ ನೆಲೆಸಿರುವ ದೇವತೆ; ನಮಗೆ+ಇಂದು; ಜೀವನ=ಬದುಕು/ಬಾಳ್ವೆ; ವಿಶ್ವರೂಪಿಣಿ+ಇವಳು; ವಿಶ್ವರೂಪಿಣಿ= ಜಗತ್ತನ್ನೇ ತನ್ನಲ್ಲಿ ಒಳಗೊಂಡವಳು; ವಿಶ್ವಮುಖಿ=ಜಗತ್ತಿನತ್ತ ಮೊಗಮಾಡಿದವಳು. ಅಂದರೆ ಜಗತ್ತಿನ ಜನರೆಲ್ಲರ ಒಳಿತನ್ನು ಬಯಸುವವಳು; ನಮ್ಮ+ಎಲ್ಲರ+ಅಂಗಗಳೆ; ಅಂಗ=ದೇಹ; ನಮ್ಮ+ಅಂಬೆಯ+ಅಂಗವೈ;

ನಮ್ಮೆಲ್ಲರಂಗಗಳೆ ನಮ್ಮಂಬೆಯಂಗವೈ=ನಮ್ಮ ಮಯ್ ಮನದಲ್ಲಿಯೇ ನಮ್ಮ ತಾಯಿಯು ನೆಲೆಸಿದ್ದಾಳೆ. ಆದ್ದರಿಂದ ನಮ್ಮ ಒಳಿತಿನ ಜತೆಜತೆಗೆ ಸಹಮಾನವರ, ಸಮಾಜದ ಮತ್ತು ದೇಶದ ಒಳಿತಾಗಿ ನಾವು ಮಾಡುವ ಕೆಲಸಗಳೇ ಭಾರತಾಂಬೆಗೆ ಮಾಡುವ ಪೂಜೆಯಾಗುತ್ತದೆ;

ಸ್ವಾತಂತ್ರ್ಯ=ವ್ಯಕ್ತಿಯು ಯಾರೊಬ್ಬರ ಇಲ್ಲವೇ ಯಾವುದೇ ಶಕ್ತಿಯ ಅಡಿಯಾಳಾಗದೇ ಇರುವುದು; ಸ್ವಾತಂತ್ರ್ಯದೊಳೆ=ಸ್ವಾತಂತ್ರ್ಯದ ಜೀವನದಿಂದಲೇ; ನಮ್ಮ+ಅಮ್ಮ; ನಮ್ಮಮ್ಮ=ನಮ್ಮ ತಾಯಿಯಾದ ಭಾರತಿಯು; ಸುಖ=ಆನಂದ ಮತ್ತು ನೆಮ್ಮದಿ; ಸುಖಿಯೈ=ನೆಮ್ಮದಿಯನ್ನು ಹೊಂದುತ್ತಾಳೆ ;

ನಮ್ಮ ಸ್ವಾತಂತ್ರ್ಯದೊಳೆ ನಮ್ಮಮ್ಮ ಸುಖಿಯೈ=ದಾಸ್ಯದ ಎದುರು ಹೋರಾಡಿ ನಾವು ಸ್ವಾತಂತ್ರ್ಯವನ್ನು ಪಡೆದರೆ ತಾಯಿ ಭಾರತಿಯು ನೆಮ್ಮದಿಯಿಂದ ಬಾಳುತ್ತಾಳೆ;

ದಾಸನ್+ಈಶನ್+ಆಗಲೆ; ದಾಸ=ಅಡಿಯಾಳು/ಊಳಿಗದವನು; ಈಶ=ಒಡೆಯ/ ಯಜಮಾನ;

ಇಂದೊ ನಾಳೆಯೊ ದಾಸನೀಶನಾಗಲೆ ಬೇಕು=ಇಂದಲ್ಲ ನಾಳೆ ದಾಸನಾದವನು ತನ್ನ ಮಯ್ ಮನವನ್ನು ಬಿಗಿದಿರುವ ಸಂಕೋಲೆಗಳನ್ನು ಕಿತ್ತೊಗೆದು ಒಡೆಯನಾಗಲೇ ಬೇಕು. ಅಂದರೆ ಇಂಡಿಯಾದೇಶ ಸ್ವಾತಂತ್ಯವನ್ನು ಪಡೆದೇ ಪಡೆಯುತ್ತದೆ;

ಎಂದು+ಇಂದೆ; ಇಂದೆ=ಈಗಲೇ; ಎದ್ದು+ಏಳಿ; ಎದ್ದೇಳಿ=ಗುಲಾಮತನದ ಎದುರು ಹೋರಾಡಲು ಅಣಿಯಾಗಿರಿ;

ನಾಳೆ+ಎನೆ; ಎನೆ=ಎಂದರೆ; ಹೋಕು=ಕಳೆದುಹೋಗುವುದು/ಇಲ್ಲವಾಗುವುದು;

ನಾಳೆಯೆನೆ ಹೋಕು=ನಾಳೆ ಎಂದು ಆಲಸ್ಯ ಮಾಡಿದರೆ ಇಲ್ಲವೇ ಮುಂದೂಡಿದರೆ ಎಲ್ಲವೂ ಹಾಳಾಗುತ್ತದೆ;

ಸ್ವರ್ಗ=ಒಂದು ಕಲ್ಪಿತ ಲೋಕ. ಇದು ಆನಂದ ಮತ್ತು ನೆಮ್ಮದಿಯ ತಾಣವೆಂಬ ನಂಬಿಕೆಯು ಜನಮನದಲ್ಲಿದೆ;

ನಾವೆ ದೇವತೆಗಳೈ=ಮಾನವರಾದ ನಾವೇ ದೇವತೆಗಳಾಗಿದ್ದೇವೆ. ನಮಗೆ ಅಗತ್ಯವಾದುದನ್ನು ಪಡೆಯುವ ಶಕ್ತಿಯನ್ನು ಹೊಂದಿದ್ದೇವೆ;

ದೇವಿಯೈ=ದೇವಿಯಾಗಿದ್ದಾಳೆ; ಜನನಿ=ತಾಯಿ;

ನಾವೆ ದೇವತೆಗಳೈ ಭಾರತವೇ ಸ್ವರ್ಗವೈ=ನಮ್ಮ ಬದುಕಿನಲ್ಲಿ ಬರುವ ಎಡರು ತೊಡರುಗಳನ್ನು ನಿವಾರಿಸಿಕೊಂಡು, ನಮ್ಮೆಲ್ಲರ ಬದುಕಿಗೆ ಅಗತ್ಯವಾದ ಅನ್ನ, ಬಟ್ಟೆ, ವಸತಿ, ವಿದ್ಯೆ, ಉದ್ಯೋಗ, ಆರೋಗ್ಯವನ್ನು ಪಡೆಯುವ ಶಕ್ತಿ ನಮ್ಮಲ್ಲಿಯೇ ಇದೆ. ಭಾರತ ಮಾತೆಯ ಮಕ್ಕಳಾದ ನಾವೆಲ್ಲರೂ ಪರಸ್ಪರ ಪ್ರೀತಿ, ಕರುಣೆ, ಗೆಳೆತನದಿಂದ ಜತೆಗೂಡಿ ಪ್ರಾಮಾಣಿಕವಾಗಿ ದುಡಿಯತೊಡಗಿದರೆ ಭಾರತ ದೇಶವೇ ಸ್ವರ್ಗದಂತೆ ಆನಂದ ಮತ್ತು ನೆಮ್ಮದಿಯ ನೆಲೆಬೀಡಾಗುತ್ತದೆ.)

❖❖

೫. ಆತ್ಮಶ್ರದ್ಧೆ

ಎಷ್ಟು ದೇವರ ನೀನೆಷ್ಟು ನಂಬಿದರೇನೊಂ
ದಿಷ್ಟು ನೀ ನಂಬದಿರೆ ನಿನ್ನ ನೀನು

ಹತ್ತು ಸಾವಿರ ಜನರು ಸುತ್ತಲಿದ್ದೊಡಮೇನು
ಚಿತ್ತಹತ್ಯಕೆ ಯಾರು ತಡೆಯ ಕಟ್ಟುವರಯ್ಯ

ಹೆರರ ಕೊಲ್ಲಲು ಕತ್ತಿ ಪರಶು ತೋಮರ ಬೇಕು
ತನ್ನ ಕೊಲ್ಲಲು ಸಣ್ಣದೊಂದು ಸೂಜಿಯೆ ಸಾಕು

ಶ್ರದ್ಧೆಯಿಂದಲೆ ಸೂರ್ಯ ಗಗನ ದೇಶದಿ ನಿಂತು
ನೂರು ಲೋಕವ ಹಿಡಿವ ಶಕ್ತಿ ಪಡೆದಿಹನಯ್ಯ

ಶ್ರದ್ಧೆಯಿರುವುದೆ ನಾಕ ಅಶ್ರದ್ಧೆಯೇ ನರಕ
ಶ್ರದ್ಧೆಯಿದ್ದರೆ ಕೋಟಿ ದೇವರೆಮಗಾಳಯ್ಯ

ಮಾನವನೆ ದೇವತೆಯು ನರನೆ ನಾರಾಯಣನು
ನಮ್ಮ ವಿಶ್ವಕೆ ನಾವೆ ನಿರುಪಮಾದ್ಭುತವಯ್ಯ

ಕ್ರಿಸ್ತ ಬುದ್ಧರು ಎಲ್ಲ 'ಅಹಮಸ್ಮಿ' ಸಾಗರದಿ
ಮಿಂಚಿ ಮುಳುಗುವ ಬರಿಯ ಕಿರಿಯ ಬುದ್ಬುದವಯ್ಯ.

ವ್ಯಕ್ತಿಯು ತನ್ನಲ್ಲಿ ತಾನು ನಂಬಿಕೆಯನ್ನು ಇಟ್ಟುಕೊಂಡು, ಅರಿವು ಮತ್ತು ಎಚ್ಚರದಿಂದ ಕ್ರಿಯಾಶೀಲನಾಗಿ ಬಾಳುವುದು ಜೀವನದಲ್ಲಿ ಎಲ್ಲಕ್ಕಿಂತ ಮಿಗಿಲಾದುದು ಎಂಬ ಸಂಗತಿಯನ್ನು ಈ ಕವನದಲ್ಲಿ ಹೇಳಲಾಗಿದೆ.

'ತನ್ನಲ್ಲಿ ತಾನು ನಂಬಿಕೆಯನ್ನು ಇಟ್ಟುಕೊಳ್ಳುವುದು' ಎಂದರೆ ಜೀವನವನ್ನು ಒಳ್ಳೆಯ ರೀತಿಯಲ್ಲಿ ರೂಪಿಸಿಕೊಳ್ಳುವ ಶಕ್ತಿಯು ತನ್ನ ಮಯ್ ಮನದಲ್ಲಿದೆಯೇ ಹೊರತು ಬೇರೆಲ್ಲೋ ಇಲ್ಲ ಎಂಬ ವಾಸ್ತವವನ್ನು ಅರಿತುಕೊಂಡು, ತನ್ನ ಬಾಳಿನ ಆಗುಹೋಗುಗಳಿಗೆ ತಾನೇ ಹೊಣೆಗಾರನೆಂಬ ಎಚ್ಚರವನ್ನು ಹೊಂದುವುದು.

(ಆತ್ಮ=ಮನಸ್ಸು; ಶ್ರದ್ಧೆ=ನಂಬಿಕೆ/ಎಲ್ಲ ಸಂಗತಿಗಳಲ್ಲಿಯೂ ಆಸಕ್ತಿ, ಕುತೂಹಲ, ಒಳ್ಳೆಯ ಕೆಲಸವನ್ನು ಮಾಡಬೇಕೆಂಬ ಉದ್ದೇಶ ಮತ್ತು ಒಳ್ಳೆಯ ರೀತಿಯಲ್ಲಿ ಬಾಳಬೇಕೆಂಬ ಬಯಕೆ; ಆತ್ಮಶ್ರದ್ಧೆ=ವ್ಯಕ್ತಿಯು ತನ್ನಲ್ಲಿ ತಾನು ನಂಬಿಕೆಯನ್ನು ತಳೆದು, ತನ್ನ ಬದುಕನ್ನು ಒಳ್ಳೆಯ ರೀತಿಯಲ್ಲಿ ನಡೆಸಬೇಕೆಂಬ ಹಂಬಲವನ್ನು ಹೊಂದಿರುವುದು; ಎಷ್ಟು=ವಸ್ತು/ಜೀವಿ/ವ್ಯಕ್ತಿಗಳ ಸಂಕೆ, ಅಳತೆ, ಮೊತ್ತ, ಗಾತ್ರವನ್ನು ತಿಳಿಯುವುದಕ್ಕಾಗಿ ಬಳಸುವ ಪದ;

ದೇವರು=ಜೀವನದಲ್ಲಿ ಬರುವ ಎಡರು ತೊಡರುಗಳನ್ನು ನಿವಾರಿಸಿ, ತಮಗೆ ಒಳಿತನ್ನು ಮಾಡಿ ಕಾಪಾಡುವ ವ್ಯಕ್ತಿಯನ್ನು ಇಲ್ಲವೇ ಶಕ್ತಿಯನ್ನು ದೇವರೆಂದು ಮಾನವ ಸಮುದಾಯ ಕಲ್ಪಿಸಿಕೊಂಡಿದೆ; ನೀನ್+ಎಷ್ಟು; ನಂಬಿದರೆ+ಏನ್+ಒಂದು+ಇಷ್ಟು; ನಂಬು=ನೆಚ್ಚು/ಅವಲಂಬಿಸು; ಏನ್=ಯಾವುದು; ಇಷ್ಟು=ತುಸು/ಸ್ವಲ್ಪ/ಕೊಂಚ;

ಎಷ್ಟು ದೇವರ ನೀನೆಷ್ಟು ನಂಬಿದರೇನೊಂದಿಷ್ಟು ನೀ ನಂಬದಿರೆ ನಿನ್ನ ನೀನು=ನಿನ್ನ ಮಯ್ ಮನದ ಬಲವನ್ನು ಬಳಸಿಕೊಂಡು ಒಳ್ಳೆಯ ನಡೆನುಡಿಗಳಿಂದ ಬದುಕನ್ನು ರೂಪಿಸಿಕೊಳ್ಳಬಲ್ಲೆನು ಎಂಬ ನಂಬಿಕೆಯು ನಿನ್ನಲ್ಲಿ ಇಲ್ಲದೆ, ಕೇವಲ ನೂರಾರು ದೇವರುಗಳನ್ನು ನಂಬುವುದರಿಂದ ಏನೊಂದು ದೊರೆಯುವುದಿಲ್ಲ;

ಸುತ್ತಲ್+ಇದ್ದೊಡಮ್+ಏನು; ಸುತ್ತಲು=ಅಕ್ಕಪಕ್ಕ ಹಿಂದೆಮುಂದೆ ಎಲ್ಲ ಕಡೆಯಿಂದಲೂ ಬಳಸಿಕೊಂಡಿರುವುದು; ಇದ್ದೊಡಮ್=ಇದ್ದರೂ; ಚಿತ್ತ=ಮನಸ್ಸು; ಹತ್ಯ=ಕೊಲ್ಲುವಿಕೆ/ಸಾಯಿಸು; ಚಿತ್ತಹತ್ಯ=ವ್ಯಕ್ತಿಯು ತನ್ನ ಮನದೊಳಗೆ ಹೆದರಿಕೆ, ಆತಂಕ, ಕೋಪ, ಸೇಡು, ಹಗೆತನದ ಒಳಮಿಡಿತಗಳಿಂದ ಒಂದೇ ಸಮನೆ ನರಳುತ್ತ, ಪ್ರತಿ ಗಳಿಗೆಯಲ್ಲಿಯೂ ತನ್ನನ್ನು ತಾನೇ ಗಾಸಿಗೊಳಿಸಿಕೊಳ್ಳುತ್ತಿರುವುದು; ತಡೆ=ನಿಲ್ಲಿಸು/ಅಡ್ಡಗಟ್ಟು; ಕಟ್ಟು=ಹೂಡು; ತಡೆಯ ಕಟ್ಟುವುದು=ಬೇಲಿಯನ್ನು ಹಾಕುವುದು;

ಹತ್ತು ಸಾವಿರ ಜನರು ಸುತ್ತಲಿದ್ದೊಡಮೇನು ಚಿತ್ತಹತ್ಯಕೆ ಯಾರು ತಡೆಯ ಕಟ್ಟುವರಯ್ಯ=ವ್ಯಕ್ತಿಯು ತನ್ನ ಮನಸ್ಸಿಗೆ ತಾನೇ ಗಾಸಿ ಮಾಡಿಕೊಂಡು ಪಡುತ್ತಿರುವ ನೂರೆಂಟು ಬಗೆಯ ಚಿತ್ರಹಿಂಸೆಯನ್ನು ತಡೆಗಟ್ಟುವುದಕ್ಕೆ ಯಾರಿಂದಲೂ ಆಗುವುದಿಲ್ಲ. ಏಕೆಂದರೆ ವ್ಯಕ್ತಿಯ ದೇಹ ಕುಸಿದುಬಿದ್ದರೆ ಇತರರು ನೆರವು ನೀಡಿ ದೇಹವನ್ನು ಎತ್ತಿ ಇಲ್ಲವೇ ಮಲಗಿಸಿ ಉಪಚರಿಸಬಹುದು. ಆದರೆ ವ್ಯಕ್ತಿಯು ಮಾನಸಿಕವಾಗಿ ಕುಸಿಯ ತೊಡಗಿದರೆ ಅವನನ್ನು ಬೇರೆಯವರು ಕಾಪಾಡಲಾಗದು. 'ಮಾನಸಿಕವಾಗಿ ಕುಸಿಯುವುದು' ಎಂದರೆ ವ್ಯಕ್ತಿಯು ತನ್ನಲ್ಲಿ ತಾನು ನಂಬಿಕೆಯನ್ನು ಕಳೆದುಕೊಂಡು ಜೀವನದಲ್ಲಿ ಏನು ಮಾಡಬೇಕೆಂಬುದನ್ನು ನಿಶ್ಚಿಯಸಲಾಗದೆ ದಿಕ್ಕುತೋಚದಂತಾಗಿ ನರಳುವುದು;

ಹೆರರ=ಇತರರನ್ನು/ಬೇರೆಯವರನ್ನು; ಕೊಲ್=ಸಾಯಿಸು; ಕತ್ತಿ=ಹರಿತವಾದ ಮೊನೆಯುಳ್ಳ ಹತಾರ; ಪರಶು=ಕೊಡಲಿ; ತೋಮರ=ಈಟಿ; ಸೂಜಿ=ಬಟ್ಟೆಯನ್ನು ಹೊಲಿಯುವುದಕ್ಕೆ ಬಳಸುವ ಚೂಪಾದ ಮೊನೆಯುಳ್ಳ ಅತಿ ಚಿಕ್ಕ ಉಪಕರಣ;

ಸೂರ್ಯ=ರವಿ; ಗಗನ=ಆಕಾಶ; ದೇಶ=ಪ್ರಾಂತ್ಯ; ಗಗನದೇಶ=ಆಕಾಶದ ಎಡೆಯಲ್ಲಿ; ಪಡೆದು+ಇಹನ್+ಅಯ್ಯ; ಪಡೆ=ಹೊಂದು; ಇಹನ್=ಇರುವನು; ಅಯ್ಯ=ಗಂಡಸರನ್ನು ಒಲವು ನಲಿವಿನಿಂದ ಮಾತನಾಡಿಸುವಾಗ ಬಳಸುವ ಪದ;

ಶ್ರದ್ಧೆಯಿಂದಲೆ ಸೂರ್ಯ ಗಗನ ದೇಶದಿ ನಿಂತು ನೂರು ಲೋಕವ ಹಿಡಿವ ಶಕ್ತಿ ಪಡೆದಿಹನಯ್ಯ=ಆಕಾಶಕಾಯಗಳ ಕೇಂದ್ರದಲ್ಲಿ ನೆಲೆಗೊಂಡಿರುವ ಸೂರ್ಯ ಮಂಡಲವನ್ನು ಒಂದು ರೂಪಕವಾಗಿ ಬಳಸಲಾಗಿದೆ. ವ್ಯಕ್ತಿಯು ಯಾವುದೇ ಒಂದು ಒಳ್ಳೆಯ ಕೆಲಸವನ್ನು ಒಲವು ನಲಿವು ಪ್ರಾಮಾಣಿಕತನದಿಂದ ಮಾಡತೊಡಗಿದರೆ, ಅದರಿಂದ ಅವನನ್ನು ಒಳಗೊಂಡಂತೆ ಇಡೀ ಜಗತ್ತಿಗೆ ಒಳಿತಾಗುತ್ತದೆ ಎಂಬ ತಿರುಳನ್ನು ಈ ರೂಪಕ ಸೂಚಿಸುತ್ತದೆ;

ಶ್ರದ್ಧೆ+ಇರುವುದೆ; ನಾಕ=ಸ್ವರ್ಗ;

ನಾಕ ಮತ್ತು ನರಕ=ಮಾನವನ ಮನದ ಕಲ್ಪನೆಯಲ್ಲಿ ರೂಪುಗೊಂಡಿರುವ ಎರಡು ನೆಲೆಗಳು. ಚೆಲುವು ಒಲವು ನಲಿವನ್ನು ನೀಡುವ ನೆಲೆಯನ್ನು ನಾಕವೆಂದು ಮತ್ತು ಸಂಕಟ ವೇದನೆ ಹಿಂಸೆಯನ್ನು ನೀಡುವ ನೆಲೆಯನ್ನು ನರಕವೆಂದು ಕಲ್ಪಿಸಿಕೊಳ್ಳಲಾಗಿದೆ. ವ್ಯಕ್ತಿಯು ಒಳಿತನ್ನು ಮಾಡಿ ಸತ್ತರೆ ನಾಕಕ್ಕೆ, ಕೇಡನ್ನು ಬಗೆದು ಸತ್ತರೆ ನರಕಕ್ಕೆ ಹೋಗುತ್ತಾನೆ ಎಂಬ ನಂಬಿಕೆಯು ಜನಮನದಲ್ಲಿದೆ;

ಅಶ್ರದ್ಧೆ=ಯಾವುದರಲ್ಲಿಯೂ ಆಸಕ್ತಿಯಾಗಲಿ, ಕುತೂಹಲವಾಗಲಿ, ಒಳ್ಳೆಯ ಕೆಲಸವನ್ನು ಮಾಡಬೇಕೆಂಬ ಉದ್ದೇಶವಾಗಲಿ ಇಲ್ಲವೇ ಒಳ್ಳೆಯ ರೀತಿಯಲ್ಲಿ ಬಾಳಬೇಕೆಂಬ ಬಯಕೆಯೇ ಇಲ್ಲದಿರುವುದು;

ಶ್ರದ್ಧೆಯಿರುವುದೆ ನಾಕ ಅಶ್ರದ್ಧೆಯೇ ನರಕ=ವ್ಯಕ್ತಿ ಇಲ್ಲವೇ ಜನರು ನಂಬಿಕೆಯಿಂದ ಮಾಡುವ ಒಳ್ಳೆಯ ಕೆಲಸಗಳು ನಾಕದಲ್ಲಿರುವಂತೆ ಆನಂದ ಮತ್ತು ನೆಮ್ಮದಿಯನ್ನು ಎಲ್ಲರಿಗೂ ನೀಡುತ್ತವೆ. ಯಾವುದೇ ಕೆಲಸವನ್ನು ಮಾಡುವಾಗ ನಂಬಿಕೆಯಿಲ್ಲದೆ ಅಂದರೆ ಆಸಕ್ತಿಯಿಲ್ಲದೆ ಬೇಜವಾಬ್ದಾರಿಯಿಂದ ಮಾಡಿದರೆ ನರಕದಲ್ಲಿರುವಂತೆ ಅದು ಎಲ್ಲರ ಪಾಲಿಗೆ ಸಂಕಟವನ್ನು ತರುತ್ತದೆ;

ಶ್ರದ್ಧೆ+ಇದ್ದರೆ; ಕೋಟಿ=ಒಂದು ನೂರು ಲಕ್ಷ/ಅತಿ ಹೆಚ್ಚಿನ ಪ್ರಮಾಣದಲ್ಲಿರುವುದು; ದೇವರ್+ಎಮಗೆ+ಆಳ್+ಅಯ್ಯ; ಎಮಗೆ=ನಮಗೆ; ಆಳ್=ಸೇವಕ;

ಶ್ರದ್ಧೆಯಿದ್ದರೆ ಕೋಟಿ ದೇವರೆಮಗಾಳಯ್ಯ=ಜೀವನದಲ್ಲಿ ನಂಬಿಕೆ ಮತ್ತು ಪ್ರಾಮಾಣಿಕತನದ ನಡೆನುಡಿಗಳಿಂದ ನಾವು ಬಾಳಿದರೆ ಕೋಟಿ ದೇವರುಗಳು ನಾವು ಹೇಳಿದಂತೆ ಕೇಳುತ್ತಾರೆ. ಅಂದರೆ ಮಾನವರ ಬದುಕನ್ನು ರೂಪಿಸಿರುವವರು ದೇವರುಗಳಲ್ಲ. ದೇವರುಗಳ ಇಚ್ಚೆಯಂತೆ ಈ ಜಗತ್ತು ನಡೆಯುತ್ತಿಲ್ಲ. ಮಾನವರೇ

ಜಗತ್ತಿನ ಒಡೆಯರಾಗಿದ್ದಾರೆ ಹಾಗೂ ತಮ್ಮ ಬದುಕಿನ ಜವಾಬ್ದಾರಿಯನ್ನು ತಾವೇ ಹೊತ್ತಿದ್ದಾರೆ ಎಂಬ ತಿರುಳಿನಲ್ಲಿ ಈ ನುಡಿಗಳು ಬಳಕೆಯಾಗಿವೆ;

ನರ=ಮಾನವ ಜೀವಿ; ನಾರಾಯಣ=ಒಂದು ದೇವರ ಹೆಸರು; ವಿಶ್ವ=ಜಗತ್ತು/ಪ್ರಪಂಚ; ನಾವೆ=ಮಾನವರೇ; ನಿರುಪಮ+ಅದ್ಭುತ+ಅಯ್ಯ; ನಿರುಪಮ=ಹೋಲಿಕೆಯನ್ನು ಮಾಡಲಾಗದ; ಅದ್ಭುತ=ಯಾವುದೇ ವಸ್ತು, ಜೀವಿ, ವ್ಯಕ್ತಿಯ ರೂಪ ಇಲ್ಲವೇ ಗುಣ ಅತಿ ಅಚ್ಚರಿಯನ್ನುಂಟುಮಾಡುವಂತಹ ಬಗೆಯಲ್ಲಿರುವುದು;

ಮಾನವನೆ ದೇವತೆಯು ನರನೆ ನಾರಾಯಣನು ನಮ್ಮ ವಿಶ್ವಕೆ ನಾವೆ ನಿರುಪಮಾದ್ಭುತವಯ್ಯ=ಈ ಜಗತ್ತಿನಲ್ಲಿ ಮಾನವ ಸಮುದಾಯದ ನೆಮ್ಮದಿಯ ಬದುಕಿಗೆ ಅಗತ್ಯವಾದ ಅನ್ನ, ಬಟ್ಟೆ, ವಸತಿ, ವಿದ್ಯೆ, ಉದ್ಯೋಗ, ಆರೋಗ್ಯವನ್ನು ನಿಸರ್ಗದ ನೆರವಿನೊಡನೆ ಕಟ್ಟಿಕೊಳ್ಳಬಲ್ಲ ಶಕ್ತಿಯು ನಮ್ಮಲ್ಲಿದೆ. ನಮ್ಮ ಜೀವನದಲ್ಲಿ ಉಂಟಾಗುವ ಎಡರು ತೊಡರುಗಳನ್ನು ನಿವಾರಿಸಿಕೊಂಡು ನಮ್ಮನ್ನು ನಾವು ಕಾಪಾಡಿಕೊಂಡು ಮುನ್ನಡೆಯುವ ಶಕ್ತಿಯುಳ್ಳವರಾಗಿದ್ದೇವೆ. ನಮ್ಮ ದೇಹ ಬಲ ಮತ್ತು ಮನೋಬಲದಿಂದ ನಿರ್ಮಿಸುವ ವಸ್ತುಗಳು ಜಗತ್ತಿಗೆ ಅಚ್ಚರಿಯನ್ನುಂಟುಮಾಡುತ್ತಿವೆ. ಈ ಜಗತ್ತಿನಲ್ಲಿ ನಾವೇ ದೇವತೆಗಳಾಗಿದ್ದೇವೆ. ಆದ್ದರಿಂದ ಮಾನವ ಸಮುದಾಯದ ಬದುಕಿನ ಮುನ್ನಡೆಗೆ ದೇವರ ಕರುಣೆಯ ಅಗತ್ಯವಿಲ್ಲವೆಂಬ ಇಂಗಿತವನ್ನು ಈ ನುಡಿಗಳು ಸೂಚಿಸುತ್ತಿವೆ;

ಅಹಮ್+ಅಸ್ಮಿ=ಅಹಮಸ್ಮಿ; ಅಹಮ್=ನಾನು; ಅಸ್ಮಿ=ಇದ್ದೇನೆ; ಅಹಮಸ್ಮಿ=ನಾನು ಇದ್ದೇನೆ; ಸಾಗರ=ಸಮುದ್ರ;

"ಅಹಮಸ್ಮಿ" ಎನ್ನುವುದು ಸಂಸ್ಕೃತ ನುಡಿಯ ವಾಕ್ಯ. ಪ್ರಪಂಚದಲ್ಲಿ ಹುಟ್ಟಿ ಬೆಳೆದ ಪ್ರತಿಯೊಬ್ಬ ವ್ಯಕ್ತಿಯು ತನ್ನ ಇರುವಿಕೆಯನ್ನು ಹೇಳಿಕೊಳ್ಳುವಾಗ "ನಾನು ಇದ್ದೇನೆ" ಎನ್ನುತ್ತಾನೆ;

ಅಹಮಸ್ಮಿ ಸಾಗರ=ಇದೊಂದು ರೂಪಕವಾಗಿ ಬಳಕೆಗೊಂಡಿದೆ. ಮಾನವ ಸಮುದಾಯವನ್ನು ಒಂದು ಸಮುದ್ರಕ್ಕೆ ಹೋಲಿಸಲಾಗಿದೆ. ಅನಂತವಾಗಿ ಹಬ್ಬಿರುವ ಸಮುದ್ರದಲ್ಲಿ ನೀರಿನ ಒಂದೊಂದು ಕಣಕ್ಕೂ ತನ್ನದೇ ಆದ ಅಸ್ತಿತ್ವ ಇರುವಂತೆಯೇ ಈ ಜಗತ್ತಿನಲ್ಲಿರುವ ಕೋಟಿಗಟ್ಟಲೆ ಜನರಲ್ಲಿ ಪ್ರತಿಯೊಬ್ಬ ವ್ಯಕ್ತಿಗೂ ಬೇರೆಬೇರೆ ಬಗೆಯ ಅಸ್ತಿತ್ವವಿದೆ. ಸಾಗರದ ನೀರಿನ ಕಣಗಳಲ್ಲಿ ಯಾವುದೊಂದು ದೊಡ್ಡದೂ ಅಲ್ಲ, ಸಣ್ಣದೂ ಅಲ್ಲ. ಅಂತೆಯೇ ಜನಸಮುದಾಯದಲ್ಲಿ ಯಾವೊಬ್ಬ ವ್ಯಕ್ತಿಯೂ ದೊಡ್ಡವನೂ ಅಲ್ಲ, ಸಣ್ಣವನೂ ಅಲ್ಲ; ಗಣ್ಯನೂ ಅಲ್ಲ, ನಗಣ್ಯನೂ ಅಲ್ಲ. ಪ್ರತಿಯೊಬ್ಬ ವ್ಯಕ್ತಿಯ ಬದುಕಿಗೂ ಒಂದು ಗುರಿಯಿದೆ, ಒಂದು ನೆಲೆಯಿದೆ. ಅಂದರೆ ಎಲ್ಲರೂ ಸಮಾನರು.

ಬುದ್ಧ=ಕ್ರಿ.ಪೂ. ಅಯ್ದನೆಯ ಶತಮಾನದಲ್ಲಿದ್ದ ವ್ಯಕ್ತಿ ಗೌತಮ ಬುದ್ಧ. ಈಗ ನೇಪಾಲ ದೇಶಕ್ಕೆ ಸೇರಿರುವ ಕಪಿಲವಸ್ತು ಎಂಬ ಪಟ್ಟಣದಲ್ಲಿ ಹುಟ್ಟಿ ಬೆಳೆದವನು.

ನಿಸರ್ಗದಲ್ಲಿ ನಡೆಯುವ ಸಂಗತಿಗಳು ಮತ್ತು ಮಾನವರ ನಡೆನುಡಿಗಳೇ ಜಗತ್ತಿನ ಒಳಿತು ಕೆಡುಕುಗಳಿಗೆ ಕಾರಣವೆಂಬ ಅರಿವನ್ನು ಜನಮನದಲ್ಲಿ ಮೂಡಿಸಿದ ವ್ಯಕ್ತಿ;

ಕ್ರಿಸ್ತ=ಕ್ರಿ.ಶ.ಒಂದನೆಯ ಶತಮಾನದಲ್ಲಿದ ವ್ಯಕ್ತಿ ಏಸು ಕ್ರಿಸ್ತ. ರೋಮ್ ಸಾಮ್ರಾಜ್ಯಕ್ಕೆ ಸೇರಿದ ಜೆರೂಸಲೆಮ್ ಪಟ್ಟಣದಲ್ಲಿ ಹುಟ್ಟಿ ಬೆಳೆದವನು. ವ್ಯಕ್ತಿಗಳು ಮಾಡುವ ತಪ್ಪುಗಳನ್ನು ಮನ್ನಿಸಿ, ಸಹಮಾನವರನ್ನು ಪ್ರೀತಿ ಮತ್ತು ಕರುಣೆಯಿಂದ ಕಾಣುತ್ತ, ಎಲ್ಲರೂ ಜತೆಗೂಡಿ ಬಾಳಬೇಕೆಂಬುದನ್ನು ಜನತೆಗೆ ತಿಳಿಯ ಹೇಳಿದವನು

ಮಿಂಚಿ=ಹೊಳೆದು; ಮುಳುಗು=ಮರೆಯಾಗುವುದು; ಬರಿದು=ಕೇವಲ; ಕಿರಿದು=ಚಿಕ್ಕ/ಸಣ್ಣ; ಬುದ್ಬುದ+ಅಯ್ಯ; ಬುದ್ಬುದ=ನೀರ ಮೇಲಣ ಗುಳ್ಳೆ. ನೀರಗುಳ್ಳೆಗಳು ಅರೆ ಗಳಿಗೆ ಇದ್ದು, ಮರು ಗಳಿಗೆಯಲ್ಲೇ ಇಲ್ಲವಾಗುತ್ತವೆ;

ಕ್ರಿಸ್ತ ಬುದ್ಧರು ಎಲ್ಲ ಅಹಮಸ್ಮಿ ಸಾಗರದಿ ಮಿಂಚಿ ಮುಳುಗುವ ಬರಿಯ ಕಿರಿಯ ಬುದ್ಬುದವಯ್ಯ=ಸಾಗರದ ನೊರೆತೆರೆಗಳ ನಡುವೆ ಮೂಡಿ ಮರೆಯಾಗುವ ನೀರಗುಳ್ಳೆಗಳಂತೆ ಮಾನವ ಸಮುದಾಯದ ಜನಕೋಟಿಯಲ್ಲಿ ಕ್ರಿಸ್ತ ಬುದ್ಧರು ಸೇರಿಹೋಗಿದ್ದಾರೆ. ಕ್ರಿಸ್ತ ಮತ್ತು ಬುದ್ಧರ ಬದುಕಿಗೆ ಜಗತ್ತಿನಲ್ಲಿ ಯಾವ ಮಹತ್ವವಿದೆಯೋ ಅಂತೆಯೇ ಈ ಜಗತ್ತಿನಲ್ಲಿ ಹುಟ್ಟಿ ಬೆಳೆದು ಅಳಿಯುತ್ತಿರುವ ಮಾನವ ಜೀವಿಗಳೆಲ್ಲರ ಬದುಕಿಗೂ ಒಂದೊಂದು ಬಗೆಯ ಮಹತ್ವವಿದೆ.

ಪ್ರತಿಯೊಬ್ಬ ವ್ಯಕ್ತಿಯು ತನ್ನ ಬದುಕಿನ ನೆಲೆಯಲ್ಲಿ ತನ್ನನ್ನು ತಾನು ಮೇಲು ಎಂದುಕೊಂಡು ಹಿಗ್ಗದೆ ಇಲ್ಲವೇ ಕೀಳು ಎಂದುಕೊಂಡು ಕುಗ್ಗದೆ, ತನ್ನ ಬದುಕಿಗೆ ಒಂದು ಗುರಿಯಿದೆ ಎಂಬ ನಂಬಿಕೆಯನ್ನು ತಳೆದು ಕ್ರಿಯಾಶೀಲನಾಗಿ ಬಾಳಬೇಕು ಎಂಬ ಸಂಗತಿಯನ್ನು ಅಹಮಸ್ಮಿ ಸಾಗರದ ಚಿತ್ರಣ ಸೂಚಿಸುತ್ತಿದೆ.)

❖❖

೬ ರೈತನ ದೃಷ್ಟಿ

ಕರಿಯರದೊ ಬಿಳಿಯರದೊ ಯಾರದಾದರೆ ಏನು
ಸಾಮ್ರಾಜ್ಯವಾವಗಂ ಸುಲಿಗೆ ರೈತರಿಗೆ
ವಿಜಯನಗರವೊ ಮೊಗಲರಾಳ್ವಿಕೆಯೊ ಇಂಗ್ಲಿಷರೊ
ಎಲ್ಲರೂ ಜಿಗಣೆಗಳೆ ನನ್ನ ನೆತ್ತರಿಗೆ
ಕತ್ತಿ ಪರದೇಶಿಯಾದರೆ ಮಾತ್ರ ನೋವೆ
ನಮ್ಮವರೆ ಹದಹಾಕಿ ತಿವಿದರದು ಹೂವೆ

ಸೋಮಾರಿಗಳಿಗೆ ಸುಖಿಗಳಿಗೆ ರಸಿಕರಿಗಲ್ತೆ
ಸಾಮ್ರಾಜ್ಯವೆಂಬುದದು ಕಾಮಧೇನು
ನೃಪ ಎಂಬ ಹೆಸರೊಡನೆ ಮುಡಿಯೊಂದನಾಂತೊಡನೆ
ಕಳ್ಳರೊಡೆಯನು ಕೃಪೆಯ ಮೂರ್ತಿಯೇನು
ತಿಂದುಂಡು ಮೆರೆವವರ ಮೆರವಣಿಗೆಗಾನು
ಬಾಯ್ದೆರೆದು ನೋಳ್ಪ ಬೆಪ್ಪಾಗಬೇಕೇನು

ಹರಕೆ ಯಾರದೊ ಹಬ್ಬವಾರಿಗೊ ಅದಾವಗಂ
ಸಾಮ್ರಾಜ್ಯಕಾಳಿಗಾನಲ್ತೆ ಕುರಿ ಕೋಲೆಗೆ
ಕುಯ್ಗುರಿಯನೆಂತಂತೆ ಸಾವು ಬದುಕಿನ ನಡುವೆ
ಕರುಣೆ ಗರಗಸದಿಂದೆ ಸೀಳುವರು ಬೆಲೆಗೆ
ಸಾಕೆನಗೆ ಸಾಕಯ್ಯ ಸಾಮ್ರಾಜ್ಯ ಪೂಜೆ
ಸಿಡಿಮದ್ದಿನಕ್ಷತೆಗೆ ಗುಂಡು ಚರೆ ಲಾಜೆ

ನೇಗಿಲಿನ ಮೇಲಾಣೆ ಬಸವಗಳ ಮೇಲಾಣೆ
ನೆತ್ತರಿಲ್ಲದೆ ಸುಕ್ಕಿ ಸೊರಗಿದೆನ್ನಾಣೆ
ಸಾಮ್ರಾಜ್ಯ ಶೂರ್ಪನಖಿ ಮೋಹಿನಿಯ ರೂಪಕ್ಕೆ
ಮರುಳಾಗೆನೆಂದಿಗೂ ಸೀತೆ ಮೇಲಾಣೆ
ಬಡತನದ ಗೊಬ್ಬರವನನುದಿನಂ ಹೀರಿ
ಹಿಡಿಸದೋ ಸಾಮ್ರಾಜ್ಯ ಸಿರಿಯ ಕಸ್ತೂರಿ.

ನಾಡನ್ನು ಆಳುವ ದೊರೆಗಳಿಂದ ಬೇಸಾಯಗಾರರು ಎಲ್ಲಾ ಕಾಲದಲ್ಲಿಯೂ ಹೇಗೆ ಸುಲಿಗೆಗೆ ಒಳಗಾಗುತ್ತಿದ್ದಾರೆ ಎಂಬುದನ್ನು ಹೇಳುತ್ತ, ಇಂತಹ ವಂಚಕರ ಮತ್ತು ಕ್ರೂರಿಗಳ ನಯಗಾರಿಕೆಯ ಮಾತುಗಳಿಗೆ ತಾನು ಮರುಳಾಗುವುದಿಲ್ಲವೆಂಬ ಬೇಸಾಯಗಾರನ ನಿಲುವನ್ನು ಈ ಕವನದಲ್ಲಿ ಹೇಳಲಾಗಿದೆ.

(ರೈತ=ಬೇಸಾಯಗಾರ; ದೃಷ್ಟಿ=ನಿಲುವು/ಆಲೋಚನೆ; ಕರಿಯರು=ಆಫ್ರಿಕಾ ದೇಶದ ಮೂಲನಿವಾಸಿಗಳಾದ ಕಪ್ಪು ಬಣ್ಣದ ಜನಸಮುದಾಯ; ಬಿಳಿಯರು=ಇಂಗ್ಲೆಂಡ್ ದೇಶದಲ್ಲಿರುವ ಬಿಳಿಯ ಬಣ್ಣದ ಜನಸಮುದಾಯ; ಯಾರದು+ಆದರೆ; ಸಾಮ್ರಾಜ್ಯ+ಆವಗಂ; ಸಾಮ್ರಾಜ್ಯ=ಒಬ್ಬ ರಾಜನ ಆಡಳಿತಕ್ಕೆ ಒಳಪಟ್ಟ ಪ್ರಾಂತ್ಯ; ಆವಗಂ=ಯಾವಾಗಲೂ; ಸುಲಿಗೆ=ದೋಚುವಿಕೆ/ಕೊಳ್ಳೆ/ಲೂಟಿ;

ಸಾಮ್ರಾಜ್ಯವಾವಗಂ ಸುಲಿಗೆ ರೈತರಿಗೆ=ಬೇಸಾಯಗಾರರು ಬೆಳೆದ ಬೆಳೆಗಳಿಗೆ ಸರಿಯಾದ ಬೆಲೆಯನ್ನು ನಿಗದಿಪಡಿಸಿ ದವಸಗಳನ್ನು ಕೊಂಡುಕೊಳ್ಳುವ ವ್ಯವಸ್ಥೆಯು ಯಾವ ಕಾಲದಲ್ಲಿಯೂ ಯಾವ ರಾಜ್ಯದಲ್ಲಿಯೂ ಯಾವ ದೊರೆಯಿಂದಲೂ ಕಾರ್‍ಯರೂಪಕ್ಕೆ ಬಂದಿಲ್ಲ. ಆದ್ದರಿಂದಲೇ ಸಾಮ್ರಾಜ್ಯವನ್ನು ಯಾವ ಜನಾಂಗದವರು ಆಳಿದರು ಬೇಸಾಯಗಾರನ ದುಡಿಮೆಯ ಉತ್ಪನ್ನವೆಲ್ಲವೂ ಬಂಡವಾಳಶಾಹಿಗಳಾದ ವ್ಯಾಪಾರಿಗಳ ಪಾಲಾಗುತ್ತದೆ. ಬೇಸಾಯಗಾರನು ಬೆಳೆದ ಬೆಳೆಯು ಅವನ ಕಯ್ಯಲ್ಲಿ ಇರುವ ತನಕ ಅದಕ್ಕೆ ಹೆಚ್ಚಿನ ಬೆಲೆಯಿಲ್ಲ; ಅವನ ಕಯ್ ದಾಟಿ ವ್ಯಾಪಾರಿಯ ಕಯ್ಗೆ ಬಂದ ನಂತರ ಬೇಸಾಯಗಾರನ ಉತ್ಪನ್ನಗಳೆಲ್ಲವೂ ಚಿನ್ನದ ಬೆಲೆಯನ್ನು ಪಡೆಯುತ್ತವೆ. ಆದ್ದರಿಂದಲೇ ಎಲ್ಲಾ ಕಾಲದಲ್ಲಿಯೂ ಬೇಸಾಯಗಾರರು ತಮ್ಮ ಶ್ರಮಕ್ಕೆ ತಕ್ಕ ಪ್ರತಿಫಲವನ್ನು ಪಡೆಯಲಾಗದೆ ಸಾವಿರ ಸಾವಿರ ಸಂಕೆಯಲ್ಲಿ ಆತ್ಮಹತ್ಯೆಯನ್ನು ಮಾಡಿಕೊಳ್ಳುತ್ತಿದ್ದಾರೆ.

ವಿಜಯನಗರ=ಹಂಪೆಯನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಆಳಿದ ಹಿಂದೂ ದೊರೆಗಳ ಸಾಮ್ರಾಜ್ಯ-ಕ್ರಿ.ಶ.೧೩೩೬–೧೬೪೬;

ಮೊಗಲರ+ಆಳ್ವಿಕೆಯೊ;

ಮೊಗಲರು=ಬಿಜಾಪುರ ಮತ್ತು ಬೀದರ ಪ್ರಾಂತ್ಯವನ್ನಾಳಿದ ಇಸ್ಲಾಂ ಮತದ ಬಹಮನಿ ಮತ್ತು ಆದಿಲ್‌ಶಾಹಿ ದೊರೆಗಳ ಸಾಮ್ರಾಜ್ಯಗಳು–ಕ್ರಿ.ಶ.೧೩೪೭–೧೫೨೭ ; ಆಳ್ವಿಕೆ=ಆಡಳಿತ;

ಇಂಗ್ಲಿಶರು=ಇಂಡಿಯಾ ದೇಶಕ್ಕೆ ವ್ಯಾಪಾರಕ್ಕೆಂದು ಬಂದು ನಂತರ ದೇಶವನ್ನು ತಮ್ಮ ವಸಾಹತನ್ನಾಗಿ ಮಾಡಿಕೊಂಡು ಆಳಿದ ಕ್ರಿಶ್ಚಿಯನ್ ಮತದ ಆಂಗ್ಲರು–ಕ್ರಿ.ಶ. ೧೮೫೮–೧೯೪೭;

ಜಿಗಣೆ=ಮಾನವರ ಮತ್ತು ಪ್ರಾಣಿಗಳ ದೇಹದ ರಕ್ತವನ್ನು ಹೀರುವ ಒಂದು ಬಗೆಯ ಹುಳು; ನೆತ್ತರು=ರಕ್ತ;

ಎಲ್ಲರೂ ಜಿಗಣೆಗಳೆ ನನ್ನ ನೆತ್ತರಿಗೆ=ಎಲ್ಲರೂ ನನ್ನ ನೆತ್ತರನ್ನು ಹೀರುವವರೇ ಆಗಿದ್ದಾರೆ.

ಯಾರ ಆಳ್ವಿಕೆಯೇ ಇರಲಿ ಆಳರಸರು ಬೇಸಾಯಗಾರನ ತಲೆಯ ಮೇಲೆ ಹೆಚ್ಚಿನ ತೆರಿಗೆಯನ್ನು ಹೇರುತ್ತಾರೆ. ವಿಜಯನಗರದ ಅರಸರ, ಮೊಗಲರ ಮತ್ತು ಇಂಗ್ಲಿಶರ ಆಡಳಿತ ಕಾಲದಲ್ಲಿ ಬೇಸಾಯಗಾರನು ಬೆಳೆದ ಬೆಳೆಯಲ್ಲಿ ಶೇ.೧೫ ರಿಂದ ಹಿಡಿದು ಶೇ.೨೫ ರ ಪ್ರಮಾಣದ ದವಸವನ್ನು ತೆರಿಗೆ ರೂಪದಲ್ಲಿ ವಸೂಲು ಮಾಡುತ್ತಿದ್ದರು. ರಾಜರ ನಡುವೆ ಕದನಗಳು ನಡೆದಾಗ ಬೇಸಾಯಗಾರರಿಂದ ಇನ್ನೂ ಹೆಚ್ಚಿನ ಪ್ರಮಾಣದಲ್ಲಿ ಬೆಳೆಯನ್ನು ಕಡ್ಡಾಯವಾಗಿ ವಸೂಲಿ ಮಾಡುತ್ತಿದ್ದರು.

ದೊಡ್ಡ ದೊಡ್ಡ ಜಮೀನ್ದಾರರ ಭೂಮಿಯನ್ನು ಗೇಣಿಗೆ ಪಡೆದು ಬೆಳೆ ತೆಗೆಯುವ ಬೇಸಾಯಗಾರರು ಶೇ ೫೦ ಕ್ಕಿಂತ ಹೆಚ್ಚು ಮಂದಿಯಿರುತ್ತಿದ್ದರು. ಇಂತಹ ಗೇಣಿದಾರರ ಬದುಕು ಉಳಿದ ಬೇಸಾಯಗಾರರಿಗಿಂತ ಇನ್ನೂ ಹೆಚ್ಚಿನ ದುರಂತಕ್ಕೆ ಈಡಾಗುತ್ತಿತ್ತು. ಏಕೆಂದರೆ ಬೆಳೆಯು ಯಾವುದೇ ಪ್ರಮಾಣದಲ್ಲಿ ಆಗಿರಲಿ ಗೇಣಿಯ ಒಪ್ಪದದಂತೆ ಕೊಟ್ಟ ಮೇಲೆ ಅವರ ಪಾಲಿಗೆ ಉಳಿಯುತ್ತಿದ್ದುದು ಬಹಳ ಕಡಿಮೆಯಾಗುತ್ತಿತ್ತು. ಕೆಲವೊಮ್ಮೆ ಬೆಳೆದ ಬೆಳೆಯೆಲ್ಲವನ್ನೂ ಜಮೀನ್ದಾರನಿಗೆ ಒಪ್ಪಿಸಿ ಹಸಿವಿನಿಂದ ನರಳಬೇಕಿತ್ತು. ಗೇಣಿದಾರರ ಇಂತಹ ಯಾವುದೇ ಸಮಸ್ಯೆಗಳಿಗೆ ಆಳುವ ದೊರೆಗಳು ತಲೆಹಾಕುತ್ತಿರಲಿಲ್ಲ.

ಆಳುವ ವರ್ಗದ ದಣಿಗಳೆಲ್ಲರೂ ದುಡಿಮೆಯನ್ನೇ ಮಾಡದ ಜಮೀನಿನ ಒಡೆಯರ ಪರವಾಗಿ ಇರುತ್ತಿದ್ದರೇ ಹೊರತು, ಹಗಲಿರುಳೆನ್ನದೆ ಹೊಲಗದ್ದೆಗಳಲ್ಲಿ ದುಡಿಯುವ ಗೇಣಿದಾರರ ಪರವಾಗಿ ಇರುತ್ತಿರಲಿಲ್ಲ. ಎಲ್ಲ ರಾಜರ ಕಾಲದಲ್ಲಿಯೂ ಬೇಸಾಯಗಾರರು ಆಡಳಿತ ವರ್ಗಕ್ಕೆ ಸೇರಿದ ಜನರ ಕ್ರೂರತನದಿಂದ ಕೂಡಿದ ದಬ್ಬಾಳಿಕೆಗೆ ಬಲಿಯಾಗಿ ನರಳುತ್ತಿದ್ದಾರೆ;

ಕತ್ತಿ=ಚೂಪಾದ ಮೊನೆಯುಳ್ಳ ಹರಿತವಾದ ಒಂದು ಬಗೆಯ ಹತಾರ; ಪರದೇಶಿ+ಆದರೆ; ಪರದೇಶಿ=ಹೊರನಾಡಿಗೆ ಸೇರಿದ ವಸ್ತು, ವ್ಯಕ್ತಿ, ಜೀವಿ; ನೋವು=ಸಂಕಟ; ಹದ=ಸರಿಯಾದ ಸಮಯ/ರೀತಿ; ಹದಹಾಕಿ=ಸಮಯವನ್ನು ಕಾದು; ತಿವಿದರೆ+ಅದು; ತಿವಿ=ಚುಚ್ಚು/ಇರಿ

ಕತ್ತಿ ಪರದೇಶಿಯಾದರೆ ಮಾತ್ರ ನೋವೆ ನಮ್ಮವರೆ ಹದಹಾಕಿ ತಿವಿದರದು ಹೂವೆ=ಇದೊಂದು ರೂಪಕ. ನಾಡನ್ನಾಳುವ ದೊರೆಯು ಯಾರಾದರೇನು ಆತ ನಮ್ಮವನೇ ಆಗಿರಬಹುದು ಇಲ್ಲವೇ ಅನ್ಯದೇಶದವನಾಗಿರಬಹುದು. ಆತನಿಗೆ ಬೇಸಾಯಗಾರನ ಬದುಕಿನ ಬವಣೆಗಳು ತಿಳಿಯದಿದ್ದಾಗ ಮತ್ತು ಬೇಸಾಯಗಾರನ ಯಾತನೆಯನ್ನು ಪರಿಹರಿಸಲು ನೆರವಾಗಬೇಕೆಂಬ ಒಳ್ಳೆಯ ಉದ್ದೇಶವಿಲ್ಲದಿದ್ದಾಗ,

ರಾಜನು ಉಳ್ಳವರ ಪರವಾಗಿ ಜಾರಿಮಾಡುವ ಕಾನೂನುಗಳು ಬೇಸಾಯಗಾರನ ಬದುಕಿಗೆ ಅಪಾರವಾದ ಸಂಕಟವನ್ನುಂಟುಮಾಡುತ್ತವೆ ಎಂಬ ತಿರುಳಿನಲ್ಲಿ ಈ ರೂಪಕ ಬಳಕೆಯಾಗಿದೆ;

ಸೋಮಾರಿ=ದುಡಿಮೆಯನ್ನು ಮಾಡದೆ ಕಾಲವನ್ನು ಕಳೆಯುವವನು/ಮಯ್ಗಳ್ಳ; ಸುಖಿ=ಒಲವು ನಲಿವು ನೆಮ್ಮದಿಯಿಂದಿರುವ ವ್ಯಕ್ತಿ; ರಸಿಕರಿಗೆ+ಅಲ್ತೆ; ರಸಿಕ=ಚೆನ್ನಾಗಿರುವುದೆಲ್ಲವನ್ನೂ ತನ್ನದಾಗಿಸಿಕೊಂಡು ಮೆರೆಯುವ ವಿಲಾಸಿ; ಅಲ್ತೆ=ಅಲ್ಲವೇ; ಸಾಮ್ರಾಜ್ಯ+ಎಂಬುದು+ಅದು; ಎಂಬುದು=ಎನ್ನುವುದು; ಕಾಮಧೇನು=ಜನಮನದ ಕಲ್ಪನೆಯಲ್ಲಿ ಮೂಡಿಬಂದಿರುವ ಒಂದು ಹಸು. ಇದು ದೇವಲೋಕದಲ್ಲಿ ಇಂದ್ರನ ಅಮರಾವತಿಯಲ್ಲಿದೆ. ಈ ಹಸುವಿನ ಅನುಗ್ರಹ ದೊರೆತರೆ ವ್ಯಕ್ತಿಯು ಬಯಸಿದ್ದೆಲ್ಲವನ್ನೂ ಈಡೇರುತ್ತದೆ ಎಂಬ ಕಲ್ಪನೆಯು ಜನಮನದಲ್ಲಿದೆ;

ಸೋಮಾರಿಗಳಿಗೆ ಸುಖಿಗಳಿಗೆ ರಸಿಕರಿಗಲ್ತೆ ಸಾಮ್ರಾಜ್ಯವೆಂಬುದದು ಕಾಮಧೇನು=ನಾಡನ್ನಾಳುವ ದೊರೆಗಳ ಪಾಲಿಗೆ ಸಾಮ್ರಾಜ್ಯವೆಂಬುದು ಯಾವುದೇ ದುಡಿಮೆಯನ್ನು ಮಾಡದೆ, ತಮ್ಮ ಮಯ್ ಮನಗಳ ಕಾಮನೆಗಳೆಲ್ಲವನ್ನೂ ತಣಿಸಿಕೊಂಡು ಆನಂದಪಡುವ ವ್ಯಕ್ತಿಗಳಿಗೆ ವರದಾನವಾಗಿದೆ;

ನೃಪ=ರಾಜ; ಎಂಬ=ಎನ್ನುವ; ಹೆಸರ್+ಒಡನೆ; ಒಡನೆ=ಜತೆಯಲ್ಲಿ; ಮುಡಿ+ಒಂದನ್+ಆಂತು+ಒಡನೆ; ಮುಡಿ=ಕಿರೀಟ; ಆಂತು=ತೊಟ್ಟು; ಕಳ್ಳರ+ಒಡೆಯನು; ಕಳ್ಳ=ಇತರರ ಸಂಪತ್ತನ್ನು ಕದಿಯುವವನು; ಒಡೆಯ=ಯಜಮಾನ; ಕೃಪೆ=ದಯೆ; ಮೂರ್ತಿ+ಏನು; ಮೂರ್ತಿ=ಪ್ರತಿಮೆ/ವಿಗ್ರಹ/ಸ್ವರೂಪ;

ನೃಪ ಎಂಬ ಹೆಸರೊಡನೆ ಮುಡಿಯೊಂದನಾಂತೊಡನೆ ಕಳ್ಳರೊಡೆಯನು ಕೃಪೆಯ ಮೂರ್ತಿಯೇನು=ಜನಸಮುದಾಯದ ಸಂಪತ್ತನ್ನು ಕೊಲೆ ಸುಲಿಗೆಯ ಮೂಲಕ ಕೊಳ್ಳೆಹೊಡೆಯುವ ಕಳ್ಳರ ಒಡೆಯನೊಬ್ಬನಿಗೆ ಕಿರೀಟವನ್ನು ತೊಡಿಸಿ ರಾಜನೆಂದು ಕರೆದ ಮಾತ್ರಕ್ಕೆ ಆತನಲ್ಲಿ ಕರುಣೆಯ ನಡೆನುಡಿಯು ಕಂಡುಬರುವುದಿಲ್ಲ. ಬೇಸಾಯಗಾರರ ದುಡಿಮೆಯ ಶ್ರಮದ ಬೆಲೆಯನ್ನು ತಿಳಿಯದ ಮತ್ತು ಕರುಣೆಯಿಲ್ಲದ ದೊರೆಯು ಜನಸಮುದಾಯದ ಪಾಲಿಗೆ ದೊಡ್ಡ ಕಳ್ಳನೇ ಆಗಿರುತ್ತಾನೆ;

ತಿಂದು+ಉಂಡು; ಮೆರೆ=ಬೀಗು/ಅಹಂಕಾರದಿಂದ ಹಿಗ್ಗುವುದು; ಮೆರವಣಿಗೆ=ಒಳ್ಳೆಯ ಉಡುಗೆ ತೊಡುಗೆಗಳನ್ನು ತೊಟ್ಟು, ಆನೆ ಅಂಬಾರಿಯನ್ನೇರಿ ಇಲ್ಲವೇ ಕುದುರೆಯನ್ನೇರಿ ಡೋಲು ಡಮರುಗ ನಾದದೊಡನೆ ಜನರಿಂದ ಜಯಕಾರವನ್ನು ಹಾಕಿಸಿಕೊಳ್ಳುತ್ತ ಊರಿನ ಬೀದಿ ಬೀದಿಗಳಲ್ಲಿ ಸಾಗುವುದು;

ಬಾಯ್+ತೆರೆದು; ಬಾಯ್ದೆರೆದು=ಇದೊಂದು ನುಡಿಗಟ್ಟು. ಅಚ್ಚರಿಯನ್ನು ವ್ಯಕ್ತಪಡಿಸುವುದು ಎಂಬ ತಿರುಳಿನಲ್ಲಿ ಬಳಕೆಯಾಗಿದೆ; ನೋಳ್ಪ=ನೋಡುವ; ಬೆಪ್ಪು+ಆಗಬೇಕೇನು; ಬೆಪ್ಪು=ದಡ್ಡ/ಮಂಕ;

ತಿಂದುಂಡು ಮೆರೆವವರ ಮೆರವಣಿಗೆಗಾನು ಬಾಯ್ದೆರೆದು ನೋಳ್ಪ ಬೆಪ್ಪಾಗಬೇಕೇನು=ನಾಡಿನ ಸಂಪತ್ತನ್ನೇ ಗೋರಿಗುಡ್ಡೆ ಹಾಕಿಕೊಂಡು ಸಿರಿವಂತಿಕೆಯ ತುತ್ತತುದಿಯಲ್ಲಿ ಮೆರೆಯುತ್ತಿರುವ ಆಳರಸರನ್ನು ಕಂಡು 'ಅಬ್ಬಾ ಎಂತಹ ಸಿರಿವಂತಿಕೆ' ಎಂದು ಅಚ್ಚರಿ ಪಡುವ ತಿಳಿಗೇಡಿ ನಾನಾಗುವುದಿಲ್ಲ. ಏಕೆಂದರೆ ಆಳುವವರ ಬಳಿಯಿರುವ ಸಿರಿಸಂಪತ್ತೆಲ್ಲವೂ ದುಡಿಯುವ ಶ್ರಮಜೀವಿಗಳಾದ ಬೇಸಾಯಗಾರರಾದ ನಮಗೆ ಸೇರಬೇಕಾಗಿದ್ದ ಸಂಪತ್ತು ಎಂಬ ವಾಸ್ತವವನ್ನು ಅರಿತಿದ್ದೇನೆ. ಬೇಸಾಯಗಾರರೆಂದರೆ ಹೊಲಗದ್ದೆತೋಟಗಳಲ್ಲಿ ದುಡಿಯುವ ಎಲ್ಲಾ ಶ್ರಮಜೀವಿಗಳು;

ಹರಕೆ=ಜೀವನದಲ್ಲಿ ತನ್ನ ಆಸೆಯನ್ನು ಈಡೇರಿಸಿದರೆ ಇಲ್ಲವೇ ಬಂದಿರುವ ಸಂಕಟವನ್ನು ಪರಿಹಾರಮಾಡಿದರೆ ಹಣ ಇಲ್ಲವೇ ಚಿನ್ನಬೆಳ್ಳಿ ರೂಪದಲ್ಲಿ ದೇವರಿಗೆ ಕಾಣಿಕೆಯನ್ನು ನೀಡುತ್ತೇನೆ ಎಂದು ಮನದಲ್ಲಿ ಸಂಕಲ್ಪವನ್ನು ತಳೆಯುವುದು; ಹಬ್ಬ+ಆರಿಗೊ; ಹಬ್ಬ=ದೇವರ ಹೆಸರಿನಲ್ಲಿ ಮಾಡುವ ಆಚರಣೆ; ಆರಿಗೊ=ಯಾರಿಗೊ;

ಹರಕೆ ಯಾರದೊ ಹಬ್ಬವಾರಿಗೊ=ಶ್ರಮಪಟ್ಟು ದುಡಿದು ಉತ್ಪಾದನೆ ಮಾಡುವವರು ಒಬ್ಬರಾದರೆ, ಅದರ ಫಲವನ್ನು ಉಣ್ಣುವವರು ಮತ್ತೊಬ್ಬರಾಗಿರುತ್ತಾರೆ. ಬೇಸಾಯಗಾರರ ದುಡಿಮೆಯ ಫಲವನ್ನೆಲ್ಲಾ ನಾಡನ್ನು ಆಳುವವರು ಮತ್ತು ಆಳರಸರ ಬೆಂಬಲವನ್ನು ಪಡೆದ ಸಿರಿವಂತರು, ಜಮೀನ್ದಾರರು ಮತ್ತು ಆಡಳಿತದ ನೆಲೆಯಲ್ಲಿ ಕಾನೂನು ಕಟ್ಟಲೆಗಳನ್ನು ಜಾರಿಗೆ ತರುವ ವ್ಯಕ್ತಿಗಳು ದೋಚಿಕೊಂಡು ಆನಂದ ಸುಪ್ಪತ್ತಿಗೆಯಲ್ಲಿ ಹೊರಳಾಡುತ್ತಿದ್ದಾರೆ;

ಅದು+ಆವಗಂ; ಆವಗಂ=ಯಾವಾಗಲೂ; ಸಾಮ್ರಾಜ್ಯ+ಕಾಳಿಗೆ+ಆನ್+ಅಲ್ತೆ; ಕಾಳಿ=ಒಂದು ಹೆಣ್ಣು ದೇವತೆಯ ಹೆಸರು; ಆನ್=ನಾನು; ಅಲ್ತೆ=ಅಲ್ಲವೇ; ಕುರಿ=ಒಂದು ಸಾಕು ಪ್ರಾಣಿ ; ಕೊಲೆ=ಕೊಲ್ಲುವಿಕೆ/ಸಾಯಿಸುವುದು;

ಅದಾವಗಂ ಸಾಮ್ರಾಜ್ಯಕಾಳಿಗಾನಲ್ತೆ ಕುರಿ ಕೊಲೆಗೆ=ಯಾವಾಗಲು ಸಾಮ್ರಾಜ್ಯವೆಂಬ ಕಾಳಿಗೆ ಬಲಿಯಾಗುವ ಕುರಿಯು ನಾನೇ ಅಲ್ಲವೇ. ಅಂದರೆ ರಾಜಮಹಾರಾಜರು ತಮ್ಮ ಸಾಮ್ರಾಜ್ಯವನ್ನು ಕಟ್ಟಲು ಬೆಳೆಸಲು ಉಳಿಸಿಕೊಳ್ಳಲು ಯಾವಾಗಲು ಬೇಸಾಯಗಾರರನ್ನು ಒಳಗೊಂಡಂತೆ ದುಡಿಯುವ ಶ್ರಮಜೀವಿಗಳೆಲ್ಲರ ಬದುಕನ್ನೇ ಬಲಿತೆಗೆದುಕೊಳ್ಳುತ್ತಾರೆ ;

ಕುಯ್+ಕುರಿ+ಅನ್+ಎಂತು+ಅಂತೆ; ಕುಯ್=ಕತ್ತರಿಸು; ಕುಯ್ಗುರಿ=ಕುಯ್ದು ತಿನ್ನುವುದಕ್ಕಾಗಿ ಸಾಕಿ ಬೆಳೆಸಿರುವ ಕುರಿ; ಎಂತು=ಯಾವ ರೀತಿ; ಅಂತೆ=ಹಾಗೆ; ಸಾವು=ಮರಣ; ಬದುಕು=ಜೀವನ; ನಡುವೆ=ಅಂತರದಲ್ಲಿ; ಕರುಣೆ=ದಯೆ; ಗರಗಸ+ಇಂದೆ; ಗರಗಸ=ಮರವನ್ನು ಕುಯ್ಯುವ ಉಪಕರಣ. ಚೂಪಾದ ಮೊನೆಯುಳ್ಳ ಲೋಹದ ಹಲ್ಲುಗಳಿಂದ ಕೂಡಿರುತ್ತದೆ; ಕರುಣೆ ಗರಗಸ=ಕರುಣೆಯ ನುಡಿಗಳನ್ನಾಡುತ್ತಲೇ ಕ್ರೂರತನದಿಂದ ನಡೆದುಕೊಳ್ಳುವುದು;

ಸೀಳು=ತುಂಡುಮಾಡು; ಬೆಲೆ=ಯಾವುದನ್ನಾದರೂ ಕೊಳ್ಳುವಾಗ ಇಲ್ಲವೇ ಮಾರುವಾಗ ಅದಕ್ಕೆ ಗೊತ್ತುಪಡಿಸುವ ಹಣ;

ಕುಯ್ಗುರಿಯನೆಂತಂತೆ ಸಾವು ಬದುಕಿನ ನಡುವೆ ಕರುಣೆ ಗರಗಸದಿಂದೆ ಸೀಳುವರು ಬೆಲೆಗೆ=ಆಳುವ ಅರಸರು ಮತ್ತು ಬಂಡವಾಳಶಾಹಿಗಳು ಬೇಸಾಯಗಾರನ ಬಗ್ಗೆ ಕರುಣೆಯ ನುಡಿಗಳನ್ನಾಡುತ್ತಲೇ ಅವನ ಬದುಕನ್ನು ಸಂಕಟದ ಕಡೆಗೆ ದೂಡುತ್ತಾರೆ. ಆಳರಸರ ಪಾಲಿಗೆ ದುಡಿಯುವ ಶ್ರಮಜೀವಿಗಳೆಲ್ಲರೂ ಸಾಮ್ರಾಜ್ಯ ಉಳಿದು ಬೆಳೆದು ಬಾಳುವುದಕ್ಕಾಗಿ ಬಲಿಕೊಡುವ ಕುಯ್ಗುರಿಗಳಂತೆಯೇ ಆಗಿರುತ್ತಾರೆ; ಮರವನ್ನು ಕುಯ್ಯುವಾಗ ಅತ್ತಿತ್ತ ಹೋಗುತ್ತ ಬರುತ್ತ ಸೀಳುವ ಗರಗಸದಂತೆ ದೊರೆಯು ಮಾಡುವ ಕಟ್ಟಪ್ಪಣೆಯ ಕಾನೂನುಗಳೆಲ್ಲವೂ ಬೇಸಾಯಗಾರನ ಬದುಕನ್ನು ಜೀವಂತವಾಗಿ ಸೀಳುತ್ತಿರುತ್ತವೆ;

ಸಾಕು+ಎನಗೆ; ಸಾಕು+ಅಯ್ಯ; ಪೂಜೆ=ದೇವರ ಮುಂದೆ ಹೂಹಣ್ಣುಗಳನ್ನು ಇಟ್ಟು ದೂಪದೀಪಗಳನ್ನು ಬೆಳಗಿ ಮಾಡುವ ಆಚರಣೆ; ಸಿಡಿಮದ್ದಿನ+ಅಕ್ಷತೆಗೆ; ಸಿಡಿಮದ್ದು=ಬಂಡೆಯನ್ನು ಒಡೆಯಲು ಬಳಸುವ ವಸ್ತು; ಅಕ್ಷತೆ=ಅರಿಸಿನ ಬೆರೆಸಿದ ಅಕ್ಕಿಯ ಕಾಳುಗಳು; ಸಿಡಿಮದ್ದಿನ ಅಕ್ಷತೆ=ಕಾಳೆಗದ ಸನ್ನಿವೇಶದಲ್ಲಿ ಎರಚಿದ ಕಾಳುಗಳಂತೆ ಹಾರುವ ಸಿಡಿಮದ್ದು; ಗುಂಡು=ಬಂದೂಕಿನಲ್ಲಿರುವ ಗೋಲಿ; ಚರೆ=ಬಂದೂಕಿಗೆ ಹಾಕುವ ಸಿಡಿಮದ್ದು; ಲಾಜೆ=ಅರಿಸಿನ ಬೆರೆಸಿದ ಅಕ್ಕಿಯ ಕಾಳು;

ಸಾಕೆನಗೆ ಸಾಕಯ್ಯ ಸಾಮ್ರಾಜ್ಯ ಪೂಜೆ ಸಿಡಿಮದ್ದಿನಕ್ಷತೆಗೆ ಗುಂಡು ಚರೆ ಲಾಜೆ = ಇನ್ನು ಮುಂದೆ ನಾನು ಯಾವ ರಾಜನನ್ನಾಗಲಿ ಇಲ್ಲವೇ ಯಾವ ಸಾಮ್ರಾಜ್ಯವನ್ನಾಗಲಿ ತಲೆಯ ಮೇಲೆ ಹೊತ್ತು ಮೆರೆಸುವುದಿಲ್ಲ. ಏಕೆಂದರೆ ಸಾಮ್ರಾಜ್ಯವೆಂಬುದು ಜನರನ್ನು ಕೊಲ್ಲುವ ಮದ್ದುಗುಂಡುಗಳನ್ನೇ ಅಕ್ಷತೆಯ ಕಾಳುಗಳನ್ನಾಗಿ ಮಾಡಿಕೊಂಡಿದೆ. ಇಂತಹ ಕ್ರೂರತನದ ಸಾಮ್ರಾಜ್ಯದ ಸಹವಾಸವೇ ನನಗೆ ಬೇಡ;

ನೇಗಿಲು=ಭೂಮಿಯನ್ನು ಉಳುವ ಉಪಕರಣ; ಮೇಲ್+ಆಣೆ; ಆಣೆ=ಯಾವುದೇ ಒಂದು ಕೆಲಸವನ್ನು ಮಾಡುತ್ತೇನೆ ಎಂದು ವಾಗ್ದಾನವನ್ನು ಇತರರಿಗೆ ನೀಡುವಾಗ

ಇಲ್ಲವೇ ತಾನು ಹೇಳುತ್ತಿರುವ ಸಂಗತಿಯು ನಿಜವಾದುದೆಂದು ಪ್ರತಿಪಾದಿಸುವುದಕ್ಕಾಗಿ ವ್ಯಕ್ತಿಯು ತನ್ನ ಮೆಚ್ಚಿನ ವಸ್ತು, ಪ್ರಾಣಿ, ವ್ಯಕ್ತಿ ಮತ್ತು ದೇವರ ಹೆಸರಿನಲ್ಲಿ ಆಡುವ ಮಾತು;

ಬಸವ=ಹಸು/ದನ; ನೆತ್ತರ್+ಇಲ್ಲದೆ; ನೆತ್ತರ್=ರಕ್ತ; ಸುಕ್ಕಿ=ಒಣಗು; ಸೊರಗಿದ+ಎನ್ನ+ಆಣೆ; ಸೊರಗು=ಬಾಡು/ಬತ್ತು;

ನೇಗಿಲಿನ ಮೇಲಾಣೆ ಬಸವಗಳ ಮೇಲಾಣೆ ನೆತ್ತರಿಲ್ಲದೆ ಸುಕ್ಕಿ ಸೊರಗಿದೆನ್ನಾಣೆ= ಸಾಮ್ರಾಜ್ಯದ ಸಹವಾಸವನ್ನೇ ತೊರೆದು, ಆಳುವ ಅರಸರ ವಂಚನೆ ಮತ್ತು ಕ್ರೂರತನದ ಆಡಳಿತದಿಂದ ದೂರವಿರಬೇಕೆಂಬ ದಿಟ್ಟತನದ ನಿಲುವನ್ನು ತಳೆಯುವಾಗ ತನ್ನ ಉಸಿರಿನಂತಿರುವ ನೇಗಿಲು ಮತ್ತು ದನಗಳ ಮೇಲೆ ಆಣೆಯನ್ನು ಇಕ್ಕುತ್ತಿದ್ದಾನೆ. ಎಲ್ಲಕ್ಕಿಂತ ಹೆಚ್ಚಾಗಿ ದುಡಿದು ದುಡಿದು ಸೊರಗಿ ಹೋಗಿರುವ ತನ್ನ ದೇಹದ ಮೇಲೂ ಆಣೆಯನ್ನು ಇಕ್ಕುತ್ತಿದ್ದಾನೆ;

ಶೂರ್ಪನಖಿ=ರಾಮಾಯಣ ಕಾವ್ಯದಲ್ಲಿ ಬರುವ ಲಂಕೆಯ ರಾಜನಾದ ರಾವಣನ ತಂಗಿ; ಮೋಹಿನಿ=ಗಂಡಸಿನ ಮಯ್ ಮನವನ್ನು ಸೆಳೆಯುವಂತಹ ರೂಪನ್ನು ಮತ್ತು ಉದ್ದೇಶವನ್ನು ಹೊಂದಿರುವವಳು; ರೂಪ=ಆಕಾರ; ಮರುಳ್+ಆಗೆನು+ಎಂದಿಗೂ; ಮರುಳ್=ಹುಚ್ಚು/ಮೋಹ; ಎಂದಿಗೂ=ಯಾವತ್ತಿಗೂ; ಸೀತೆ=ರಾಮಾಯಣ ಕಾವ್ಯದಲ್ಲಿ ಬರುವ ಅಯೋಧ್ಯಾಪತಿಯಾದ ರಾಮನ ಹೆಂಡತಿ; 'ಸೀತೆ' ಎಂಬ ಪದಕ್ಕೆ 'ನೇಗಿಲಿನಿಂದ ಉತ್ತ ಗೆರೆ/ಭೂಮಿ' ಎಂಬ ಮತ್ತೊಂದು ತಿರುಳಿದೆ;

ಸಾಮ್ರಾಜ್ಯ ಶೂರ್ಪನಖಿ ಮೋಹಿನಿಯ ರೂಪಕ್ಕೆ ಮರುಳಾಗೆನೆಂದಿಗೂ ಸೀತೆ ಮೇಲಾಣೆ=ವಂಚನೆ ಮತ್ತು ಕ್ರೂರತನದ ಉದ್ದೇಶಗಳನ್ನು ಮರೆಮಾಚಿಕೊಂಡು ಹೊರಗೆ ಜನಸಮುದಾಯ ಒಳಿತಿಗಾಗಿ ಇರುವಂತೆ ತೋರಿಸಿಕೊಳ್ಳುವ ಆಳರಸರ ಸಾಮ್ರಾಜ್ಯವನ್ನು ರಾಮ ಲಕ್ಷ್ಮಣರ ಮನ ಸೆಳೆಯಲೆಂದು ಮಾರುವೇಷದಲ್ಲಿ ಬಂದ ರಕ್ಕಸಿ ಶೂರ್ಪನಖಿಯ ರೂಪಕ್ಕೆ ಹೋಲಿಸಲಾಗಿದೆ. ನಯವಂಚಕರಾದ ಅರಸರ ಯಾವುದೇ ನಡೆನುಡಿಗಳಿಗೆ ನಾನು ಮಾರುಹೋಗುವುದಿಲ್ಲವೆಂದು ಆಣೆಯನ್ನು ಇಕ್ಕುತ್ತಿದ್ದಾನೆ;

ಬಡತನ=ಅನ್ನ, ಬಟ್ಟೆ, ವಸತಿಯಿಲ್ಲದೆ ಸಂಕಟಪಡುವುದು; ಗೊಬ್ಬರ+ಅನ್+ ಅನುದಿನಂ; ಗೊಬ್ಬರ=ಹಸುಎಮ್ಮೆಕುರಿಕೋಣಗಳ ಸಗಣಿ ಗಂಜಲವನ್ನು ದೊಡ್ಡ ಪ್ರಮಾಣದಲ್ಲಿ ಹಾಕಿದಾಗ, ಸ್ವಲ್ಪದಿನಗಳ ನಂತರ ಅವು ಕೊಳೆತಾಗ ದೊರೆಯುವ ವಸ್ತು; ಅನ್=ಅನ್ನು; ಅನುದಿನ=ಪ್ರತಿದಿನ; ಹೀರು=ಕುಡಿ; ಹಿಡಿಸು=ಒಪ್ಪು/ಮೆಚ್ಚು; ಸಿರಿ=ಸಂಪತ್ತು; ಕಸ್ತೂರಿ=ಕಸ್ತೂರಿ ಎಂಬ ಹೆಸರಿನ ಪ್ರಾಣಿಯ ಹೊಕ್ಕಳಿನಲ್ಲಿ ದೊರೆಯುವ ಪರಿಮಳಯುಕ್ತವಾದ ವಸ್ತು;

'ಬಡತನದ ಗೊಬ್ಬರ' ಎಂಬುದು ಪರಿಶ್ರಮದಿಂದ ಕೂಡಿದ ದುಡಿಮೆಯ ಬದುಕಿಗೆ ಸಂಕೇತವಾಗಿದೆ;

'ಸಾಮ್ರಾಜ್ಯ ಸಿರಿಯ ಕಸ್ತೂರಿ' ಎಂಬುದು ದುಡಿಯುವ ಜನಸಮುದಾಯವನ್ನು ಸುಲಿದು ಕೊಬ್ಬಿರುವ ಸಾಮ್ರಾಜ್ಯಶಾಹಿಗೆ ಸಂಕೇತವಾಗಿದೆ ;

ಬಡತನದ ಗೊಬ್ಬರವನನುದಿನಂ ಹೀರಿ ಹಿಡಿಸದೋ ಸಾಮ್ರಾಜ್ಯ ಸಿರಿಯ ಕಸ್ತೂರಿ=ಇದೊಂದು ರೂಪಕವಾಗಿ ಬಳಕೆಗೊಂಡಿದೆ. ದುಡಿಯುವ ಶ್ರಮಜೀವಿಗಳ ಬಗ್ಗೆ ಜೀವದಯೆಯಿಲ್ಲದೆ, ಅವರ ಬದುಕಿನ ಸಂಕಟಗಳನ್ನು ಪರಿಹರಿಸಬೇಕೆಂಬ ಜವಾಬ್ದಾರಿಯಿಲ್ಲದೆ, ಅಟ್ಟಹಾಸದಿಂದ ಮೆರೆಯುವ ರಾಜ್ಯಾಡಳಿತವು ಬೇಸಾಯಗಾರರಿಗೆ ಹಿಡಿಸುವುದಿಲ್ಲ. ಏಕೆಂದರೆ ನಾಡನ್ನು ಆಳುವ ವ್ಯಕ್ತಿಗಳ ಮನದಲ್ಲಿ ಬೇಸಾಯಗಾರರ ಬಗ್ಗೆ ಯಾವುದೇ ಬಗೆಯ ಒಲವು ಕರುಣೆ ಮತ್ತು ಜವಾಬ್ದಾರಿಯುತವಾದ ಒಳಮಿಡಿತಗಳು ಇರುವುದಿಲ್ಲ.)

❖❖

೭ ಯಾವ ಕಾಲದ ಶಾಸ್ತ್ರವೇನು ಹೇಳಿದರೇನು

ಯಾವ ಕಾಲದ ಶಾಸ್ತ್ರವೇನು ಹೇಳಿದರೇನು
ಎದೆಯ ದನಿಗೂ ಮಿಗಿಲು ಶಾಸ್ತ್ರವಿಹುದೇನು
ಎಂದೊ ಮನು ಬರೆದಿಟ್ಟುದಿಂದೆಮಗೆ ಕಟ್ಟೇನು
ನಿನ್ನೆದೆಯ ದನಿಯೆ ಋಷಿ ಮನು ನಿನಗೆ ನೀನು

ನೀರಡಸಿ ಬಂದ ಸೋದರಗೆ ನೀರನು ಕೊಡಲು
ಮನುಧರ್ಮಶಾಸ್ತ್ರವೆನಗೊರೆಯಬೇಕೇನು
ನೊಂದವರ ಕಂಬನಿಯನೊರಸಿ ಸಂತೈಸುವೊಡೆ
ಶಾಸ್ತ್ರ ಪ್ರಮಾಣವದಕಿರಲೆಬೇಕೇನು

ಪಂಚಮರ ಶಿಶುವೊಂದು ಕೆರೆಯಲ್ಲಿ ಮುಳುಗುತಿರೆ
ದಡದಲ್ಲಿ ಮೀಯುತ್ತ ನಿಂತಿರುವ ನಾನು
ಮುಟ್ಟಿದರೆ ಬ್ರಹ್ಮತ್ವ ಕೆಟ್ಟುಹೋಗುವುದೆಂದು
ಸುಮ್ಮನಿದ್ದರೆ ಶಾಸ್ತ್ರಸಮ್ಮತವದೇನು

ಅಂತು ಮನು ತಾನು ಹೇಳಿರಲಾರನಯ್ಯಯ್ಯೊ
ಹೇಳಿದ್ದರವನನೂ ಶಾಸ್ತ್ರದೊಳೆ ಸುತ್ತಿ
ಸ್ವರ್ಗ ಹೋಗಲಿ ಮತ್ತೆ ನರಕ ಬಂದರು ಬರಲಿ
ಎದೆಯ ಧೈರ್ಯವ ಮಾಡಿ ಬಿಸುಡಾಚೆಗೆತ್ತಿ

ಸ್ವರ್ಗ ಹೋಗುವುದಿಲ್ಲ ನರಕ ಬರುವುದು ಇಲ್ಲ
ಸ್ವರ್ಗ ನರಕಗಳೇನು ಶಾಸ್ತ್ರಸ್ಥವಲ್ಲ
ಎದೆಯ ದನಿ ಧರ್ಮನಿಧಿ ಕರ್ತವ್ಯವದುವೆ ವಿಧಿ
ನಂಬದನು ಅದನುಳಿದು ಋಷಿಯು ಬೇರಿಲ್ಲ

ಹಿಂದಿನಾ ಋಷಿಗಳೂ ಮಾನವರೆ ನಮ್ಮಂತೆ
ಅವರ ಶಾಸ್ತ್ರವು ಅವರ ಕಾಲಕ್ಕೆ ಮಾತ್ರ
ಕಾಲಕ್ಕೆ ತಕ್ಕಂತೆ ದೇಶಕ್ಕೆ ತಕ್ಕಂತೆ
ನಮ್ಮ ಹೃದಯವೆ ನಮಗೆ ಶ್ರೀಧರ್ಮಸೂತ್ರ

ಜಾತಿ ಮತ್ತು ಮತದ ಸಂಪ್ರದಾಯಗಳನ್ನು ಪಾಲಿಸುವಾಗ ಹಾಗೂ ದೇವರನ್ನು ಪೂಜಿಸುವಾಗ ಮಾಡಲೇಬೇಕೆಂದು ಶಾಸ್ತ್ರದಲ್ಲಿ ಹೇಳಿರುವ ಕಟ್ಟುಕಟ್ಟಳೆಗಿಂತಲೂ ಸಹಮಾನವರೊಡನೆ ಪ್ರೀತಿ, ಕರುಣೆ ಮತ್ತು ಸಾಮರಸ್ಯದ ಸಹಬಾಳ್ವೆಯ ನಡೆನುಡಿ ದೊಡ್ಡದೆಂಬ ಸಂಗತಿಯನ್ನು ಈ ಕವನದಲ್ಲಿ ಹೇಳಲಾಗಿದೆ.

(ಶಾಸ್ತ್ರ+ಏನು; ಶಾಸ್ತ್ರ=ಸಾಂಪ್ರದಾಯಿಕ ಆಚರಣೆ/ಕಟ್ಟುಕಟ್ಟಳೆ; ಹೇಳಿದರೆ+ಏನು; ಹೇಳು=ನಿಯಮಿಸು/ಗೊತ್ತುಪಡಿಸು; ಎದೆ=ಮನಸ್ಸು; ದನಿ=ತುಡಿತ/ಮಿಡಿತ;

ಎದೆಯ ದನಿ=ಯಾವುದೇ ಜಾತಿ ಮತದ ಕಟ್ಟುಪಾಡುಗಳಿಗೆ ಒಳಗಾಗದೆ ವ್ಯಕ್ತಿಯ ಮನದಲ್ಲಿ ಸಹಜವಾಗಿ ಉಂಟಾಗುವ ಮಿಡಿತ. ಇದೊಂದು ರೂಪಕವಾಗಿ ಬಳಕೆಯಾಗಿದೆ. ವ್ಯಕ್ತಿಯು ತನ್ನ ಕಣ್ಣ ಮುಂದಿನ ಜಗತ್ತಿನ ಆಗುಹೋಗುಗಳಲ್ಲಿ "ಯಾವುದು ನಿಸರ್ಗ ಸಹಜವಾದುದು--ಯಾವುದು ಮಾನವ ನಿರ್ಮಿತ" ಎಂಬುದನ್ನು ಒರೆಹಚ್ಚಿ ನೋಡಿ, ಜಾತಿ ಮತ ಮತ್ತು ದೇವರುಗಳೆಲ್ಲವೂ ಮಾನವ ನಿರ್ಮಿತವೆಂಬ ವಾಸ್ತವವನ್ನು ಅರಿತುಕೊಳ್ಳುವುದು ಮತ್ತು ತನ್ನನ್ನು ಒಳಗೊಂಡಂತೆ ಸಹಮಾನವರೆಲ್ಲರ ಒಳಿತಿಗಾಗಿ ಬಾಳಬೇಕೆಂಬ ಎಚ್ಚರವನ್ನು ಪಡೆಯುವುದು

ಮಿಗಿಲು=ಹೆಚ್ಚಾದುದು; ಶಾಸ್ತ್ರ+ಇಹುದು+ಏನು; ಇಹುದು=ಇರುವುದು;

ಯಾವ ಕಾಲದ ಶಾಸ್ತ್ರವೇನು ಹೇಳಿದರೇನು ಎದೆಯ ದನಿಗೂ ಮಿಗಿಲು ಶಾಸ್ತ್ರವಿಹುದೇನು=ವ್ಯಕ್ತಿಯು ತನ್ನನ್ನು ಒಳಗೊಂಡಂತೆ ಎಲ್ಲರ ಹಿತಕ್ಕಾಗಿ ಮಾಡುವ ಒಳ್ಳೆಯ ಆಚರಣೆಗಿಂತ ಶಾಸ್ತ್ರದಲ್ಲಿ ಹೇಳಿರುವ ಕಟ್ಟುಪಾಡು ದೊಡ್ಡದಲ್ಲ;

ಎಂದೊ=ಯಾವ ಕಾಲದಲ್ಲಿಯೋ; ಮನು=ಒಬ್ಬ ರಿಸಿಯ ಹೆಸರು; ಬರೆದು+ಇಟ್ಟುದು+ಇಂದು+ಎಮಗೆ; ಬರೆ=ರಚಿಸು; ಬರೆದಿಟ್ಟುದು=ಬರೆದು ಗೊತ್ತುಪಡಿಸಿರುವುದು; ಇಂದು=ಈ ಕಾಲದಲ್ಲಿ; ಎಮಗೆ=ನಮಗೆ/ಜನಸಮುದಾಯಕ್ಕೆ; ಕಟ್ಟು+ಏನು; ಕಟ್ಟು=ಕಟ್ಟಳೆ/ನಿಯಮ; ನಿನ್ನ+ಎದೆಯ; ಋಷಿ=ಜಗತ್ತಿನ ವಾಸ್ತವವನ್ನು ಅರಿತು "ಯಾವುದು ದಿಟ--ಯಾವುದು ಸಟೆ; ಯಾವುದು ನೀತಿ--ಯಾವುದು ಅನೀತಿ; ಯಾವುದು ಒಳ್ಳೆಯದು--ಯಾವುದು ಕೆಟ್ಟದ್ದು" ಎಂಬುದನ್ನು ಜನಸಮುದಾಯಕ್ಕೆ ತಿಳಿಯ ಹೇಳುವವನು;

ಎಂದೊ ಮನು ಬರೆದಿಟ್ಟುದಿಂದೆಮಗೆ ಕಟ್ಟೇನು ನಿನ್ನೆದೆಯ ದನಿಯೆ ಋಷಿ ಮನು ನಿನಗೆ ನೀನು=ಎಂದೊ ಒಂದು ಕಾಲದಲ್ಲಿ ಮನು ಬರೆದಿಟ್ಟಿರುವ ಸಾಮಾಜಿಕ ಕಟ್ಟಳೆಗಳು ಇಂದು ನಮಗೆ ಬೇಕಾಗಿಲ್ಲ. ಯಾವ ಬಗೆಯ ಆಚರಣೆಗಳು ಇಡೀ ಜನಸಮುದಾಯಕ್ಕೆ ಒಳಿತನ್ನು ಮಾಡುತ್ತವೆಯೆಂದು ನಮಗೆ ಅನಿಸುತ್ತದೆಯೋ, ಅವೇ

ನಮ್ಮ ಬದುಕನ್ನು ಮುನ್ನಡೆಸಲು ಅಗತ್ಯವಾದ ಕಟ್ಟಳೆಗಳಾಗಬೇಕು. ಅಂದರೆ ನಮ್ಮ ಬದುಕಿನ ಹಾದಿಯನ್ನು ನಾವೇ ನಿರ್ಮಿಸಿಕೊಂಡು ನಡೆಯಬೇಕು;

ನೀರ್+ಅಡಸಿ; ಅಡಸಿ=ಬೇಕಾಗಿ/ಬಯಸಿ; ನೀರಡಸಿ=ಬಾಯಾರಿ/ನೀರನ್ನು ಕುಡಿಯಲೆಂದು; ಸೋದರ=ಒಡಹುಟ್ಟಿದ ಅಣ್ಣ ಇಲ್ಲವೇ ತಮ್ಮ; ಮನುಧರ್ಮಶಾಸ್ತ್ರ+ ಎನಗೆ+ಒರೆಯಬೇಕೇನು; ಎನಗೆ=ನನಗೆ; ಒರೆ=ಹೇಳು;

ಮನು ಧರ್ಮಶಾಸ್ತ್ರ=ಮನು ಎಂಬ ರಿಸಿಯು ಸಂಸ್ಕೃತ ನುಡಿಯಲ್ಲಿ ಬರೆದ ಹೊತ್ತಿಗೆಯನ್ನು 'ಮನುಧರ್ಮ ಶಾಸ್ತ್ರ / ಮನುಸ್ಮೃತಿ' ಎಂದು ಕರೆಯುತ್ತಾರೆ. ಇದು ಕ್ರಿ.ಪೂ.೨೦೦ ರಿಂದ ಕ್ರಿ.ಶ.೩೦೦ ರ ನಡುವಣ ಕಾಲಮಾನದಲ್ಲಿ ರಚನೆಗೊಂಡಿರ ಬಹುದೆಂದು ಚರಿತ್ರೆಕಾರರು ಹೇಳಿದ್ದಾರೆ. ಇಂಡಿಯಾ ದೇಶದಲ್ಲಿ ಅಂದು ನೆಲೆಸಿದ್ದ ಜನಸಮುದಾಯದ ಸಾಮಾಜಿಕ ರಚನೆಯ ಸ್ವರೂಪವನ್ನು ಮತ್ತು ಜನರು ನಿತ್ಯಜೀವನದಲ್ಲಿ ಮಾಡಬೇಕಾದ ಆಚರಣೆಗಳನ್ನು ಹಾಗೂ ಅನುಸರಿಸಬೇಕಾದ ನಿಯಮಗಳನ್ನು ಈ ಹೊತ್ತಿಗೆಯಲ್ಲಿ ವಿವರಿಸಲಾಗಿದೆ.

ಇಂಡಿಯಾ ದೇಶದ ಪ್ರಾಚೀನ ಕಾಲದ ಸಾಮಾಜಿಕ ರಚನೆಯಲ್ಲಿ 'ಬ್ರಾಹ್ಮಣ-ಕ್ಷತ್ರಿಯ-ವೈಶ್ಯ-ಶೂದ್ರ' ಎಂಬ ನಾಲ್ಕು ವರ್ಣಗಳಿದ್ದವು. ಬ್ರಹ್ಮನೆಂಬ ದೇವರ ಮೊಗದಿಂದ ಬ್ರಾಹ್ಮಣ, ತೋಳುಗಳಿಂದ ಕ್ಷತ್ರಿಯ, ತೊಡೆಗಳಿಂದ ವೈಶ್ಯ, ಪಾದಗಳಿಂದ ಶೂದ್ರರು ಹುಟ್ಟಿ ಬಂದಿದ್ದಾರೆ. ವಿದ್ಯೆ, ಸಂಪತ್ತು ಮತ್ತು ನಾಡಿನ ಆಡಳಿತದ ಗದ್ದುಗೆ ಹೊಂದುವುದಕ್ಕೆ ಶೂದ್ರರು ಯೋಗ್ಯರಲ್ಲ. ಪಾದವು ಹೇಗೆ ದೇಹದ ತೂಕವನ್ನು ಹೊರುತ್ತದೆಯೋ ಅಂತೆಯೇ ಶೂದ್ರರು ಇನ್ನುಳಿದ ಮೂರು ವರ್ಣದವರ ಸೇವೆಯಲ್ಲಿಯೇ ತಮ್ಮ ಬದುಕನ್ನು ಕಳೆಯಬೇಕು ಎಂಬ ಕಟ್ಟಳೆಗಳನ್ನು ಮನು ಗೊತ್ತುಪಡಿಸಿದ್ದಾನೆ.

ಮನುವಿನ ಕಾಲದಲ್ಲಿಯೇ ಜನಸಮುದಾಯದಲ್ಲಿದ್ದ ಮತ್ತೊಂದು ವರ್ಗದ ಜನರನ್ನು 'ಚಂಡಾಲ'ರೆಂದು ಹೆಸರಿಸಲಾಗಿದೆ. ಸಾಮಾಜಿಕ ಇತಿಹಾಸದಲ್ಲಿ ಇವರನ್ನು ಪಂಚಮರೆಂದು ಗುರುತಿಸಲಾಗಿದೆ. ಕಾಲ ಉರುಳಿದಂತೆಲ್ಲಾ ನಾಲ್ಕು ವರ್ಗಗಳು ಹತ್ತಾರು ನೂರಾರು ಸಾವಿರಾರು ಬಗೆಯ ಕವಲುಗಳಾಗಿ ಮತ್ತೆ ಮತ್ತೆ ಒಡೆದು ಜಾತಿ ಉಪಜಾತಿಗಳಾಗಿ ರೂಪುಗೊಂಡಿವೆ. ಪ್ರತಿಯೊಂದು ಜಾತಿ ಉಪಜಾತಿಗಳು ತಮ್ಮದೇ ಆದ ಸಂಪ್ರದಾಯ ಮತ್ತು ಕಟ್ಟುಪಾಡುಗಳನ್ನು ಆಚರಿಸುತ್ತಿವೆ.

ಶಾಸ್ತ್ರದಲ್ಲಿ ಹೇಳಿದೆಯೆಂದು ಅನುಸರಿಸುತ್ತಿರುವ ಕಟ್ಟುಪಾಡುಗಳು ಜಾತಿ ಸಮುದಾಯಗಳನ್ನು ಮಾನಸಿಕವಾಗಿ ವಿಂಗಡಿಸಿ "ನಮ್ಮ ಜಾತಿ ಮತ್ತೊಂದು ಜಾತಿಗಿಂತ ಮೇಲು ಎಂಬ ಮೇಲರಿಮೆಯನ್ನು ಮತ್ತು ನಮ್ಮ ಜಾತಿ ಮತ್ತೊಂದು ಜಾತಿಗಿಂತ ಕೀಳು" ಎಂಬ ಕೀಳರಿಮೆಯನ್ನು ಜನಮನದಲ್ಲಿ ನಾಟಿಸಿದೆ. ಆದ್ದರಿಂದಲೇ ಜಾತಿ

ಸಮುದಾಯದಲ್ಲಿ ಹುಟ್ಟಿ ಬೆಳೆದು ಬಾಳುತ್ತಿರುವ ನಮ್ಮೆಲ್ಲರಲ್ಲಿಯೂ ಬೇರೆ ಬೇರೆ ಪ್ರಮಾಣದಲ್ಲಿ ಜಾತಿಯ ಬಗೆಗಿನ ಮೇಲರಿಮೆ ಇಲ್ಲವೇ ಕೀಳರಿಮೆಯು ನೆಲೆಗೊಂಡಿದೆ;

ನೀರಡಿಸಿ ಬಂದ ಸೋದರಗೆ ನೀರನು ಕೊಡಲು ಮನುಧರ್ಮಶಾಸ್ತ್ರವೆನಗೊರೆಯಬೇಕೇನು=ಬಾಯಾರಿ ಬಂದು ನೀರನ್ನು ಕೇಳುವ ವ್ಯಕ್ತಿಯ ಜಾತಿ ಮತವನ್ನು ಕೇಳಿ ತಿಳಿದುಕೊಂಡು, ಅವನು ನಮಗಿಂತ ಕೆಳಜಾತಿಯವನಾಗಿದ್ದರೆ ನೀರನ್ನು ಕೊಡದೆ ಹಿಂದಕ್ಕೆ ಕಳುಹಿಸುವ ಕ್ರೂರತನದ ನಡವಳಿಕೆಯು ಜಾತಿ ಮತ್ತು ವರ್ಣಗಳ ತಾರತಮ್ಯದ ಕಾರಣದಿಂದಾಗಿ ನಮ್ಮ ಜನಸಮುದಾಯದ ಮನದಲ್ಲಿ ಬೇರೂರಿದೆ. ಕುಡಿಯುವ ನೀರಿನ ಬಾವಿಯ ಬಳಿಗೆ ಕೆಳಜಾತಿಯವರನ್ನು ಸೇರಿಸದ ಕಟ್ಟುಪಾಡುಗಳು ಇಂದಿಗೂ ಹಲವಾರು ಊರುಗಳಲ್ಲಿ ಆಚರಣೆಯಲ್ಲಿರುವುದನ್ನು ನಾವು ಕಾಣಬಹುದು. ಸಹಮಾನವನ ಬಗ್ಗೆ ಕರುಣೆಯಿಲ್ಲದ ಇಂತಹ ವರ್ತನೆಗೆ ಕಾರಣವಾದ ಜಾತಿ ಕಟ್ಟುಪಾಡುಗಳಿಂದ ಕೂಡಿರುವ ಶಾಸ್ತ್ರದ ಕಟ್ಟಳೆಗಳನ್ನು ತಿರಸ್ಕರಿಸಬೇಕೆಂಬ ಇಂಗಿತವನ್ನು ಈ ನುಡಿಗಳು ಸೂಚಿಸುತ್ತಿವೆ;

ಕಂಬನಿ+ಅನ್+ಒರೆಸಿ; ಕಂಬನಿ=ಕಣ್ಣೀರು; ಅನ್=ಅನ್ನು; ಒರೆಸು=ಅಳಿಸು; ಸಂತೈಸುವೊಡೆ=ಉಪಚರಿಸುವುದಾದರೆ; ಪ್ರಮಾಣ+ಅದಕೆ+ಇರಲೆ; ಪ್ರಮಾಣ=ನಿಯಮ;

ಶಾಸ್ತ್ರಪ್ರಮಾಣ=ಶಾಸ್ತ್ರದಲ್ಲಿ ಹೇಳಿರುವ ಕಟ್ಟಳೆ;

ಪಂಚಮ=ಚಂಡಾಲ. ಮೇಲು ವರ್ಣದವರು ಚಂಡಾಲರನ್ನು ಪ್ರಾಣಿಗಳಿಗಿಂತಲೂ ಕೀಳಾಗಿ ಕಾಣುತ್ತಿದ್ದರು. ಇವರನ್ನು ಮುಟ್ಟಿದರೆ ಮೇಲು ವರ್ಣದ ಮಡಿಯು ಹಾಳಾಗಿ, ಸಾಮಾಜಿಕವಾಗಿ ಕಳಂಕ ತಟ್ಟುವುದೆಂಬ ಕಟ್ಟಲೆಯಿತ್ತು;

ಶಿಶು+ಒಂದು; ಶಿಶು=ಮಗು; ಕೆರೆ+ಅಲ್ಲಿ; ಮುಳುಗುತ+ಇರೆ; ದಡ+ಅಲ್ಲಿ; ದಡ=ತೀರ; ಮೀಯು=ಸ್ನಾನ ಮಾಡು; ನಿಂತು+ಇರುವ; ಬ್ರಹ್ಮತ್ವ=ಮೇಲು ವರ್ಣದ ಹಿರಿಮೆ/ಮಡಿವಂತಿಕೆ; ಕೆಟ್ಟು+ಹೋಗುವುದು+ಎಂದು; ಕೆಟ್ಟುಹೋಗುವುದು=ಹಾಳಾಗುವುದು; ಸುಮ್ಮನೆ+ಇದ್ದರೆ; ಸುಮ್ಮನೆ=ಏನನ್ನೂ ಮಾಡದೆ; ಶಾಸ್ತ್ರಸಮ್ಮತ+ಏನು; ಸಮ್ಮತ=ಒಪ್ಪಿಗೆ;

ಶಾಸ್ತ್ರಸಮ್ಮತ=ಶಾಸ್ತ್ರದಲ್ಲಿ ಹೇಳಿರುವಂತೆ ನಡೆದುಕೊಳ್ಳುವುದು; ಒಂದು ಮಗುವಿನ ಜೀವಕ್ಕಿಂತಲೂ ವರ್ಣ ಇಲ್ಲವೇ ಜಾತಿಯ ಕಟ್ಟುಪಾಡುಗಳೇ ದೊಡ್ಡದೆಂದು ನಂಬಿರುವ ವ್ಯಕ್ತಿಯು ಸಹಮಾನವರ ಬಗ್ಗೆ ಕಿಂಚಿತ್ತಾದರೂ ಕರುಣೆಯಿಲ್ಲದೆ ನಡೆದುಕೊಳ್ಳುತ್ತಾನೆ;

ಅಂತು=ಆ ರೀತಿ ; ತಾನು=ಆ ಮನು ರಿಸಿ; ಹೇಳಿ+ಇರಲಾರನ್+ಅಯ್ಯಯೊ; ಅಯ್ಯಯೊ=ಸಂಕಟದಿಂದ ಕೂಗಿಕೊಳ್ಳುವುದು; ಹೇಳಿದ್ದರೆ+ಅವನನೂ; ಶಾಸ್ತ್ರದೊಳೆ ಸುತ್ತಿ=ಶಾಸ್ತ್ರದಲ್ಲಿ ಹೇಳಿರುವ ನಿಯಮಗಳಿಂದಲೇ ಕಟ್ಟಿ;

ಸ್ವರ್ಗ ಮತ್ತು ನರಕ=ಮಾನವನ ಕಲ್ಪನೆಯಲ್ಲಿ ರೂಪುಗೊಂಡಿರುವ ಎರಡು ನೆಲೆಗಳು. ಸ್ವರ್ಗವು ಚೆಲುವು ಒಲವು ನಲಿವನ್ನುಂಟುಮಾಡುವ ತಾಣ ಮತ್ತು ನರಕವು ಸಂಕಟ ವೇದನೆ ನೋವನ್ನುಂಟುಮಾಡುವ ತಾಣ ಎಂಬ ಕಲ್ಪನೆಯು ಜನಮನದಲ್ಲಿದೆ;

ಧೈರ್ಯ=ಕೆಚ್ಚು; ಎದೆಯ ಧೈರ್ಯ=ಮನದಲ್ಲಿ ಸರಿಯಾದ ನಿಲುವನ್ನು ತಳೆಯುವುದು; ಬಿಸುಡು+ಆಚೆಗೆ+ಎತ್ತಿ; ಬಿಸುಡು=ಎಸೆ/ಒಗೆ;

ಎದೆಯ ಧೈರ್ಯವ ಮಾಡಿ ಬಿಸುಡಾಚೆಗೆತ್ತಿ=ಮನು ಧರ್ಮಶಾಸ್ತ್ರದಲ್ಲಿ ಹೇಳಿರುವ ಕಟ್ಟಳೆಗಳು ಮೇಲಿನ ಮೂರು ವರ್ಣದವರನ್ನು ಹೊರತುಪಡಿಸಿ ಇನ್ನುಳಿದ ಜನಸಮುದಾಯವೆಲ್ಲವೂ ಜೀವನಕ್ಕೆ ಅಗತ್ಯವಾದ ಅನ್ನ ಬಟ್ಟೆ ವಸತಿ ವಿದ್ಯೆ ಉದ್ಯೋಗ ಆರೋಗ್ಯವನ್ನು ಪಡೆದು ನೆಮ್ಮದಿಯಿಂದ ಬಾಳುವುದಕ್ಕೆ ಅವಕಾಶವನ್ನು ನೀಡಲಿಲ್ಲ. ನಮ್ಮ ಪ್ರಾಚೀನ ಕಾಲದ ರಿಸಿಗಳು ಹೇಳಿರುವ 'ನಹೀ ಜ್ಞಾನೇನ ಸದೃಶಮ್--ಜ್ಞಾನಕ್ಕೆ ಸಮಾನವಾದುದು ಯಾವುದೂ ಇಲ್ಲ'; "ವಸುಧೈವ ಕುಟುಂಬಕಮ್--ಇಡೀ ಭೂಮಂಡಲದ ಜನಸಮುದಾಯವೆಲ್ಲವೂ ಒಂದು ಕುಟುಂಬ"; "ಸರ್ವೇ ಜನಾಃ ಸುಖಿನೋ ಭವಂತು--ಜನರೆಲ್ಲರೂ ಸುಖವಾಗಿರಲಿ" ಎಂಬ ಯಾವೊಂದು ನುಡಿಗಳು ನಿಜಜೀವನದಲ್ಲಿ ಕಾರ್ಯರೂಪಕ್ಕೆ ಬಾರದಂತೆ ತಡೆಗಟ್ಟಿರುವ ಮನುವಿನ ಕಟ್ಟಳೆಗಳು ಶತಶತಮಾನಗಳಿಂದಲೂ ಜನಸಮುದಾಯದ ಮನದಲ್ಲಿ ಒಡಕನ್ನುಂಟುಮಾಡಿವೆ. ಆದ್ದರಿಂದ ಜನಸಮುದಾಯದ ಮನದಲ್ಲಿ ಪರಸ್ಪರ ಪ್ರೀತಿ, ಕರುಣೆ ಮತ್ತು ಸಾಮರಸ್ಯದ ಸಹಬಾಳ್ವೆಯನ್ನು ಉಂಟು ಮಾಡಬೇಕಾದರೆ ಮನುವಿನ ಸಾಮಾಜಿಕ ಕಟ್ಟಳೆಗಳನ್ನು ಸಂಪೂರ್ಣವಾಗಿ ನಿರಾಕರಿಸಬೇಕೆಂಬ ತಿರುಳನ್ನು ಈ ನುಡಿಗಳು ಸೂಚಿಸುತ್ತಿವೆ;

ನರಕ+ಗಳ್+ಏನು; ಶಾಸ್ತ್ರಸ್ಥ+ಅಲ್ಲ; ಶಾಸ್ತ್ರಸ್ಥ=ಸಂಪ್ರದಾಯದ ಕಟ್ಟಲೆಗಳಿಗೆ ಒಳಗಾಗಿರುವುದು;

ಶಾಸ್ತ್ರಸ್ಥವಲ್ಲ=ಯಾವುದೇ ನಿಯಮಕ್ಕೆ ಒಳಪಟ್ಟುವುಗಳಲ್ಲ. ಏಕೆಂದರೆ ಸ್ವರ್ಗ ನರಕಗಳು ಎಂಬುವು ವಾಸ್ತವದಲ್ಲಿ ಇಲ್ಲ;

ಧರ್ಮ=ವ್ಯಕ್ತಿಯು ತನ್ನ ಒಳಿತನ್ನು ಬಯಸುವಂತೆಯೇ ಸಹಮಾನವರ ಒಳಿತಿಗಾಗಿ ಬಾಳುವ ಒಳ್ಳೆಯ ನಡೆನುಡಿಗಳು; ನಿಧಿ=ಸಂಪತ್ತು;

ಧರ್ಮನಿಧಿ=ಒಳ್ಳೆಯ ನಡೆನುಡಿಗಳೇ ನಿಜವಾದ ಸಂಪತ್ತು. 'ಒಳ್ಳೆಯ ನಡೆನುಡಿ' ಎಂದರೆ ವ್ಯಕ್ತಿಯು ಆಡುವ ಮಾತು ಮತ್ತು ಮಾಡುವ ಕೆಲಸಗಳು ತನಗೆ ಒಳಿತನ್ನು ಮಾಡುವಂತೆ ಸಹಮಾನವರಿಗೂ ಒಳಿತನ್ನು ಮಾಡುವುದು;

ಕರ್ತವ್ಯ+ಅದುವೆ; ಕರ್ತವ್ಯ=ಕೆಲಸ; ವಿಧಿ=ನಿಯಮ; ಕರ್ತವ್ಯವದುವೆ ವಿಧಿ=ಒಳ್ಳೆಯ ಕೆಲಸಗಳೇ ನಿಜವಾದ ಕಟ್ಟಳೆಗಳು; ನಂಬು+ಅದನು; ಅದನ್+ಉಳಿದು; ಉಳಿ=ಬಿಟ್ಟು; ಬೇರೆ+ಇಲ್ಲ;

ಅದನುಳಿದು ಋಷಿಯು ಬೇರಿಲ್ಲ=ಜೀವನದಲ್ಲಿ ಒಳ್ಳೆಯ ನಡೆನುಡಿಗಳೇ ರಿಸಿವಾಣಿಯೇ ಹೊರತು ಮತ್ತಾವುದು ಅಲ್ಲ;

ನಮ್ಮ+ಅಂತೆ; ತಕ್ಕ+ಅಂತೆ; ಶ್ರೀ=ಮಂಗಳಕರವಾದ; ಸೂತ್ರ=ಕಟ್ಟಳೆ; ಶ್ರೀಧರ್ಮಸೂತ್ರ=ಎಲ್ಲರಿಗೂ ಒಳಿತನ್ನು ಉಂಟುಮಾಡುವ ಕಟ್ಟುಕಟ್ಟಳೆ;

ಕಾಲಕ್ಕೆ ತಕ್ಕಂತೆ ದೇಶಕ್ಕೆ ತಕ್ಕಂತೆ ನಮ್ಮ ಹೃದಯವೆ ನಮಗೆ ಶ್ರೀಧರ್ಮಸೂತ್ರ =ನಮ್ಮ ಮನಸ್ಸು ಪಡೆದುಕೊಳ್ಳುವ ಒಳ್ಳೆಯ ಅರಿವು ಮತ್ತು ಎಚ್ಚರದ ನಡೆನುಡಿಗಳೇ ಮಂಗಳಕರವಾದ ಕಟ್ಟಳೆಗಳು. ಯಾವುದೋ ಒಂದು ಕಾಲದಲ್ಲಿ ಹೇಳಿರುವ ಸಂಪ್ರದಾಯಗಳನ್ನೇ ನಂಬಿಕೊಂಡು ಹಾಳಾಗದೇ, ಇಂದಿನ ಜೀವನದ ಅಗತ್ಯಕ್ಕೆ ತಕ್ಕಂತೆ ಎಲ್ಲರ ಒಳಿತಿಗೆ ಪೂರಕವಾಗುವಂತಹ ನಡೆನುಡಿಗಳನ್ನು ರೂಪಿಸಿಕೊಂಡು ಬಾಳಬೇಕು.)

❖❖

೮. ಓ ಬನ್ನಿ ಸೋದರರೆ ಬೇಗ ಬನ್ನಿ

ಗುಡಿ ಚರ್ಚು ಮಸಜೀದಿಗಳ ಬಿಟ್ಟು ಹೊರಬನ್ನಿ
ಬಡತನವ ಬುಡಮಟ್ಟ ಕೀಳಬನ್ನಿ
ಮೌಢ್ಯತೆಯ ಮಾರಿಯನು ಹೊರದೂಡಲೈತನ್ನಿ
ವಿಜ್ಞಾನ ದೀವಿಗೆಯ ಹಿಡಿಯ ಬನ್ನಿ
ಓ ಬನ್ನಿ ಸೋದರರೆ ಬೇಗ ಬನ್ನಿ

ಅದೊ ನೋಡಿ ರಷ್ಯಾ ಜಪಾನು ತುರ್ಕಿಗಳೆಲ್ಲ
ಪರೆಗಳಚಿ ಹೊರಟಿಹವು ಹೊಸಪಯಣಕೆ
ಬೆಳಗಿಹರು ನೆತ್ತರೆಣ್ಣೆಯ ತಿಳಿವಿನುರಿಯಲ್ಲಿ
ಕಿಚ್ಚಿಟ್ಟು ಹಳೆಕೊಳಕು ಬಣಗು ತೃಣಕೆ
ಓ ಬನ್ನಿ ಸೋದರರೆ ರಾಷ್ಟ್ರರಣಕೆ

ಸಿಲುಕದಿರಿ ಮತವೆಂಬ ಮೋಹದಜ್ಞಾನಕ್ಕೆ
ಮತಿಯಿಂದ ದುಡಿಯಿರೈ ಲೋಕಹಿತಕೆ
ಆ ಮತದ ಈ ಮತದ ಹಳೆಮತದ ಸಹವಾಸ
ಸಾಕಿನ್ನು ಸೇರಿರೈ ಮನುಜ ಮತಕೆ
ಓ ಬನ್ನಿ ಸೋದರರೆ ವಿಶ್ವಪಥಕೆ.

ಜಾತಿ, ಮತ, ದೇವರುಗಳ ನೆಲೆಗಳಿಂದ ಹೊರಬಂದು, ನಿಸರ್ಗದ ನೆಲೆಯಲ್ಲಿ ನಾವೆಲ್ಲರೂ ಮನುಜ ಮತವೆಂಬ ಒಂದೇ ಗುಂಪಿನವರು ಎಂಬ ವಾಸ್ತವವನ್ನು ಅರಿತುಕೊಂಡು, ಪರಸ್ಪರ ಒಲವು ನಲಿವು ನೆಮ್ಮದಿಯಿಂದ ಜತೆಗೂಡಿ ಬಾಳಬೇಕೆಂಬ ಕರೆಯನ್ನು ಈ ಕವನದಲ್ಲಿ ಲೋಕದ ಜನಸಮುದಾಯಕ್ಕೆ ನೀಡಲಾಗಿದೆ.

(ಗುಡಿ=ಹಿಂದೂಗಳು ದೇವರನ್ನು ಪೂಜಿಸುವ ಮಂದಿರ; ಚರ್ಚು=ಕ್ರಿಶ್ಚಿಯನ್ನರು ಏಸುವನ್ನು ಪೂಜಿಸುವ ಮಂದಿರ; ಮಸಜೀದಿ=ಮುಸಲ್ಮಾನರು ಅಲ್ಲಾನನ್ನು ಪೂಜಿಸುವ ಮಂದಿರ; ಬಡತನ=ವ್ಯಕ್ತಿಯು ಜೀವನಕ್ಕೆ ಅತ್ಯಗತ್ಯವಾದ ಅನ್ನ, ಬಟ್ಟೆ, ವಸತಿ, ವಿದ್ಯೆ, ಉದ್ಯೋಗ, ಆರೋಗ್ಯವನ್ನು ಪಡೆಯಲಾಗದೆ ಸಂಕಟಕ್ಕೆ ಒಳಗಾಗಿರುವುದು; ಬುಡ=ಭೂಮಿಯೊಳಗಿರುವ ಮರಗಿಡಗಳ ಬೇರುಗಳ ಮೂಲ; ಬುಡಮಟ್ಟ=ಬೇರು ಸಮೇತ; ಕೀಳಬನ್ನಿ=ಕಿತ್ತು ಹಾಕಲು ಬನ್ನಿರಿ;

ಗುಡಿ ಚರ್ಚು ಮಸೀದಿಗಳಿಂದ ಹೊರಬರುವುದಕ್ಕೂ ಜನರ ಬಡತನದ ನಿವಾರಣೆಗೂ ಇರುವ ಪರಸ್ಪರ ನಂಟನ್ನು ತಿಳಿಯಬೇಕಾದರೆ, ಮಾನವ ಸಮುದಾಯದ ಬದುಕಿನ ನಡೆನುಡಿಗಳ ಮೇಲೆ ಇವು ಬೀರುತ್ತಿರುವ ಪರಿಣಾಮಗಳನ್ನು ಮನದಟ್ಟು ಮಾಡಿಕೊಳ್ಳಬೇಕು.

ಗುಡಿ ಚರ್ಚು ಮಸೀದಿಗಳು ಆಯಾಯ ಮತಗಳ ಪ್ರತಿಮಾ ರೂಪದ ಕಟ್ಟಡಗಳು. ಪ್ರತಿಯೊಂದು ಮತದ ಆಚರಣೆ, ಸಂಪ್ರದಾಯ ಮತ್ತು ಕಟ್ಟುಕಟ್ಟಲೆಗಳು ಮತ್ತೊಂದು ಮತಕ್ಕಿಂತ ಬೇರೆಯಾಗಿವೆ. ವಿಶ್ವದಲ್ಲಿರುವ ಮಾನವ ಸಮುದಾಯವನ್ನು ಮತಗಳು ಜಾತಿ ಮತ ದೇವರ ಹೆಸರಿನಲ್ಲಿ ಬೇರೆ ಬೇರೆಯಾಗಿ ವಿಂಗಡಿಸಿವೆ. ಒಂದು ಮತದವರು ಹೊಂದಿರುವ ಆಸ್ತಿಪಾಸ್ತಿ, ರಾಜಕೀಯ ಗದ್ದುಗೆ ಮತ್ತು ಸಾಮಾಜಿಕ ಅಂತಸ್ತಿನ ಹಿರಿಮೆಯು ಬೇರೆ ಮತದವರಲ್ಲಿ ಅಸಹನೆ ಮತ್ತು ಅಸೂಯೆಯನ್ನು ಹುಟ್ಟಿಸುತ್ತದೆ. ಈ ಕಾರಣದಿಂದಾಗಿ ಜನರ ಮನದಲ್ಲಿ ಪರಸ್ಪರ ಅಪನಂಬಿಕೆ ಮತ್ತು ಹಗೆತನದ ಒಳಮಿಡಿತಗಳು ಕೆರಳುತ್ತ ಪದೇ ಪದೇ ಹಲ್ಲೆ, ಲೂಟಿ ಮತ್ತು ಕೊಲೆಯಂತಹ ಕ್ರೂರತನದ ಕ್ರಿಯೆಗಳು ಜಗತ್ತಿನ ಉದ್ದಗಲಕ್ಕೂ ನಡೆಯುತ್ತಿರುತ್ತವೆ. ಲೋಕದ ಸಂಪತ್ತು ಮತ್ತು ರಾಜಕೀಯ ಆಡಳಿತವು ತಮ್ಮ ಮತದವರ ಕಯ್ಯಲ್ಲಿಯೇ ಇರಬೇಕೆಂದು ಪ್ರತಿಯೊಂದು ಮತದವರು ಇಚ್ಚಿಸುತ್ತಾರೆ ಮತ್ತು ಅವನ್ನು ಪಡೆಯಲು ನಿರಂತರವಾಗಿ ಹೋರಾಡುತ್ತಿರುತ್ತಾರೆ.

ಇತಿಹಾಸದ ಉದ್ದಕ್ಕೂ ಗುಡಿ ಚರ್ಚು ಮಸೀದಿಗಳನ್ನು ಕಟ್ಟಿಸಿಕೊಂಡು ಬರುತ್ತಿರುವ ರಾಜ ಮಹಾರಾಜರಿಗೆ ಮತ್ತು ಸಿರಿವಂತರಿಗೆ ಅವರದೇ ಆದ ಒಂದು ಉದ್ದೇಶವಿರುತ್ತದೆ. ಅದೇನೆಂದರೆ 'ದೇವರೇ ನಮ್ಮೆಲ್ಲರ ಜೀವನದ ಒಳಿತು ಕೆಡುಕುಗಳಿಗೆ ಕಾರಣ. ಆದ್ದರಿಂದ ನಮ್ಮ ಪಾಲಿಗೆ ಬಂದದ್ದನ್ನು ನಾವು ಅನುಭವಿಸಲೇ ಬೇಕು' ಎಂಬ ನಿಲುವನ್ನು ಜನಮನದಲ್ಲಿ ಬೇರೂರಿಸಿ, ತಮಗೆ ಎದುರಾಗಿ ಯಾವುದೇ ಬಗೆಯಲ್ಲಿಯೂ ಜನರು ದನಿ ಎತ್ತದಂತೆ ಇಲ್ಲವೇ ಹೋರಾಡದಂತೆ ತಡೆಯವುದು. ಆದ್ದರಿಂದಲೇ ಗುಡಿ ಚರ್ಚು ಮಸೀದಿಗಳು ಉಳ್ಳವರ ಸಿರಿವಂತಿಕೆಯ ಹಣದಿಂದ ಅದ್ದೂರಿಯಾಗಿ ಕಂಗೊಳಿಸತೊಡಗಿದಾಗ, ದುಡಿಯುವ ಶ್ರಮಜೀವಿಗಳಾದ ಶ್ರೀಸಾಮಾನ್ಯರು ಅಪಾರವಾದ ಸಂಕಟಗಳಿಗೆ ಗುರಿಯಾಗಿ ಬಡತನದ ಬೇಗೆಯಲ್ಲಿ ಬೇಯತೊಡಗುತ್ತಾರೆ. ಗುಡಿ ಚರ್ಚು ಮಸೀದಿಗಳಲ್ಲಿ ನಡೆಯುವ ಆಯಾಯ ಮತದ ಆಚರಣೆ, ಸಂಪ್ರದಾಯ ಮತ್ತು ಕಟ್ಟುಕಟ್ಟಳೆಗಳಿಗೂ ಸಾಮಾಜಿಕ ವ್ಯಕ್ತಿಯ ಒಳ್ಳೆಯ ನಡೆನುಡಿಗಳಿಗೂ ಯಾವುದೇ ನಂಟು ಇರುವುದಿಲ್ಲ. ಸಹಮಾನವರನ್ನು ಮತ್ತು ಸಮಾಜವನ್ನು ವಂಚಿಸಿ ಸಂಪತ್ತನ್ನು ಲೂಟಿ ಹೊಡೆಯುವ ವ್ಯಕ್ತಿಗಳು ಅಪಾರವಾದ ಚಿನ್ನ ಬೆಳ್ಳಿ ವಜ್ರದ ಒಡವೆಗಳನ್ನು ಮತ್ತು ಹಣವನ್ನು ದೇವಮಂದಿರಗಳಿಗೆ ಕಾಣಿಕೆಯಾಗಿ ನೀಡುತ್ತಾರೆ. ಜನಬಲ, ತೋಳ್ಬಲ, ರಾಜಕೀಯ ಆಡಳಿತದ ಬಲವಿರುವ ಮತದವರು ದೇವ ಮಂದಿರಗಳ ಹೆಸರನ್ನು

ಮುಂದಿಟ್ಟುಕೊಂಡು ದುರ್ಬಲರಾದ ಜನಸಮುದಾಯಗಳ ಮೇಲೆ ಹಲ್ಲೆ ನಡೆಸಿ, ಜಗತ್ತಿನ ಜನಸಂಕೆಯಲ್ಲಿ ಶೇ.೪೦ ಕ್ಕಿಂತ ಹೆಚ್ಚು ಮಂದಿ ಬಡತನದಿಂದ ನರಳುತ್ತಿರುವುದಕ್ಕೆ ಕಾರಣರಾಗಿದ್ದಾರೆ.

ಈ ಹಿನ್ನೆಲೆಯಿಂದ ನೋಡಿದಾಗ ಗುಡಿ ಚರ್ಚು ಮಸೀದಿಗಳು ವಿಶ್ವದ ಮಾನವರೆಲ್ಲರೂ ಪರಸ್ಪರ ಒಲವು ನಲಿವು ನೆಮ್ಮದಿಯಿಂದ ಜತೆಗೂಡಿ ಬಾಳುವುದಕ್ಕೆ ನೂರಾರು ಬಗೆಯ ಅಡೆತಡೆಗಳನ್ನು ಒಡ್ಡಿವೆ. ಆದ್ದರಿಂದ ಪ್ರತಿಯೊಬ್ಬ ವ್ಯಕ್ತಿಯು ಮಾನಸಿಕವಾಗಿ ಇವುಗಳಿಂದ ಹೊರಬಂದಾಗ ಮಾತ್ರ 'ಎಲ್ಲ ಮಾನವರು ಒಂದೇ' ಎಂಬ ಅರಿವು ಬರುತ್ತದೆ. ಪ್ರತಿಯೊಬ್ಬ ವ್ಯಕ್ತಿಯು ತನಗೆ ಅಗತ್ಯವಿರುವಂತೆಯೇ ಎಲ್ಲ ಮಾನವ ಜೀವಿಗಳಿಗೂ ಅನ್ನ ಬಟ್ಟೆ ವಸತಿ ವಿದ್ಯೆ ಉದ್ಯೋಗ ಆರೋಗ್ಯ ದೊರಕುವಂತಾಗಲೆಂಬ ಒಳ್ಳೆಯ ಉದ್ದೇಶದಿಂದ ದುಡಿಯತೊಡಗಿದಾಗ ಮಾತ್ರ ಮಾನವ ಸಮುದಾಯವನ್ನು ಕಾಡುತ್ತಿರುವ ಬಡತನವು ಸಂಪೂರ್ಣವಾಗಿ ತೊಲಗುತ್ತದೆ ಎಂಬ ಇಂಗಿತವನ್ನು **'ಗುಡಿ ಚರ್ಚು ಮಸಜೀದಿಗಳ ಬಿಟ್ಟು ಹೊರಬನ್ನಿ ಬಡತನವ ಬುಡಮಟ್ಟ ಕೀಳಬನ್ನಿ'** ಎಂಬ ನುಡಿಗಳು ಸೂಚಿಸುತ್ತಿವೆ;

ಮೌಢ್ಯತೆ=ದಡ್ಡತನ/ತಿಳಿಗೇಡಿತನ; ಮಾರಿ=ಒಬ್ಬ ದೇವತೆಯ ಹೆಸರು/ಕೇಡು/ಹಾನಿ;

ಮೌಢ್ಯತೆಯ ಮಾರಿ=ಇದೊಂದು ರೂಪಕ. 'ರೂಪಕ' ಎಂದರೆ ಒಂದು ಶಬ್ದಚಿತ್ರದ ಮೂಲಕ ಕವಿಯು ತಾನು ಹೇಳಬೇಕಾದ ಸಂಗತಿಯನ್ನು ನಿರೂಪಿಸುವುದು. ಜಾತಿ ಮತ ದೇವರುಗಳೆಲ್ಲವೂ ಮಾನವ ಮನದಲ್ಲಿ ಮೂಡಿಬಂದಿರುವ ಕಲ್ಪನೆಗಳೇ ಹೊರತು, ಅವು ವಾಸ್ತವದಲ್ಲಿಲ್ಲ. ಆದರೆ ಸಾವಿರಾರು ವರುಶಗಳಿಂದಲೂ ಜನಮನದಲ್ಲಿ ಜಾತಿ ಮತ ದೇವರ ಬಗ್ಗೆ ಅನೇಕ ಮೂಢ ನಂಬಿಕೆಗಳು ನೆಲೆಯೂರಿವೆ. ಇಂತಹ ಮೂಢ ನಂಬಿಕೆಗಳು ಜನರ ದಿನನಿತ್ಯದ ಬದುಕನ್ನು ಬಹುಬಗೆಯ ಸಂಕಟಗಳಿಗೆ ಗುರಿಮಾಡಿವೆ;

ಹೊರದೂಡಲ್+ಐತನ್ನಿ; ಹೊರದೂಡು=ಹೊರಕ್ಕೆ ತಳ್ಳಲು; ಐತರು=ಬಂದು ಸೇರು; ಐತನ್ನಿ=ಬನ್ನಿರಿ; ವಿಜ್ಞಾನ=ಯಾವುದೇ ಜಡವಸ್ತು ಮತ್ತು ಜೀವಿಯ ಇರುವಿಕೆಯನ್ನು ಪ್ರಯೋಗದ ಮೂಲಕ ಒರೆಹಚ್ಚಿ ನೋಡಿ, ಕಾರ್ಯ ಕಾರಣಗಳ ಹಿನ್ನೆಲೆಯಲ್ಲಿ ಅವುಗಳ ನಿಜಸ್ವರೂಪವನ್ನು ಅಂದರೆ ವಾಸ್ತವದ ಸಂಗತಿಗಳನ್ನು ಅರಿಯುವುದು; ದೀವಿಗೆ=ದೀಪ;

ವಿಜ್ಞಾನ ದೀವಿಗೆ=ಇದೊಂದು ರೂಪಕ. ಪ್ರಯೋಗಶೀಲತೆ ಮತ್ತು ವಿಚಾರವಂತಿಕೆಯಿಂದ ಅರಿವನ್ನು ಪಡೆಯುವುದು;

ಮಾನವ ಸಮುದಾಯವು ತಮ್ಮ ಇಂದಿನ ಜೀವನದ ಒಳಿತು ಕೆಡುಕುಗಳಿಗೆ ತಾವು ಹಿಂದಿನ ಜನ್ಮದಲ್ಲಿ ಮಾಡಿದ ಪಾಪ ಪುಣ್ಯ ಮತ್ತು ದೇವರು ಬರೆದಿರುವ ಹಣೆಬರಹ ಇಲ್ಲವೇ ವಿಧಿ ಬರಹ ಕಾರಣವೆಂದು ನಂಬಿದೆ. ದೇವರ ಅಪ್ಪಣೆಯಿಲ್ಲದೆ

ಒಂದು ಹುಲ್ಲು ಕಡ್ಡಿಯೂ ಅಲುಗದು ಎಂಬ ನಂಬಿಕೆಯಿಂದ ತಮ್ಮೆಲ್ಲ ಬದುಕಿಗೆ ದೇವರನ್ನೇ ಹೊಣೆಗಾರನನ್ನಾಗಿ ಮಾಡಿದೆ. ಇದು ಒಂದು ತಪ್ಪು ತಿಳುವಳಿಕೆ ಇಲ್ಲವೇ ಮೂಢ ನಂಬಿಕೆ. ಇದರಿಂದಾಗಿ ಮಾನವ ಸಮುದಾಯದಲ್ಲಿ ಬಹುತೇಕ ಮಂದಿಯ ಬಡತನಕ್ಕೆ ಮತ್ತು ಸಂಕಟಕ್ಕೆ ಕಾರಣವಾಗಿರುವ ಸಾಮಾಜಿಕ ಮತ್ತು ಆರ್ಥಿಕ ವ್ಯವಸ್ಥೆಯಲ್ಲಿನ ವಂಚನೆ, ಸುಲಿಗೆ ಮತ್ತು ಕ್ರೂರತನದ ವರ್ತನೆಗಳನ್ನು ಅರಿಯಲಾಗದೆ, ಆಳುವ ಅರಸರು ಮತ್ತು ಸಿರಿವಂತರು ಒಡ್ಡಿರುವ ಬಲೆಯಲ್ಲಿ ಸಿಲುಕಿ ಬಡ ಜನರು ನರಳುತ್ತಿದ್ದಾರೆ. ಮಾನವ ಸಮುದಾಯದ ಬದುಕಿನಲ್ಲಿ ನಡೆಯುತ್ತಿರುವ ಎಲ್ಲಾ ಬಗೆಯ ಆಗುಹೋಗುಗಳಿಗೆ ನಿಸರ್ಗದಲ್ಲಿ ಉಂಟಾಗುವ ಕ್ರಿಯೆಗಳು ಮತ್ತು ಮಾನವರ ನಡೆನುಡಿಗಳೇ ಕಾರಣವಾಗಿವೆ ಎಂಬ ವಾಸ್ತವವನ್ನು ಅರಿತಾಗ ಮಾತ್ರ ಇಂತಹ ಮೂಢ ನಂಬಿಕೆಗಳಿಂದ ಹೊರಬರಬಹುದು. ಈ ಹಿನ್ನೆಲೆಯಲ್ಲಿ **"ಮೌಢ್ಯತೆಯ ಮಾರಿಯನು ಹೊರದೂಡಲೈತನ್ನಿ ವಿಜ್ಞಾನ ದೀವಿಗೆಯ ಹಿಡಿಯ ಬನ್ನಿ"** ಎಂಬ ನುಡಿಗಳು ಜಗತ್ತಿನ ವಿದ್ಯಮಾನಗಳನ್ನು ವಾಸ್ತವದ ನೆಲೆಯಲ್ಲಿ ಒರೆಹಚ್ಚಿ ನೋಡಬೇಕೆಂಬ ಅರಿವು ಮತ್ತು ಎಚ್ಚರದ ದನಿಗೆ ಸಂಕೇತವಾಗಿವೆ;

ಸೋದರರ=ಒಂದೇ ತಾಯಿಯ ಹೊಟ್ಟೆಯಲ್ಲಿ ಹುಟ್ಟಿರುವ ಅಣ್ಣ ತಮ್ಮ;

ಓ ಬನ್ನಿ ಸೋದರರೆ ಬೇಗ ಬನ್ನಿ=ವಿಶ್ವದಲ್ಲಿರುವ ಮಾನವರಾದ ನಾವೆಲ್ಲ ಒಂದೇ ತಾಯಿಯ ಹೊಟ್ಟೆಯಲ್ಲಿ ಹುಟ್ಟಿ ಬೆಳೆದಿರುವ ಮಕ್ಕಳೆಂಬ ಅರಿವಿನಿಂದ ಜತೆಗೂಡಿ ಮುನ್ನಡೆಯೋಣ ಬನ್ನಿರಿ;

ಅದೊ ನೋಡಿ=ಜಗತ್ತಿನ ಎಲ್ಲೆಡೆಯಲ್ಲಿಯೂ ನಡೆಯುತ್ತಿರುವ ವಿದ್ಯಮಾನಗಳನ್ನು ಗಮನಿಸಿ; ಪರೆ+ಕಳಚಿ; ಪರೆ=ಕಣ್ಣಿನ ಗುಡ್ಡೆಯ ಮೇಲೆ ಬೆಳೆದು ನೋಟಕ್ಕೆ ಅಡ್ಡಿಯನ್ನುಂಟುಮಾಡುವ ಪದರ; ಕಳಚು=ತೆಗೆದು;

ಪರೆ ಕಳಚು=ಇದೊಂದು ನುಡಿಗಟ್ಟು, ಜನರ ನೆಮ್ಮದಿಯ ಜೀವನಕ್ಕೆ ಅಡ್ಡಿಯಾಗಿದ್ದ ಆಳರಸರ ಕ್ರೂರತನದ ಕಟ್ಟುಪಾಡುಗಳನ್ನು ತಿರಸ್ಕರಿಸಿ ಮತ್ತು ಸಾಮಾಜಿಕ ಕೆಡುಕುಗಳನ್ನು ನಿವಾರಿಸಿಕೊಂಡು ಎಂಬ ತಿರುಳಿನಲ್ಲಿ ಬಳಕೆಯಾಗಿದೆ;

ಹೊರಟು+ಇಹವು; ಇಹವು=ಇರುವುವು; ಹೊಸ=ನೂತನ; ಹೊಸಪಯಣ= ಇದು ಒಂದು ನುಡಿಗಟ್ಟು, ಹೊಸ ರೀತಿಯಲ್ಲಿ ಜೀವನವನ್ನು ರೂಪಿಸಿಕೊಳ್ಳುವುದು ಎಂಬ ತಿರುಳಿನಲ್ಲಿ ಬಳಕೆಯಾಗಿದೆ;

ಅದೊ ನೋಡಿ ರಷ್ಯಾ ಜಪಾನು ತುರ್ಕಿಗಳೆಲ್ಲ ಪರೆಗಳಚಿ ಹೊರಟಿಹವು ಹೊಸಪಯಣಕೆ=ರಷ್ಯ ಜಪಾನು ತುರ್ಕಿ ದೇಶಗಳೆಲ್ಲ ಇದುವರೆಗೂ ತಮ್ಮ ದೇಶದ ಜನಸಮುದಾಯವನ್ನು ಆಳುತ್ತಿದ್ದ ರಾಜರ ನಿರಂಕುಶ ಆಡಳಿತದ ಎದುರಾಗಿ ಹೋರಾಡಿ,

ಆಡಳಿತದ ಗದ್ದುಗೆಯಿಂದ ಅವರನ್ನು ಹೊರತಳ್ಳಿ ದೇಶದ ಸಂಪತ್ತಿನಲ್ಲಿ 'ಸರ್ವರಿಗೂ ಸಮಬಾಳು ಸರ್ವರಿಗೂ ಸಮಪಾಲು' ಎಂಬುದನ್ನು ಜಾರಿಗೆ ತರುವುದರತ್ತ ಮತ್ತು ಬಡತನವನ್ನು ಬುಡಸಮೇತ ಕಿತ್ತೆಸೆಯುವತ್ತ ಮುನ್ನಡೆಯುತ್ತಿದ್ದಾರೆ;

ಬೆಳಗಿ+ಇಹರು; ಬೆಳಗು=ಹೊಳೆಯುವಂತೆ ಮಾಡು; ಇಹರು=ಇರುವರು; ನೆತ್ತರ್+ಎಣ್ಣೆಯ; ನೆತ್ತರು=ರಕ್ತ;

ನೆತ್ತರೆಣ್ಣೆ=ಇದೊಂದು ರೂಪಕ. ದೀಪದಲ್ಲಿರುವ ಬತ್ತಿಯು ಉರಿದು ಬೆಳಕನ್ನು ನೀಡಲು ಎಣ್ಣೆಯು ಬೇಕು. ಅಂತೆಯೇ ರಾಜನ ಕ್ರೂರತನದ ಆಡಳಿತದ ಎದುರು ಹೋರಾಡಿ ಜನಸಮುದಾಯಕ್ಕೆ ಒಳಿತನ್ನು ಮಾಡಲೆಂದು ಹೋರಾಡುವಾಗ ಹಲವರ ಬಲಿದಾನವಾಗಿ ರಕ್ತ ಕೋಡಿಯು ಹರಿದಿದೆ. ಹೋರಾಟ ಮತ್ತು ಬಲಿದಾನದ ಮೂಲಕ ರಶ್ಯಾ ಜಪಾನು ತುರ್ಕಿ ದೇಶಗಳು ಸರ್ವಸಮಾನತೆಯ ಸಮಾಜವನ್ನು ಕಟ್ಟುವತ್ತ ಮುನ್ನಡೆಯುತ್ತಿವೆ;

ತಿಳಿವು+ಇನ್+ಉರಿ+ಅಲ್ಲಿ; ತಿಳುವು=ಅರಿವು; ಉರಿ=ಬೆಂಕಿ;

ತಿಳಿವಿನುರಿ=ಇದೊಂದು ರೂಪಕ. ಅರಿವು ಎಂಬುದು ಕೆಟ್ಟದ್ದನ್ನು ಸುಟ್ಟು ಇಲ್ಲವಾಗಿಸುವ ಬೆಂಕಿಯಾಗಿದೆ;

ಕಿಚ್ಚು+ಇಟ್ಟು; ಕಿಚ್ಚು=ಬೆಂಕಿ; ಹಳೆ=ಹಿಂದಿನದು; ಕೊಳಕು=ಕೊಳೆಯಾಗಿರುವುದು; ಬಣಗು=ಕೀಳಾದುದು; ತೃಣ=ಹುಲ್ಲು;

ಹಳೆಕೊಳಕು ಬಣಗು ತೃಣ=ಇವೆಲ್ಲವೂ ರೂಪಕಗಳಾಗಿವೆ. ಜನಸಮುದಾಯದ ಜೀವನಕ್ಕೆ ಹಾನಿಯನ್ನು ಉಂಟುಮಾಡುವ ಸಾಮಾಜಿಕ ಕೆಡುಕುಗಳಾದ ಜಾತಿಯ ತಾರತಮ್ಯ, ಮತಗಳ ಒಡಕು ಮತ್ತು ಹಗೆತನ, ಲಿಂಗ ತಾರತಮ್ಯ, ಬಡವ ಬಲ್ಲಿದರೆಂಬ ವರ್ಗ ತಾರತಮ್ಯ ಎಂಬ ತಿರುಳಿನಲ್ಲಿ ಬಳಕೆಯಾಗಿವೆ;

ಬೆಳಗಿಹರು ನೆತ್ತರೆಣ್ಣೆಯ ತಿಳಿವಿನುರಿಯಲ್ಲಿ ಕಿಚ್ಚಿಟ್ಟು ಹಳೆಕೊಳಕು ಬಣಗು ತೃಣಕೆ=ಬೆಳಗುತ್ತಿರುವ ದೀಪ ಮತ್ತು ಉರಿಯುತ್ತಿರುವ ಬೆಂಕಿಯು ರೂಪಕಗಳಾಗಿ ಬಳಕೆಗೊಂಡಿವೆ. ಕ್ರೂರತನದಿಂದ ಜನರನ್ನು ಹಿಂಸಿಸುತ್ತಿದ್ದ ಅರಸರ ಮತ್ತು ಶ್ರಮಜೀವಿಗಳಾದ ಬಡವರನ್ನು ಸುಲಿಗೆ ಮಾಡುತ್ತಿದ್ದ ಸಿರಿವಂತ ಜಮೀನ್ದಾರರ ಎದುರು ಹೋರಾಡುವಾಗ ಸಾವಿರಾರು ಮಂದಿಯ ರಕ್ತ ಹರಿದಿದೆ. ತ್ಯಾಗ ಬಲಿದಾನಗಳಿಂದ ಪಡೆದ ಸಮಾಜದಲ್ಲಿ ಮೊದಲು ಇದ್ದ ಮೂಢನಂಬಿಕೆಯ ಆಚರಣೆಗಳನ್ನು ಮತ್ತು ಜನಸಮುದಾಯದ ಒಳಿತಿಗೆ ಮಾರಕವಾಗಿದ್ದ ಸಂಪ್ರದಾಯಗಳನ್ನು ಬಿಟ್ಟು, ಎಲ್ಲರ ಒಳಿತಿಗೆ ಕಾರಣವಾಗುವ ಅರಿವಿನ ನಡೆನುಡಿಗಳಿಂದ ಈಗ ರಶ್ಯಾ ಜಪಾನು ತುರ್ಕಿ ದೇಶದ ಜನರು ಬಾಳತೊಡಗಿದ್ದಾರೆ ಎಂಬ ತಿರುಳಿನಲ್ಲಿ ಈ ರೂಪಕಗಳು ಬಳಕೆಯಾಗಿವೆ;

ರಾಷ್ಟ್ರ=ನಾಡು/ದೇಶ; ರಣ=ರಂಗ/ನೆಲೆ;

ಓ ಬನ್ನಿ ಸೋದರರೆ ರಾಷ್ಟ್ರರಣಕೆ=ಒಳಿತಿನ ಕಾರ್‍ಯಗಳನ್ನು ಮಾಡಲು ದೇಶವನ್ನೇ ಒಂದು ರಂಗವನ್ನಾಗಿ ಮಾಡಿಕೊಂಡು ದುಡಿಯೋಣ ಬನ್ನಿರಿ;

ಸಿಲುಕದೆ+ಇರಿ; ಸಿಲುಕು=ವಶವಾಗು/ಸಿಕ್ಕಿಬೀಳು/ಸೆರೆಯಾಗು; ಮತ+ಎಂಬ; ಮತ=ಜನಸಮುದಾಯಗಳು ಕಟ್ಟುನಿಟ್ಟಾದ ಆಚರಣೆ ಮತ್ತು ಸಂಪ್ರದಾಯಗಳಿಂದ ರಚಿಸಿಕೊಂಡಿರುವ ಸಾಮಾಜಿಕ ಒಕ್ಕೂಟ; ಮೋಹ+ಅಜ್ಞಾನಕ್ಕೆ; ಮೋಹ=ಅತಿಯಾದ ಒಲವು; ಅಜ್ಞಾನ=ತಿಳುವಳಿಕೆಯಿಲ್ಲದಿರುವುದು; ಮತಿ+ಇಂದ; ಮತಿ=ಯಾವುದು ಸರಿ-ಯಾವುದು ತಪ್ಪು ಎಂಬುದನ್ನು ಒರೆಹಚ್ಚಿನೋಡಿ, ತಪ್ಪನ್ನು ಮಾಡದೆ ಸರಿಯಾದ ನಡೆನುಡಿಯಿಂದ ಬಾಳಬೇಕೆಂಬ ಅರಿವು; ದುಡಿಯಿರೈ=ಕೆಲಸವನ್ನು ಮಾಡಿರಿ; ಲೋಕ+ಹಿತಕೆ; ಲೋಕ=ಜಗತ್ತು/ಜನಸಮುದಾಯ; ಹಿತ=ಒಳಿತು/ಒಳ್ಳೆಯದು;

ಸಿಲುಕದಿರಿ ಮತವೆಂಬ ಮೋಹದಜ್ಞಾನಕ್ಕೆ ಮತಿಯಿಂದ ದುಡಿಯಿರೈ ಲೋಕಹಿತಕೆ=ಯಾವುದೇ ಕಾರಣದಿಂದಲೂ ಯಾವುದೇ ಮತದ ಬಗ್ಗೆ ಮೋಹಗೊಳ್ಳದೆ, ಎಲ್ಲ ಮಾನವರ ಒಳಿತಿಗೆ ನೆರವಾಗುವಂತಹ ಕಾರ್‍ಯಗಳ ಮೂಲಕ ಲೋಕಕ್ಕೆ ಒಳಿತನ್ನು ಮಾಡಿರಿ;

ಸಹವಾಸ=ಒಡನಾಟ/ನಂಟು; ಸಾಕು+ಇನ್ನು; ಸಾಕು=ಇನ್ನು ಬೇಡ/ಇಲ್ಲಿಗೆ ನಿಲ್ಲಿಸು; ಸೇರಿರೈ=ಸೇರಿಕೊಳ್ಳಿರಿ; ಮನುಜ=ಮಾನವ;

ಮನುಜ ಮತ=ಜಾತಿ ಮತ ದೇವರುಗಳೆಲ್ಲವನ್ನೂ ನಿರಾಕರಿಸಿ ಜಗತ್ತಿನಲ್ಲಿರುವ ಎಲ್ಲ ಮಾನವರು ಒಂದೇ ಎಂಬ ತಿಳುವಳಿಕೆಯಿಂದ ರಚನೆಗೊಂಡಿರುವ ಸಾಮಾಜಿಕ ಒಕ್ಕೂಟ;

ಆ ಮತದ ಈ ಮತದ ಹಳೆಮತದ ಸಹವಾಸ ಸಾಕಿನ್ನು ಸೇರಿರೈ ಮನುಜ ಮತಕೆ=ಮಾನವನನ್ನು ಸಂಕುಚಿತ ವ್ಯಕ್ತಿಯನ್ನಾಗಿ ರೂಪಿಸಿ, ಲೋಕದಲ್ಲಿನ ಜನಸಮುದಾಯದ ಬಾಳನ್ನೇ ಸಂಕಟಕ್ಕೆ ಗುರಿಯನ್ನಾಗಿಸುವ ಎಲ್ಲ ಮತಗಳನ್ನು ನಿರಾಕರಿಸಿ, ಮನುಜಮತಕ್ಕೆ ಸೇರಿರಿ;

ವಿಶ್ವ=ಜಗತ್ತು/ಪ್ರಪಂಚ; ಪಥ=ದಾರಿ;

ಓ ಬನ್ನಿ ಸೋದರರೆ ವಿಶ್ವಪಥಕೆ=ವಿಶ್ವವು ನಮ್ಮೆಲ್ಲರಿಗೂ ಸೇರಿದ್ದು ಎಂಬ ಹಿರಿದಾದ ಮನಸ್ಸಿನಿಂದ ಜತೆಗೂಡಿ, ಜಗತ್ತಿನ ಸಿರಿಸಂಪದಗಳು ಎಲ್ಲರಿಗೂ ಸಮಾನವಾಗಿ ದೊರೆತು, ಪ್ರತಿಯೊಬ್ಬ ವ್ಯಕ್ತಿಯು ಅನ್ನ ಬಟ್ಟೆ ವಸತಿ ವಿದ್ಯೆ ಉದ್ಯೋಗ ಆರೋಗ್ಯವನ್ನು ಪಡೆದು ನೆಮ್ಮದಿಯಿಂದ ಬಾಳುವಂತಾಗಲು ನಾವೆಲ್ಲರೂ ಶ್ರಮಿಸೋಣ ಬನ್ನಿರಿ.)

❖❖

೯. ಹೊಸಬಾಳನ ಗೀತೆ

ಸರ್ವರಿಗೆ ಸಮಬಾಳು ಸರ್ವರಿಗೆ ಸಮಪಾಲು
ಎಂಬ ನವಯುಗವಾಣಿ ಘೋಷಿಸಿದೆ ಕೇಳಿ
ಯುಗಯುಗದ ದಾರಿದ್ರ್ಯಭಾರದಿಂ ಬೆನ್ ಬಾಗಿ
ಗೋಳಿಡುವ ಬಡಜನರೆ ಏಳಿರೈ ಏಳಿ
ಶ್ರೀಮಂತರಡಿಗಳಡಿ ಹುಡಿಯಲ್ಲಿ ಹೊರಳಾಡಿ
ಕುಸಿದು ಕುಗ್ಗಿದರೆಲ್ಲ ಸಂತಸವ ತಾಳಿ
ಕಂಗೆಟ್ಟ ಸೋದರರೆ ಬರುತಿಹಳು ಕಾಣಿರೈ
ದಾನವರ ಸೀಳಿ ಅದೊ ವಿಪ್ಲವದ ಕಾಳಿ

ಇಂದ್ರ ಸಿಂಹಾಸನಕೆ ಬಂದಿಹುದು ಕೊನೆಗಾಲ
ಕಳಚಿ ಬೀಳುವುದಿಂದು ನಂದನದ ಬೇಲಿ
ದೇವತೆಗಳಶ್ಲೀಲಮೋದಕ್ಕೆ ಬದಲಾಗಿ
ಗೋಚರಿಪುದಲ್ಲಿ ಮರ್ತ್ಯರ ಕೃಷಿಯ ಕೇಲಿ
ದ್ರವ್ಯಾನುಕೂಲತೆಯ ಜಾತಿಯಾ ನೀತಿಯಾ
ಪಕ್ಷಪಾತವನೆಲ್ಲ ಕೊಚ್ಚುವುದು ಬುದ್ಧಿ
ಮತ್ತೊಂದು ನಾಕವನೆ ನೆಯ್ಯುವರು ಲೋಕದಲಿ
ದೇವರನ್ಯಾಯವನು ಮಾನವರೆ ತಿದ್ದಿ

ಕೈಲಾಗದವರೆಂಬ ನಾವು ಕೀಳೆಂದೆಂಬ
ಹಣೆಬರಹವೆಂದೆಂಬ ಮೂಢತೆಯ ನೀಗಿ
ಯುಗಚಕ್ರ ಪರಿವರ್ತನೆಗೆ ಸರ್ವರೂ ಸೇರಿ
ಹೆಗಲು ಕೊಟ್ಟೊಮ್ಮನಸು ಮಾಡಿ ನೆರವಾಗಿ
ಮೋಹಿನಿಗೆ ಮರುಳಾಗಿ ಮೂರ್ಖ ದಾನವರೆಲ್ಲ
ತಮ್ಮ ಗೆಯ್ಮೆಯ ಪಾಲನನ್ಯರಿಗೆ ತೆತ್ತು
ಸತ್ತಂತೆ ಸಾಯದಿರಿ ಸಂಸ್ಕೃತಿಯ ಹೆಸರಿಂದೆ
ಶ್ರೀಮಂತರೊಡ್ಡುವಾ ಬಲೆ ನಿಮಗೆ ಮೃತ್ಯು

ಇಂದು ನೆತ್ತರು ಚೆಲ್ಲಿ ಮುಂದೆ ಬಹ ಮಕ್ಕಳಿಗೆ
ಹೊಟ್ಟೆಗನ್ನವ ಮೈಗೆ ಬಟ್ಟೆಯನು ನೀಡಿ
ಇಂದು ನೋವಾದರೂ ಇಂದು ಸಾವಾದರೂ
ಮುಂದೆ ಬಾಳಿಗೆ ಸೊಗಸು ನೆಮ್ಮದಿಯ ಮಾಡಿ

ಇಂದು ನೀವೇಳದಿರೆ ಕೆಚ್ಚೆದೆಯ ತಾಳದಿರೆ
ನಿಮ್ಮವರ ಬಾಳು ಎಂದೆಂದಿಗೂ ಹೇಡಿ
ಇಂದು ರಕ್ತದ ಬಿಂದು ಮುಂದೆ ಸೌಖ್ಯದ ಸಿಂಧು
ಎಂದು ಸಾಹಸಕೇಳಿ ಹಿಂಜರಿಯಬೇಡಿ.

ಸಾವಿರಾರು ವರುಶಗಳಿಂದ ವರ್ಣ ಮತ್ತು ಜಾತಿಯ ತಾರತಮ್ಯದಿಂದಾಗಿ ಬಡತನದ ಬೇಗೆಯಲ್ಲಿ ಬೇಯುತ್ತಿರುವ ಶ್ರಮಜೀವಿಗಳೆಲ್ಲರೂ ಜತೆಗೂಡಿ ಅರಿವು ಮತ್ತು ಎಚ್ಚರದ ಹೋರಾಟದ ಮೂಲಕ ಅನ್ನ, ಬಟ್ಟೆ, ವಸತಿ, ವಿದ್ಯೆ, ಉದ್ಯೋಗ, ಆರೋಗ್ಯವನ್ನು ಪಡೆದು ಸಮಾಜದಲ್ಲಿ ಎಲ್ಲರೊಡನೆ ಸರಿಸಮಾನವಾಗಿ ತಲೆಯೆತ್ತಿ ಬಾಳುವಂತಾಗಬೇಕೆಂಬ ಕರೆಯನ್ನು ಈ ಕವನದಲ್ಲಿ ನೀಡಲಾಗಿದೆ.

'ಅರಿವು ಮತ್ತು ಎಚ್ಚರದ ಹೋರಾಟ' ಎಂದರೆ ತಮ್ಮ ಬಡತನಕ್ಕೆ ಸಾಮಾಜಿಕ ರಚನೆ ಮತ್ತು ಸಂಪತ್ತಿನ ಹಂಚಿಕೆಯಲ್ಲಿರುವ ತಾರತಮ್ಯ, ವಂಚನೆ ಮತ್ತು ಸುಲಿಗೆಯನ್ನು ಗುರುತಿಸುವುದು. ಜಾತಿ ಮತ ದೇವರುಗಳ ಹೆಸರಿನಲ್ಲಿ ನಡೆಯುತ್ತಿರುವ ಸಂಪ್ರದಾಯದ ಆಚರಣೆಗಳಿಗೆ ಮಾನಸಿಕವಾಗಿ ದಾಸರಾಗದೆ, 'ನಮ್ಮ ಬಡತನಕ್ಕೆ ನಾವು ಹಿಂದಿನ ಜನ್ಮದಲ್ಲಿ ಮಾಡಿರುವ ಪಾಪಪುಣ್ಯಗಳು ಮತ್ತು ನಮ್ಮ ಹಣೆಬರೆಹವೇ ಕಾರಣ' ಎಂಬ ತಿಳಿಗೇಡಿತನದಿಂದ ಬಡತನದಲ್ಲಿಯೇ ನರಳದೆ, ದುಡಿಯುವ ಶ್ರಮಜೀವಿಗಳೆಲ್ಲರೂ ಒಗ್ಗಟ್ಟಿನಿಂದ ಜತೆಗೂಡಿ ಸಾಮಾಜಿಕ ಅನ್ಯಾಯಗಳ ಎದುರು ಹೋರಾಡುವುದು.

ಕ್ರಿಶ. ೧೯೩೫ ನೆಯ ಇಸವಿಯಲ್ಲಿ ಈ ಕವನ ರಚನೆಗೊಂಡಿದೆ. ಆಗ ಜಗತ್ತಿನ ಒಟ್ಟು ಜನಸಮುದಾಯದಲ್ಲಿ ಶೇ.೪೦ಕ್ಕಿಂತ ಹೆಚ್ಚು ಮಂದಿ ಕಪ್ಪು-ಬಿಳುಪು ಎಂಬ ಜನಾಂಗೀಯ ವರ್ಣ ತಾರತಮ್ಯ ಮತ್ತು ಮೇಲು ಜಾತಿ-ಕೆಳ ಜಾತಿ ಎಂಬ ಜಾತಿ ತಾರತಮ್ಯದಿಂದಾಗಿ ಹುಟ್ಟಿನಿಂದಲೇ ವಿದ್ಯೆ, ಸಂಪತ್ತು, ಆಡಳಿತದ ಗದ್ದುಗೆಯಿಂದ ವಂಚಿತರಾಗಿ ಕಡು ಬಡತನದಲ್ಲಿ ನರಳುತ್ತ ಅಪಮಾನದ ಬದುಕನ್ನು ನಡೆಸುತ್ತಿದ್ದರು. ಈ ಬಡವರೆಲ್ಲರೂ ದುಡಿಯುವ ಶ್ರಮಜೀವಿಗಳಾಗಿದ್ದರು. ವರ್ಣ ಮತ್ತು ಜಾತಿಯ ಕಟ್ಟುಪಾಡುಗಳಿಂದ ಕೂಡಿದ್ದ ಸಮಾಜದಲ್ಲಿ ಶ್ರಮಜೀವಿಗಳ ದುಡಿಮೆಯ ಉತ್ಪನ್ನದ

ದೊಡ್ಡ ಪಾಲನ್ನು ಮೇಲು ವರ್ಗಕ್ಕೆ ಸೇರಿದ ರಾಜಮಹಾರಾಜರು, ಜಮೀನ್ದಾರರು ಮತ್ತು ಮೇಲು ಜಾತಿಯವರು ತಮ್ಮದನ್ನಾಗಿಸಿಕೊಳ್ಳಲು ಅವಕಾಶವಿತ್ತು.

ಹದಿನೆಂಟು ಮತ್ತು ಹತ್ತೊಂಬತ್ತನೆಯ ಶತಮಾನದಲ್ಲಿದ್ದ ಸಾಮಾಜಿಕ ಚಿಂತಕರು ಜಗತ್ತಿನ ಎಲ್ಲೆಡೆಯಲ್ಲಿಯೂ ದುಡಿಯುವ ಶ್ರಮಜೀವಿಗಳಾದ ಬಡವರಿಗೆ ಅವರ ಹಕ್ಕುಗಳ ಬಗ್ಗೆ ಅರಿವನ್ನು ಮೂಡಿಸಿ, ಬಡತನಕ್ಕೆ ಕಾರಣವಾಗಿರುವ ವ್ಯವಸ್ಥೆಯನ್ನು ಬದಲಿಸಿ, ತಮ್ಮ ದುಡಿಮೆಯ ಉತ್ಪನ್ನವನ್ನು ದೋಚುತ್ತಿರುವ ವ್ಯಕ್ತಿಗಳನ್ನು ಸದೆಬಡಿದು ತಮ್ಮ ಜೀವನಮಟ್ಟವನ್ನು ಚೆನ್ನಾಗಿ ರೂಪಿಸಿಕೊಳ್ಳುವ ಕ್ರಾಂತಿಕಾರಕ ವಿಚಾರಗಳನ್ನು ಬಡಜನತೆಯ ಮನದಲ್ಲಿ ಬಿತ್ತಿದರು.

(ಹೊಸಬಾಳು=ಹೊಸ ರೀತಿಯಲ್ಲಿ ಜೀವನವನ್ನು ರೂಪಿಸಿಕೊಳ್ಳುವುದು; ಗೀತೆ=ಹಾಡು; ಸರ್ವರಿಗೆ=ಎಲ್ಲರಿಗೆ; ಸಮ=ಒಂದೇ ಬಗೆಯ/ಹೆಚ್ಚುಕಡಿಮೆಯಿಲ್ಲದ; ಬಾಳು=ಜೀವನ; ಪಾಲು=ಹಿಸ್ಸೆ/ಹಂಚಿಕೆ;

ಸರ್ವರಿಗೆ ಸಮಬಾಳು ಸರ್ವರಿಗೆ ಸಮಪಾಲು=ಎಲ್ಲ ಮಾನವರಿಗೂ ಜೀವನಕ್ಕೆ ಅತ್ಯಗತ್ಯವಾದ ಅನ್ನ ಬಟ್ಟೆ ವಸತಿ ವಿದ್ಯೆ ಉದ್ಯೋಗ ಆರೋಗ್ಯ ಸರಿಸಮಾನವಾಗಿ ದೊರೆತು, ಎಲ್ಲರೂ ಪರಸ್ಪರ ಒಲವು ನಲಿವಿನಿಂದ ಜತೆಗೂಡಿ ನೆಮ್ಮದಿಯ ಜೀವನವನ್ನು ನಡೆಸುವಂತಾಗುವುದು;

ಎಂಬ=ಎನ್ನುವ; ನವ=ಹೊಸ; ಯುಗ=ಕಾಲಮಾನ; ವಾಣಿ=ಮಾತು/ದನಿ;

ನವಯುಗವಾಣಿ=ಮಾನವ ಸಮುದಾಯದ ಜೀವನ ಚೆನ್ನಾಗಿ ನಡೆಯುವುದಕ್ಕೆ ಬೇಕಾದುದೆಲ್ಲವನ್ನೂ ಉತ್ಪಾದಿಸುತ್ತಿರುವ ಶ್ರಮಜೀವಿಗಳಾದ ಬಡವರು ತಮ್ಮ ಪಾಲನ್ನು ಪಡೆಯುವುದಕ್ಕಾಗಿ ಹೋರಾಟವನ್ನು ಮಾಡಬೇಕೆಂಬ ಅರಿವು ಮತ್ತು ಎಚ್ಚರದ ನುಡಿ;

ಘೋಷಿಸು=ಎತ್ತರದ ದನಿಯಲ್ಲಿ ಕೂಗಿ ಹೇಳು/ಡಂಗುರ ಹೊಡೆದು ಹೇಳು; ಕೇಳಿ=ಆಲಿಸಿರಿ;

ಯುಗ=ಕಾಲಮಾನ; ದಾರಿದ್ರ್ಯ=ಬಡತನ; ಭಾರದಿಂ=ಹೊರೆಯಿಂದ; ದಾರಿದ್ರ್ಯ ಭಾರ=ಬಡತನದಿಂದ ಉಂಟಾಗುವ ಸಂಕಟ; ಬೆನ್ ಬಾಗಿ=ಇದೊಂದು ನುಡಿಗಟ್ಟು, ಅತಿ ಹೆಚ್ಚಾದ ಸಂಕಟಕ್ಕೆ ಒಳಗಾಗಿ ನರಳುವುದು ; ಗೋಳ್+ಇಡುವ; ಗೋಳು=ವೇದನೆ/ತೊಂದರೆ/ಸಂಕಟ/ಕಳವಳ; ಬಡಜನರು=ಅನ್ನ, ಬಟ್ಟೆ, ವಸತಿ, ವಿದ್ಯೆ, ಉದ್ಯೋಗ, ಆರೋಗ್ಯವಿಲ್ಲದೆ ಹಸಿವು ಬಡತನ ಅಪಮಾನದಿಂದ ನರಳುತ್ತಿರುವವರು; ಏಳು=ಎದ್ದು ನಿಲ್ಲು; ಏಳಿರೈ=ಎದ್ದೇಳಿರಿ;

ಯುಗಯುಗದ ದಾರಿದ್ರ್ಯಭಾರದಿಂ ಬೆನ್ ಬಾಗಿ ಗೋಳಿಡುವ ಬಡಜನರೆ ಏಳಿರೈ ಏಳಿ=ಸಾವಿರಾರು ವರುಶಗಳಿಂದಲೂ ಬಡತನದ ಸಂಕಟಕ್ಕೆ ಸಿಲುಕಿ ಕಂಗಾಲಾಗಿ

ನರಳುತ್ತಿರುವ ಜನರೇ, ನೀವೆಲ್ಲರೂ ನಿಮ್ಮ ಬಡತನಕ್ಕೆ ಕಾರಣವೇನೆಂಬುದನ್ನು ಅರಿತು ಎಚ್ಚರಗೊಂಡು ಹೋರಾಟಕ್ಕೆ ಅಣಿಯಾಗಿರಿ;

ಶ್ರೀಮಂತರ+ಅಡಿಗಳ+ಅಡಿ; ಅಡಿಗಳ=ಪಾದಗಳ; ಅಡಿ=ಕೆಳಗೆ; ಹುಡಿ+ಅಲ್ಲಿ; ಹುಡಿ=ಸಣ್ಣಸಣ್ಣಕಣಗಳಾಗಿರುವ ಮಣ್ಣು/ದೂಳು; ಹೊರಳ್+ಆಡಿ; ಹೊರಳು=ಉರುಳು; ಕುಸಿ=ಕೆಳಕ್ಕೆ ಬಿದ್ದು; ಕುಗ್ಗಿದರ್+ಎಲ್ಲ; ಕುಗ್ಗು=ಬಾಗು/ಬಗ್ಗು; ಸಂತಸ=ಹಿಗ್ಗು/ಆನಂದ; ತಾಳು=ಹೊಂದು/ಪಡೆ;

ಶ್ರೀಮಂತರಡಿಗಳಡಿ ಹುಡಿಯಲ್ಲಿ ಹೊರಳಾಡಿ ಕುಸಿದು ಕುಗ್ಗಿದರೆಲ್ಲ ಸಂತಸವ ತಾಳಿ=ಸಿರಿವಂತರ ಬಳಿಯಲ್ಲಿ ಗುಲಾಮರಾಗಿ ಇಲ್ಲವೇ ಜೀತದಾಳುಗಳಾಗಿ ದುಡಿದು ಮಾನಸಿಕವಾಗಿ ಕುಗ್ಗಿಹೋಗಿರುವ ನೀವೆಲ್ಲರೂ ಈಗ ಆನಂದ ಮತ್ತು ಉತ್ಸಾಹವನ್ನು ತಳೆಯಿರಿ;

ಕಂಗೆಡು=ವಾಸ್ತವವನ್ನು ಅರಿಯಲಾಗದೆ ಸಂಕಟಪಡುತ್ತಿರುವುದು; ಸೋದರ= ಒಬ್ಬಳೇ ತಾಯಿಯ ಹೊಟ್ಟೆಯಲ್ಲಿ ಹುಟ್ಟಿರುವ ಅಣ್ಣತಮ್ಮಂದಿರು; ಬರುತ+ಇಹಳು; ಇಹಳು=ಇರುವಳು; ಕಾಣಿರೈ=ನೋಡಿರಿ; ದಾನವ=ರಕ್ಕಸ ; ಸೀಳು=ತುಂಡು ಮಾಡು; ವಿಪ್ಲವ=ಕ್ರಾಂತಿ/ದಂಗೆ; ಕಾಳಿ=ಒಬ್ಬ ದೇವತೆಯ ಹೆಸರು;

ಕಂಗೆಟ್ಟ ಸೋದರರೆ ಬರುತಿಹಳು ಕಾಣಿರೈ ದಾನವರ ಸೀಳಿ ಅದೊ ವಿಪ್ಲವದ ಕಾಳಿ=ಇದೊಂದು ರೂಪಕ. ರಕ್ಕಸರನ್ನು ತುಂಡರಿಸಲೆಂದು ಕಾಳಿಯೆಂಬ ದೇವತೆಯು ಬರುವಂತೆ ಇದುವರೆಗೂ ದುಡಿಯುವ ಶ್ರಮಜೀವಿಗಳಾದ ಬಡವರನ್ನು ಸುಲಿಗೆ ಮಾಡುತ್ತಿರುವ ರಾಜರನ್ನು ಮತ್ತು ಊಳಿಗಮಾನ್ಯ ಪದ್ಧತಿಯ ಜಮೀನ್ದಾರರನ್ನು ಇಲ್ಲವಾಗಿಸುವ ಕ್ರಾಂತಿಯು ನಡೆಯಲಿದೆ. ಕ್ರಾಂತಿ ಎಂದರೆ ಸಾಮಾಜಿಕ ಅನ್ಯಾಯವನ್ನು ತೊಡೆದುಹಾಕಿ, ನ್ಯಾಯವನ್ನು ನೆಲೆಗೊಳಿಸುವುದು;

'ಊಳಿಗಮಾನ್ಯ ಪದ್ಧತಿ' ಎಂದರೆ ಕೆಳಜಾತಿಯ ಜನಸಮುದಾಯದವರು ತಲೆತಲಾಂತರಗಳಿಂದಲೂ ರಾಜನ, ಮೇಲುಜಾತಿಯವರ ಮತ್ತು ಮೇಲು ವರ್ಗದ ಜನರ ಸೇವೆಯನ್ನು ಮಾಡುತ್ತ ಅವರ ಅಡಿಯಾಳುಗಳಾಗಿಯೇ ಬಾಳುವುದು;

ಇಂದ್ರ=ದೇವತೆಗಳ ಒಡೆಯ. ಜನಮನದ ಕಲ್ಪನೆಯಲ್ಲಿ ರೂಪುಗೊಂಡಿರುವ ದೇವಲೋಕದ ರಾಜ; ಸಿಂಹಾಸನ=ರಾಜನು ಕುಳಿತುಕೊಳ್ಳುವ ಗದ್ದುಗೆ; ಬಂದು+ ಇಹುದು; ಕೊನೆ+ಕಾಲ; ಕಳಚು=ಬೇರೆ ಮಾಡು; ಬೀಳುವುದು+ಇಂದು; ನಂದನ=ಅಮರಾವತಿ ನಗರದಲ್ಲಿರುವ ಇಂದ್ರನ ತೋಟದ ಹೆಸರು; ದೇವತೆಗಳ+ ಅಶ್ಲೀಲ+ಮೋದಕ್ಕೆ; ಅಶ್ಲೀಲ=ಕೆಟ್ಟ ರೀತಿಯ ನಡೆನುಡಿ; ಮೋದ=ಆನಂದ; ಬದಲ್+ಆಗಿ; ಬದಲು=ಪ್ರತಿಯಾಗಿ; ಗೋಚರಿಪುದು+ಇಲ್ಲಿ; ಗೋಚರ=ಕಂಡುಬರುವುದು;

ಮರ್ತ್ಯ=ಮಾನವರು ನೆಲೆಸಿರುವ ಲೋಕ; ಕೃಷಿ=ಬೇಸಾಯ/ಆರಂಬ; ಕೇಲಿ=ಆಟ/ಕ್ರೀಡೆ;

ಇಂದ್ರ ಸಿಂಹಾಸನಕೆ ಬಂದಿಹುದು ಕೊನೆಗಾಲ ಕಳಚಿ ಬೀಳುವುದಿಂದು ನಂದನದ ಬೇಲಿ ದೇವತೆಗಳಶ್ಲೀಲಮೋದಕ್ಕೆ ಬದಲಾಗಿ ಗೋಚರಿಪುದಲ್ಲಿ ಮರ್ತ್ಯರ ಕೃಷಿಯ ಕೇಲಿ=ಇದೊಂದು ರೂಪಕ. ಸಿರಿಸಂಪದಗಳಿಂದ ಕೂಡಿ ಮೆರೆಯುತ್ತಿರುವ ಇಂದ್ರನ ಆಡಳಿತ ಕೊನೆಗೊಂಡು, ಆತನ ಉದ್ಯಾನದ ಬೇಲಿಯೇ ಮುರಿದುಬೀಳುವುದು. ದೇವತೆಗಳ ಕೆಟ್ಟ ನಡೆನುಡಿಗಳಿಂದ ಕೂಡಿದ ಆಟಗಳು ನಿಲ್ಲುತ್ತವೆ. ಅಂದರೆ ಸಿರಿಸಂಪದಗಳಿಂದ ದೇವಲೋಕದ ಇಂದ್ರನಂತೆ ಮೆರೆಯುತ್ತಿರುವ ರಾಜಮಹಾರಾಜರು, ಜಮೀನ್ದಾರರು ಮತ್ತು ಸಿರಿವಂತರು ಜತೆಗೂಡಿ ಕೆಳವರ್ಗ ಮತ್ತು ಕೆಳಜಾತಿಯ ಜನರ ಮೇಲೆ ನಡೆಸುತ್ತಿರುವ ಅತ್ಯಾಚಾರ ಮತ್ತು ಅನಾಚಾರದ ವರ್ತನೆಗಳು ಕೊನೆಗೊಳ್ಳುತ್ತವೆ. ಇದಕ್ಕೆ ಬದಲಾಗಿ ಶ್ರಮಜೀವಿಗಳಾದ ಜನರಿಂದ ಲೋಕಕ್ಕೆ ಅನ್ನವನ್ನು ನೀಡುವ ಬೇಸಾಯದ ಕಸುಬು ನಡೆಯತೊಡಗುತ್ತದೆ;

ದ್ರವ್ಯ+ಅನುಕೂಲತೆಯ; ದ್ರವ್ಯ=ಹಣ/ಸಂಪತ್ತು; ಅನುಕೂಲ=ಸಿರಿವಂತಿಕೆ; ದ್ರವ್ಯಾನುಕೂಲತೆ=ಸಂಪತ್ತನ್ನು ಹೊಂದಿರುವುದು;

ಜಾತಿ=ಮೇಲು ಕೀಳೆಂಬ ಮೆಟ್ಟಲುಗಳಿಂದ ಕೂಡಿರುವ ಸಮಾಜದಲ್ಲಿ ಜಾತಿ ಎನ್ನುವುದು ಮಾನವರೇ ಕಟ್ಟಿಕೊಂಡಿರುವ ಒಂದು ಸಾಮಾಜಿಕ ಒಕ್ಕೂಟ. ಆದುದರಿಂದ ಜಾತಿ ಎಂಬುದು ಮಾನವರ ದೇಹದಲ್ಲಿ ಕಂಡುಬರುವುದಿಲ್ಲ, ಆದರೆ ಅವರ ಮನದಲ್ಲಿ ಹಾಸುಹೊಕ್ಕಾಗಿದೆ.

ಪ್ರಾಚೀನ ಕಾಲದಲ್ಲಿ ಹಿಂದೂ ಸಮಾಜದಲ್ಲಿದ್ದ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಮತ್ತು ಶೂದ್ರ ಎಂಬ ವರ್ಣಗಳು ಕಾಲಕ್ರಮೇಣ ನೂರಾರು ಬಗೆಯ ಜಾತಿಗಳಾಗಿ ಮತ್ತು ಸಾವಿರಾರು ಬಗೆಯ ಉಪಜಾತಿಗಳಾಗಿ ಕವಲುಗೊಂಡು ಇಂದಿನ ಜನಸಮುದಾಯದಲ್ಲಿ ಆಚರಣೆಯಲ್ಲಿವೆ. ಇದೇ ರೀತಿ ಜಗತ್ತಿನ ಜನಸಮುದಾಯದ ಬೇರೆ ಬೇರೆ ಮತಗಳಲ್ಲಿಯೂ ಅನೇಕ ಬಗೆಯ ಒಳಪಂಗಡಗಳಿವೆ;

ನೀತಿ=ಸಂಪ್ರದಾಯದ ನಡೆನುಡಿ; ಜಾತಿಯಾ ನೀತಿ=ಜಾತಿಯ ಕಟ್ಟುಪಾಡುಗಳು; ಪಕ್ಷಪಾತ+ಅನ್+ಎಲ್ಲ; ಪಕ್ಷಪಾತ=ತಾರತಮ್ಯ; ಅನ್=ಅನ್ನು; ಕೊಚ್ಚು=ತುಂಡುಮಾಡು/ಕತ್ತರಿಸು; ಬುದ್ಧಿ=ಅರಿವು/ತಿಳಿವು;

ದ್ರವ್ಯಾನುಕೂಲತೆಯ ಜಾತಿಯಾ ನೀತಿಯಾ ಪಕ್ಷಪಾತವನೆಲ್ಲ ಕೊಚ್ಚುವುದು ಬುದ್ಧಿ=ಹಣದ ಸಿರಿವಂತಿಕೆಯಿಂದ ಮತ್ತು ಜಾತಿಯ ಮೇಲರಿಮೆಯಿಂದ ಇದುವರೆವಿಗೂ ಬಡವರಿಗೆ ಅನ್ನ ಬಟ್ಟೆ ವಸತಿ ವಿದ್ಯೆ ಅಧಿಕಾರ ಸಂಪತ್ತು ದೊರೆಯದಂತೆ ಮಾಡಿದ್ದ

ಜಾತಿ ಸಂಪ್ರದಾಯದ ಕಟ್ಟುಪಾಡುಗಳೆಲ್ಲವೂ ಕೊಚ್ಚಿಹೋಗುತ್ತವೆ. ಏಕೆಂದರೆ ಯಾವುದು ಸರಿ-ಯಾವುದು ತಪ್ಪು ಎಂಬ ಅರಿವು ಮತ್ತು ಯಾವುದನ್ನು ಒಪ್ಪಬೇಕು-ಯಾವುದನ್ನು ಒಪ್ಪಬಾರದು ಎಂಬ ಎಚ್ಚರ, ದುಡಿಯುವ ವರ್ಗದ ಜನಸಮುದಾಯದ ಮನದಲ್ಲಿ ಮೂಡುತ್ತಿದೆ ;

ನಾಕ=ಸ್ವರ್ಗ;

ಸ್ವರ್ಗ ಮತ್ತು ನರಕ=ಮಾನವನ ಕಲ್ಪನೆಯಲ್ಲಿ ರೂಪುಗೊಂಡಿರುವ ಎರಡು ನೆಲೆಗಳು. ಸ್ವರ್ಗವು ಚೆಲುವು ಒಲವು ನಲಿವನ್ನುಂಟುಮಾಡುವ ತಾಣ ಮತ್ತು ನರಕವು ಸಂಕಟ ವೇದನೆ ನೋವನ್ನುಂಟುಮಾಡುವ ತಾಣ ಎಂಬ ಕಲ್ಪನೆಯು ಜನಮನದಲ್ಲಿದೆ;

ನೆಯ್=ಹೆಣೆ/ಜೋಡಿಸು; ಲೋಕ=ಜಗತ್ತು/ಪ್ರಪಂಚ; ದೇವರ+ಅನ್ಯಾಯವನು; ದೇವರು=ಜೀವನದಲ್ಲಿ ಬರುವ ಎಡರು ತೊಡರುಗಳನ್ನು ನಿವಾರಿಸಿ ತಮಗೆ ಒಳಿತನ್ನು ಮಾಡುವ ಶಕ್ತಿಯನ್ನು ಇಲ್ಲವೇ ವ್ಯಕ್ತಿಯನ್ನು ದೇವರೆಂದು ಮಾನವ ಸಮುದಾಯ ನಂಬಿದೆ; ತಿದ್ದು=ಸರಿಪಡಿಸು/ಬದಲಾಯಿಸು;

ದೇವರ ಅನ್ಯಾಯವನು=ದೇವರ ಹೆಸರಿನಲ್ಲಿ ಆಗುತ್ತಿರುವ ಅನ್ಯಾಯವನ್ನು ಅಂದರೆ ಈ ಜಗತ್ತಿನ ಒಳಿತು ಕೆಡುಕುಗಳಿಗೆ ದೇವರೇ ಕಾರಣ. ಮಾನವರಿಗೆ ಸಿರಿತನವನ್ನಾಗಲಿ ಇಲ್ಲವೇ ಬಡತನವನ್ನಾಗಲಿ ಕೊಡುವವನು ದೇವರು ಎಂಬ ನಂಬಿಕೆಯನ್ನು ಜನಮನದಲ್ಲಿ ಬಿತ್ತಲಾಗಿದೆ;

ಮತ್ತೊಂದು ನಾಕವನೆ ನೆಯ್ಯುವರು ಲೋಕದಲಿ ದೇವರನ್ಯಾಯವನು ಮಾನವರೆ ತಿದ್ದಿ=ಅರಿವನ್ನು ಪಡೆದ ವ್ಯಕ್ತಿಗಳು ದೇವರ ಹೆಸರಿನಲ್ಲಿ ನಡೆಯುತ್ತಿರುವ ಎಲ್ಲ ಬಗೆಯ ಅನ್ಯಾಯಗಳನ್ನು ತಡೆಗಟ್ಟಿ, ಮಾನವ ಜೀವನದ ಒಳಿತು ಕೆಡುಕುಗಳಿಗೆ ನಿಸರ್ಗ ಮತ್ತು ಮಾನವರ ನಡೆನುಡಿಗಳೇ ಕಾರಣವೆಂಬ ವಿವೇಕವನ್ನು ಜನಮನದಲ್ಲಿ ಮೂಡಿಸಿ, ಜನರ ಬದುಕು ಒಲವು ನಲಿವು ನೆಮ್ಮದಿಯಿಂದ ಕೂಡಿದ ನೆಲೆಯನ್ನಾಗಿ ಮಾಡುತ್ತಾರೆ. ಆಗ ಈ ಲೋಕವೇ ಸ್ವರ್ಗದಂತಾಗುತ್ತದೆ;

ಕೈಲಿ+ಆಗದವರು+ಎಂಬ; ಕೈಲಾಗದವರು=ಏನನ್ನೂ ಮಾಡಲಾಗದವರು; ಎಂಬ=ಎನ್ನುವ; ಕೀಳ್+ಎಂದು+ಎಂಬ; ಕೀಳು=ಕೆಳಮಟ್ಟ; ಹಣೆಬರಹ+ಎಂದು +ಎಂಬ; ಹಣೆಬರಹ=ಲೋಕದಲ್ಲಿ ಹುಟ್ಟುವ ಮಾನವ ಜೀವಿಗಳ ಹಣೆಯ ಮೇಲೆ ದೇವರು ಬರೆದಿರುವ ಬರಹ; ಮೂಢತೆ=ತಿಳಿಗೇಡಿತನ; ನೀಗು=ಬಿಡು/ತೊರೆ/ತ್ಯಜಿಸು; ಚಕ್ರ=ಗಾಲಿ; ಯುಗಚಕ್ರ=ಕಾಲದ ಉರುಳುವಿಕೆ; ಪರಿವರ್ತನೆ=ಬದಲಾವಣೆ/ಮಾರ್ಪಾಡು;

ಯುಗ ಪರಿವರ್ತನೆ=ಮಾನವ ಸಮುದಾಯದಲ್ಲಿ ಒಂದು ಗುಂಪು ಮತ್ತೊಂದು ಗುಂಪನ್ನು ವರ್ಣ, ಜಾತಿ, ಮತ, ದೇವರ ಹೆಸರಿನಲ್ಲಿ ವಂಚಿಸುತ್ತ, ಕ್ರೂರತನದ

ನಡೆನುಡಿಗಳಿಂದ ಹಲ್ಲೆ ನಡೆಸುತ್ತಿರುವ ಕಾಲ ಕೊನೆಗೊಂಡು, ಎಲ್ಲ ಮಾನವರು ಜತೆಗೂಡಿ ಒಲವು ನಲಿವು ನೆಮ್ಮದಿಯಿಂದ ಬಾಳುವ ಕಾಲ ಬರುವುದು;

ಹೆಗಲು=ಭುಜ; ಕೊಟ್ಟು+ಒಮ್ಮನಸು; ಹೆಗಲು ಕೊಡು=ಇದೊಂದು ನುಡಿಗಟ್ಟು, ಜವಾಬ್ದಾರಿಯನ್ನು ಹೊತ್ತುಕೊಂಡು/ಕೆಲಸವನ್ನು ಮಾಡುವವರಿಗೆ ನೆರವನ್ನು ನೀಡುವುದು; ಒಂದು+ಮನಸ್ಸು=ಒಮ್ಮನಸು; ಒಮ್ಮನಸು=ಒಂದೇ ಮನಸ್ಸು/ಹಿಡಿದ ಕೆಲಸವನ್ನು ಮಾಡಿಮುಗಿಸಬೇಕೆಂಬ ಗುರಿ; ನೆರವು+ಆಗಿ; ನೆರವು=ಸಹಾಯ/ಬೆಂಬಲ/ಆಸರೆ;

ಮೋಹಿನಿ=ಚೆಲುವೆ/ಸುಂದರಿ; ಮರುಳ್+ಆಗಿ; ಮರುಳು=ಮೋಹ; ಮೂರ್ಖ=ತಿಳಿಗೇಡಿ/ದಡ್ಡ; ದಾನವ+ಅರ್+ಎಲ್ಲ; ದಾನವ=ರಕ್ಕಸ; ಗೆಯ್ಮೆ=ಕೆಲಸ/ದುಡಿಮೆ; ಪಾಲ್+ಅನ್+ಅನ್ಯರಿಗೆ; ಪಾಲು=ತನಗೆ ಸೇರಿದ ವಸ್ತು; ಅನ್=ಅನ್ನು; ಅನ್ಯರಿಗೆ=ಬೇರೆಯವರಿಗೆ; ತೆತ್ತು=ನೀಡಿ/ಕೊಟ್ಟು; ಸತ್ತ+ಅಂತೆ;

ಮೋಹಿನಿಗೆ ಮರುಳಾಗಿ ಮೂರ್ಖ ದಾನವರೆಲ್ಲ ತಮ್ಮ ಗೆಯ್ಮೆಯ ಪಾಲನನ್ಯರಿಗೆ ತೆತ್ತು ಸತ್ತಂತೆ ಸಾಯದಿರಿ=ಒಮ್ಮೆ ದೇವತೆಗಳು ಮತ್ತು ದಾನವರು ಹಾಲಿನ ಕಡಲನ್ನು ಕಡೆದಾಗ ಅಮೃತ ದೊರಕುತ್ತದೆ. ಇದನ್ನು ಹಂಚಿಕೊಳ್ಳುವಾಗ ದೇವತೆಗಳ ಮತ್ತು ದಾನವರ ನಡುವೆ ಜಗಳವುಂಟಾಗುತ್ತದೆ, ಆಗ ಮೋಹಿನಿಯ ರೂಪದಲ್ಲಿ ವಿಷ್ಣು ಬಂದು ದಾನವರನ್ನು ತನ್ನ ಅಂದಚೆಂದದ ಒಯ್ಯಾರದ ನರ್ತನದ ಮೂಲಕ ಮರುಳು ಮಾಡಿ, ದಾನವರಿಗೆ ಅಮೃತವು ಕಿಂಚಿತ್ತು ದಕ್ಕದಂತೆ ವಂಚಿಸುತ್ತಾನೆ ಎಂಬುದು ಪುರಾಣದ ಪ್ರಸಂಗ.

ಈ ಪ್ರಸಂಗವನ್ನು ಒಂದು ರೂಪಕವನ್ನಾಗಿ ಮಾಡಿಕೊಂಡು ಮೋಹಿನಿಯ ರೂಪಕ್ಕೆ ಮರುಳಾಗಿ ತಮ್ಮ ಪರಿಶ್ರಮದ ಪಾಲಿನ ಅಮೃತವನ್ನು ಪಡೆಯಲಾಗದೆ ಮೋಸಹೋದ ದಾನವರಂತೆ ದುಡಿಯುವ ಶ್ರಮಜೀವಿಗಳಾದ ಬಡವರು ಮೇಲು ವರ್ಗದ ಸಿರಿವಂತರು ಮತ್ತು ಮೇಲುಜಾತಿಯ ಜನರ ವಂಚನೆಗೆ ಬಲಿಯಾಗಬಾರದು;

ಸಂಸ್ಕೃತಿ=ಮಾನವ ಸಮುದಾಯದ ನಡೆನುಡಿಗಳು; ಹೆಸರ್+ಇಂದೆ; ಶ್ರೀಮಂತರ್+ಒಡ್ಡು+ಆ; ಒಡ್ಡು=ಮುಂದೆ ಹಾಕುವ; ಬಲೆ=ಪ್ರಾಣಿ ಹಕ್ಕಿಗಳನ್ನು ಹಿಡಿಯುವುದಕ್ಕಾಗಿ ಹಾಕುವ ಉಪಕರಣ; ಮೃತ್ಯು=ಸಾವು/ಮರಣ;

ಸಂಸ್ಕೃತಿಯ ಹೆಸರಿಂದೆ ಶ್ರೀಮಂತರೊಡ್ಡುವಾ ಬಲೆ ನಿಮಗೆ ಮೃತ್ಯು=ಜಾತಿ ಮತ ದೇವರ ಹೆಸರಿನಲ್ಲಿ ನೂರಾರು ಬಗೆಯ ಸಂಪ್ರದಾಯಗಳಲ್ಲಿ ಮತ್ತು ಆಚರಣೆಗಳಲ್ಲಿ ಬಡವರು ತೊಡಗುವಂತೆ ಮಾಡಿ, ಅವರ ಗಮನವನ್ನು ತಮ್ಮ ಬಡತನಕ್ಕೆ ಕಾರಣವಾದ ಸಂಗತಿಗಳತ್ತ ಹರಿಯದಂತೆ ಸಿರಿವಂತರು ಮಾಡಿದ್ದಾರೆ. ಸಾವಿರಾರು ವರುಶಗಳಿಂದಲೂ ಪುರಾಣ, ಸಂಗೀತ, ಸಾಹಿತ್ಯ, ನಾಟಕ ಮತ್ತು ಶಿಲ್ಪ ಕಲೆಗಳ ಮೂಲಕ ದುಡಿಯುವ

ಶ್ರಮಜೀವಿಗಳಾದ ಬಡವರ ಮನದಲ್ಲಿ ಅನೇಕ ಬಗೆಯ ಮೂಢ ನಂಬಿಕೆಗಳನ್ನು ಬಿತ್ತಿದ್ದಾರೆ.

ದೇವರಿಗೆ ತಲೆಗೂದಲನ್ನು ಮುಡಿಯನ್ನಾಗಿ ನೀಡುವ, ಹರಕೆಯನ್ನು ಒಪ್ಪಿಸುವ, ಯಾಗದ ಅಗ್ನಿಕುಂಡದಲ್ಲಿ ವಸ್ತುಗಳನ್ನು ಹಾಕುವ, ಪ್ರಾಣಿಗಳನ್ನು ಬಲಿಕೊಡುವ ಆಚರಣೆಗಳ ಮೂಲಕ ಜನರ ಮನದಲ್ಲಿ ದೇವರೇ ಸರ್ವಶಕ್ತನೆಂಬ ನಂಬಿಕೆಯನ್ನು ಬಿತ್ತಲಾಗಿದೆ. "ಹಾಲಲ್ಲಾದರೂ ಹಾಕು ನೀರಲ್ಲಾದರೂ ಹಾಕು; ಪಾಲಿಗೆ ಬಂದದ್ದು ಪಂಚಾಮೃತ; ಮಾನವ ಕೊಟ್ಟಿದ್ದು ಮನೆ ತನಕ ದೇವರು ಕೊಟ್ಟಿದ್ದು ಕೊನೆ ತನಕ" ಎಂಬ ನೂರಾರು ಬಗೆಯ ನಾಣ್ಣುಡಿಗಳು ಬಡವರನ್ನು ಮಾನಸಿಕವಾಗಿ ಗುಲಾಮರನ್ನಾಗಿಸಿವೆ.

ಇದರಿಂದಾಗಿ ಸಾಮಾಜಿಕ ರಚನೆ ಮತ್ತು ಸಂಪತ್ತಿನ ಹಂಚಿಕೆಯಲ್ಲಿರುವ ವಂಚನೆಯನ್ನು ಬಡವರು ಗುರುತಿಸಲಾಗದೆ, ತಮ್ಮ ಬಡತನಕ್ಕೆ ದೇವರನ್ನೇ ಹೊಣೆಗಾರನನ್ನಾಗಿ ಮಾಡಿ ಸುಮ್ಮನಾಗುತ್ತಾರೆ. ಶ್ರೀಮಂತರು ಜಾತಿ, ಮತ ಮತ್ತು ದೇವರ ಹೆಸರಿನಲ್ಲಿ ಮಾಡುತ್ತಿರುವ ಆಚರಣೆಗಳಿಗೆ ಬಡವರು ಮರುಳಾದಾಗ ಅದೇ ಬಡವರ ಪಾಲಿಗೆ ಸಾವಾಗುತ್ತದೆ;

ನೆತ್ತರು=ರಕ್ತ; ಚೆಲ್ಲು=ಬೀಳಿಸು/ಕೆಡಹು; ಬಹ=ಬರುವ; ಹೊಟ್ಟೆಗೆ+ಅನ್ನವ; ನೋವು+ಆದರೂ; ನೋವು=ಸಂಕಟ; ಸಾವು+ಆದರೂ; ಬಾಳು=ಜೀವನ; ಸೊಗಸು=ಹಿಗ್ಗು/ಚೆಲುವು/ಹಿತ; ನೆಮ್ಮದಿ=ಯಾವುದೇ ಬಗೆಯ ಸಂಕಟಗಳು ಇಲ್ಲದಿರುವುದು;

ತಲೆತಲಾಂತರಗಳಿಂದಲೂ ನೀವು ಪಡುತ್ತಿರುವ ಬಡತನದಿಂದ ಉಂಟಾಗುವ ಅಪಮಾನ ಮತ್ತು ಸಂಕಟಗಳಿಂದ ನಿಮ್ಮ ಮಕ್ಕಳನ್ನು ಪಾರುಮಾಡುವುದಕ್ಕಾಗಿ ದಿಟ್ಟತನದಿಂದ ಹೋರಾಡಿ, ಸಾಮಾಜಿಕ ಅನ್ಯಾಯವನ್ನು ತೊಲಗಿಸಲು ನಿಮ್ಮ ನೆತ್ತರನ್ನು ಹರಿಸಿ, ಮುಂದೆ ಬರಲಿರುವ ನಿಮ್ಮ ಮಕ್ಕಳ ಪಾಲಿಗೆ ಬಡತನ ಇಲ್ಲದಂತೆ ಮಾಡಿರಿ;

ನೀವ್+ಏಳದಿರೆ; ಏಳದಿರೆ=ಎಚ್ಚರಗೊಳ್ಳದಿದ್ದರೆ; ಕೆಚ್ಚೆದೆ=ದಿಟ್ಟತನ/ಎದೆಗಾರಿಕೆ; ತಾಳ್=ಹೊಂದು/ಪಡೆ; ಎಂದು+ಎಂದಿಗೂ; ಎಂದೆಂದಿಗೂ=ಯಾವ ಕಾಲಕ್ಕೂ; ಹೇಡಿ=ಹೆದರುವವನು ;

ಇಂದು ನೀವು ಅರಿವನ್ನು ಪಡೆದು ಕೆಚ್ಚೆದೆಯಿಂದ ವರ್ಣ ಮತ್ತು ಜಾತಿ ತಾರತಮ್ಯದ ವ್ಯವಸ್ಥೆಯ ಎದುರಾಗಿ ಹೋರಾಡದೆ, ಸಾವು ನೋವುಗಳಿಗೆ ಅಂಜಿ ಸುಮ್ಮನಾದರೆ ನಿಮ್ಮ ಮುಂದಿನ ತಲೆಮಾರುಗಳೆಲ್ಲವೂ ಇದೇ ಬಗೆಯ ಹಸಿವು ಬಡತನ ಅಪಮಾನದಲ್ಲಿಯೇ ನರಳುವರು;

ಇಂದು=ಈಗ; ಬಿಂದು=ಹನಿ/ತೊಟ್ಟು; ಮುಂದೆ=ನಂತರದಲ್ಲಿ; ಸೌಖ್ಯ=ನೆಮ್ಮದಿ/ಆನಂದ; ಸಿಂಧು=ಸಮುದ್ರ/ಕಡಲು; ಸಾಹಸಕೆ+ಏಳಿ; ಸಾಹಸ=ದಿಟ್ಟತನದಿಂದ ಮುನ್ನುಗ್ಗಿ ಕೆಲಸವನ್ನು ಮಾಡುವುದು/ಗುರಿಯನ್ನು ಮುಟ್ಟುವುದು; ಹಿಂಜರಿ=ಹಿಂದಕ್ಕೆ ಸರಿಯುವುದು/ಹಿಮ್ಮೆಟ್ಟುವುದು ;

ಇಂದು ನೀವು ಮಾಡುವ ಹೋರಾಟದಲ್ಲಿ ನಿಮ್ಮ ಮಯ್ಯಿಂದ ಬೀಳುವ ಒಂದೊಂದು ತೊಟ್ಟು ರಕ್ತವೂ ಮುಂದೆ ನಿಮ್ಮ ಮಕ್ಕಳ ಪಾಲಿಗೆ ಆನಂದದ ಕಡಲಾಗುತ್ತದೆ. ಅಂದರೆ ಸರ್ವಸಮಾನತೆಯ ಹೊಸ ಸಮಾಜವನ್ನು ರೂಪಿಸುತ್ತದೆ. ಆದ್ದರಿಂದ ಈಗ ನಿಮಗೆ ಆಗುತ್ತಿರುವ ಅನ್ಯಾಯದ ಎದುರು ಹೋರಾಡಿ, ಎಲ್ಲ ಬಗೆಯ ಸಾಮಾಜಿಕ ಕೆಡುಕುಗಳನ್ನು ದಿಟ್ಟತನದಿಂದ ತೊಡೆದುಹಾಕಿ, ನಿಮ್ಮ ಮಕ್ಕಳು ಹೊಸಬಾಳನ್ನು ಕಟ್ಟಿಕೊಳ್ಳಲು ಅವಕಾಶವನ್ನು ಮಾಡಿಕೊಡಿ. ಯಾವುದೇ ಕಾರಣದಿಂದಲೂ ಸಾವು ನೋವಿಗೆ ಅಂಜಿಕೊಂಡು ನೀವು ಹಿಂದಕ್ಕೆ ಸರಿಯಬೇಡಿ. ಸಾಹಸದಿಂದ ಮುನ್ನುಗ್ಗಿ ಬಡತನವನ್ನು ಬುಡಮಟ್ಟ ಕಿತ್ತು ಒಗೆಯಿರಿ ಎಂದು ದುಡಿಯುವ ವರ್ಗದ ಶ್ರಮಜೀವಿಗಳಾದ ಬಡಜನತೆಗೆ ಕರೆಯನ್ನು ನೀಡಲಾಗಿದೆ.)

❖❖

೧೦. ನನ್ನ ಬಯಕೆ

ಸದ್ದಿರದ ಪಸುರುಡೆಯ ಮಲೆನಾಡ ಬನಗಳಲಿ
ಮೊರೆವ ತೊರೆಯೆಡೆಯಲ್ಲಿ ಗುಡಿಸಲೊಂದಿರಲಿ

ಅಲ್ಲಿ ಗಿಳಿ ಗೊರವಂಕ ಕೋಗಿಲೆಗಳಿಂಚರವು
ಕಲೆಯುತಲೆಯಲೆಯಾಗಿ ತೇಲಿ ಬರುತಿರಲಿ

ಅಲ್ಲಿ ಬಳಿ ಪಸಲೆಯಲಿ ದನಗಳಂಬಾ ಎಂಬ
ದನಿಯು ದನ ಕಾಯುವನ ಕೊಳಲೊಡನೆ ಬರಲಿ

ಅಲ್ಲಿ ಸಿರಿಗನ್ನಡದ ಕಬ್ಬಗಳ ಹಬ್ಬಗಳು
ದಿನ ದಿನವು ಸವಿಯೂಟವಿಕ್ಕುತಿರಲೆನಗೆ

ಬಾಂದಳದಿ ಹಾರಿದರು ಬುವಿಯಲ್ಲಿ ಜಾರುತಿಹ
ರಸಿಕನಾಗಿಹನೊಬ್ಬ ಗೆಳೆಯನಿರಲೆನಗೆ

ಬೈಗಾಗ ನಮ್ಮೊಡನೆ ಗಳಪಿಯಲೆದಡ್ಡಾಡೆ
ಗೋಪಾಲನಾಗಿರುವ ತಿಮ್ಮನೆನಗಿರಲಿ

ಮೇಲೆ ಬಾಳನು ಬಿಟ್ಟು ನಾನಳಿದು ಮರೆಯಾಗೆ
ನನ್ನಾಸೆ ಏನೆಂದು ಎಲ್ಲರರಿತಿರಲಿ

ಸಗ್ಗವಿವನೊಳಗೊಂಡಿರಲು ಸಗ್ಗವೆನಗಿರಲಿ
ನರಕವಿವನೊಳಗೊಂಡಿರಲು ನರಕವಿರಲಿ.

ತಮ್ಮ ಮಯ್ ಮನಕ್ಕೆ ಅರಿವು, ಒಲವು, ಆನಂದವನ್ನು ನೀಡುವಂತಹ ರೀತಿಯಲ್ಲಿ ನಿಸರ್ಗದ ಚೆಲುವು ಮತ್ತು ಒಳ್ಳೆಯ ಸಾಮಾಜಿಕ ಪರಿಸರವಿರಬೇಕು ಎಂಬ ಬಯಕೆಯನ್ನು ಕವಿಯು ಈ ಕವನದಲ್ಲಿ ಹೇಳಿಕೊಂಡಿದ್ದಾರೆ.

(ಬಯಕೆ=ಆಸೆ/ಹಂಬಲ; ಸದ್ದು+ಇರದ; ಸದ್ದು=ಗದ್ದಲ; ಇರದ=ಇಲ್ಲದ; ಪಸುರ್+ಉಡೆಯ; ಪಸುರು=ಹಸುರು ಬಣ್ಣ;

ಉಡೆ=ಬಟ್ಟೆ; ಪಸುರುಡೆ=ಹಸುರು ಬಣ್ಣದ ಉಡುಗೆ; ಮಲೆನಾಡು= ಬೆಟ್ಟಗುಡ್ಡಗಳಿಂದ ಕೂಡಿದ ಪ್ರದೇಶ; ಬನ=ಕಾಡು;

ಪಸುರುಡೆಯ ಮಲೆನಾಡ ಬನ=ಹಚ್ಚಹಸುರಿನ ಪಯಿರು ಪಚ್ಚೆ ಗಿಡಮರಗಳಿಂದ ಕೂಡಿರುವ ಕಾಡು;

ಮೊರೆ=ನೀರು ಹರಿಯುತ್ತಿರುವಾಗ ಅಲೆಗಳ ಉರುಳುವಿಕೆಯಿಂದ ಉಂಟಾದ ಜುಳುಜುಳು ನಾದ;

ತೊರೆ+ಎಡೆ+ಅಲ್ಲಿ; ತೊರೆ=ಹೊಳೆ/ನದಿ; ಎಡೆ=ಜಾಗ/ಹತ್ತಿರ; ಗುಡಿಸಲ್+ ಒಂದು+ಇರಲಿ; ಗುಡಿಸಲು=ಮರಗಿಡಗಳ ಸೊಪ್ಪುಸದೆಯ ಹೊದಿಕೆಯಿಂದ ಮಾಡಿರುವ ಚಿಕ್ಕ ಮನೆ;

ಗಿಳಿ=ಒಂದು ಬಗೆಯ ಹಕ್ಕಿ; ಗೊರವಂಕ=ಒಂದು ಬಗೆಯ ಹಕ್ಕಿ ; ಕೋಗಿಲೆ+ ಗಳ+ಇಂಚರವು; ಕೋಗಿಲೆ=ಒಂದು ಬಗೆಯ ಹಕ್ಕಿ; ಇಂಚರ=ಇಂಪಾದ ದನಿ; ಕಲೆಯುತ+ಅಲೆ+ಅಲೆ+ಆಗಿ; ಕಲೆ=ಜತೆಗೂಡು; ಅಲೆ=ತರಂಗ; ತೇಲು=ನೀರಿನಲ್ಲಿ ತೇಲುವುದು ಇಲ್ಲವೇ ಗಾಳಿಯಲ್ಲಿ ಹಾರಿ ಬರುವುದು; ಬರುತ+ಇರಲಿ;

ಇಂಚರವು ಕಲೆಯುತಲೆಯಲೆಯಾಗಿ ತೇಲಿ ಬರುತಿರಲಿ=ಹಕ್ಕಿಗಳ ಇಂಪಾದ ಗಾನ ಜತೆಗೂಡಿ ವಾಯುಮಂಡಲದಲ್ಲಿ ತೇಲಿ ಬರುತಿರಲಿ;

ಪಸಲೆ=ಹುಲ್ಲುಗಾವಲು; ದನ+ಗಳ್+ಅಂಬಾ; ಅಂಬಾ ಎಂಬ ದನಿ=ಹಸುಗಳ ಕೊರಳೊಳಗಿಂದ ಹೊರಹೊಮ್ಮುವ ದನಿ; ದನ ಕಾಯುವನು=ಗೊಲ್ಲ; ಕೊಳಲ್+ಒಡನೆ; ಕೊಳಲು=ಬಿದಿರಿನ ಕೊಳವೆಯಲ್ಲಿ ಗುಂಡನೆಯ ನಾಲ್ಕಾರು ತೂತುಗಳನ್ನು ತಯಾರಿಸಿರುವ ಒಂದು ಬಗೆಯ ವಾದ್ಯ. ಕೊಳಲಿನ ಒಂದು ಎಡೆಯಿಂದ ಊದಿದ ಉಸಿರು ನಾಲ್ಕಾರು ಎಡೆಗಳಲ್ಲಿ ಇಂಪಾದ ದನಿಯಾಗಿ ಹೊರಹೊಮ್ಮುತ್ತದೆ;

ಸಿರಿ+ಕನ್ನಡ; ಸಿರಿ=ಸಂಪತ್ತು/ಚೆಲುವು;

ಸಿರಿಗನ್ನಡ=ಕನ್ನಡಿಗರ ಪಾಲಿಗೆ ಲೋಕದ ಚೆಲುವನ್ನು ಕಾಣುವಂತೆ ಮತ್ತು ಅರಿವಿನ ಸಂಪತ್ತನ್ನು ಪಡೆಯುವಂತೆ ಮಾಡಿರುವ ಕನ್ನಡ ನುಡಿ;

ಕಬ್ಬ=ಕಾವ್ಯ ; ಹಬ್ಬ=ನಿಸರ್ಗ ಮತ್ತು ದೇವರ ಹೆಸರಿನಲ್ಲಿ ಒಲವು ನಲಿವಿನಿಂದ ಮಾಡುವ ಉತ್ಸವ/ಆಚರಣೆ; ಸವಿ+ಊಟ+ಇಕ್ಕುತ+ಇರಲಿ+ಎನಗೆ; ಸವಿ=ಸಿಹಿ/ ಹಿತವಾದುದು/ಪ್ರಿಯವಾದುದು;

ಸವಿಯೂಟ=ಇದೊಂದು ನುಡಿಗಟ್ಟಾಗಿ ಬಳಕೆಯಾಗಿದೆ. ಮಯ್ ಮನಕ್ಕೆ ಮುದವನ್ನು, ಅರಿವನ್ನು ಮತ್ತು ಒಳಿತನ್ನು ಉಂಟುಮಾಡುವುದು; ಇಕ್ಕುತಿರಲಿ=ನೀಡುತ್ತಿರಲಿ; ಎನಗೆ=ನನಗೆ;

ಸಿರಿಗನ್ನಡದ ಕಬ್ಬಗಳ ಹಬ್ಬಗಳು ದಿನ ದಿನವು ಸವಿಯೂಟವಿಕ್ಕುತಿರಲೆನಗೆ=ಈ ನುಡಿಗಳು ರೂಪಕವಾಗಿ ಬಳಕೆಯಾಗಿವೆ. ಪ್ರತಿನಿತ್ಯವೂ ಸಿರಿಗನ್ನಡ ಕಾವ್ಯಗಳನ್ನು

ಓದುತ್ತ ಕೇಳುತ್ತ, ಲೋಕದ ಚೆಲುವು ಒಲವು ಮತ್ತು ಎಲ್ಲ ಕಾಲಕ್ಕೂ ಸಲ್ಲುವ ಸತ್ಯದ ಸಂಗತಿಗಳನ್ನು ತಿಳಿದು ನನ್ನ ಮನಸ್ಸು ಮುದಗೊಂಡು ಅರಳುವಂತಾಗಲಿ;

ಬಾಂದಳ=ಆಕಾಶ/ಗಗನ;

ಬಾಂದಳದಿ ಹಾರಿದರೂ=ಮನದಲ್ಲಿ ಮೂಡುವ ಬಗೆಬಗೆಯ ಕಲ್ಪನೆಗಳ ಲೋಕದಲ್ಲಿ ವಿಹರಿಸುತ್ತಿದ್ದರೂ; ಬುವಿ=ಭೂಮಿ; ಜಾರುತ+ಇಹ; ಜಾರು=ಮೇಲಿನಿಂದ ಕೆಳಕ್ಕೆ ಸರಿ; ಇಹ=ಇರುವ;

ಬುವಿಯಲ್ಲಿ ಜಾರುತಿಹ=ಈ ಭೂಮಿಯ ಮೇಲಣ ಜೀವನದ ಏಳುಬೀಳುಗಳಿಗೆ ತನ್ನನ್ನು ಒಡ್ಡಿಕೊಂಡಿರುವ ಅಂದರೆ ಬದುಕನ್ನು ಪ್ರೀತಿಸುವ;

ರಸಿಕನ್+ಆಗಿ+ಇಹನ್+ಒಬ್ಬ; ರಸಿಕ=ಲೋಕದಲ್ಲಿನ ಚೆಲುವು ಒಲವಿನಲ್ಲಿ ಅಪಾರವಾದ ಆಸಕ್ತಿಯುಳ್ಳವನು; ಇಹನ್=ಇರುವವನು; ಗೆಳೆಯನ್+ಇರಲಿ+ಎನಗೆ; ಗೆಳೆಯ=ಮಿತ್ರ/ಸ್ನೇಹಿತ;

ರಸಿಕನಾಗಿಹನೊಬ್ಬ ಗೆಳೆಯನಿರಲೆನಗೆ=ಲೋಕದ ಚೆಲುವೆಲ್ಲವನ್ನೂ ಆನಂದದಿಂದ ಸವಿಯುತ್ತ, ಸದಾಕಾಲ ನನ್ನ ಮನಸ್ಸಿನ ಒಳಮಿಡಿತಗಳಿಗೆ ಸಮಾನವಾಗಿ ತುಡಿಯುವಂತಹ ಒಬ್ಬ ಗೆಳೆಯನು ಇರಲಿ;

ಬೈಗು+ಆಗೆ; ಬೈಗು=ಸಂಜೆ; ನಮ್ಮ+ಒಡನೆ; ಗಳಪಿ+ಅಲೆದು+ಅಡ್ಡಾಡೆ; ಗಳಪು=ಮಾತನಾಡು; ಅಲೆದು=ತಿರುಗಿ; ಅಡ್ಡಾಡು=ಅತ್ತಿತ್ತ ಓಡಾಡು; ಗೋಪಾಲನ್+ ಆಗಿರುವ; ಗೋಪಾಲ=ಗೋವುಗಳನ್ನು ಕಾಯುವವನು/ಗೊಲ್ಲ;

ತಿಮ್ಮನ್+ಎನಗೆ+ಇರಲಿ;

ತಿಮ್ಮ=ಕವಿಯ ಓರಿಗೆಯವನು. ನಂಟಿನಲ್ಲಿ ಕವಿಗೆ ತಮ್ಮನಾಗಬೇಕು. ಕವಿಗೆ ಚಿಕ್ಕಂದಿನಲ್ಲಿ ಜತೆಗಾರನಾಗಿದ್ದವನು;

ಮೇಲೆ=ಕಾಲ ಉರುಳಿದ ನಂತರ/ವಯಸ್ಸಾದ ನಂತರ; ಬಾಳ್=ಜೀವನ; ನಾನ್+ಅಳಿದು; ಅಳಿ=ಸಾವನ್ನಪ್ಪಿ; ಮರೆ+ಆಗೆ; ನನ್ನ+ಆಸೆ; ಏನ್+ಎಂದು; ಎಲ್ಲರು+ಅರಿತು+ಇರಲಿ; ಅರಿತು=ತಿಳಿದುಕೊಂಡು; ಸಗ್ಗ+ಇವನ್+ಒಳಗೊಂಡು+ ಇರಲು;

ಸಗ್ಗ+ಎನಗೆ+ಇರಲಿ; ನರಕ+ಇವನ್+ಒಳಗೊಂಡು+ಇರಲು; ನರಕ+ಇರಲಿ;

ಸಗ್ಗ/ನರಕ=ಸ್ವರ್ಗ ಮತ್ತು ನರಕಗಳು ಮಾನವನ ಮನದ ಕಲ್ಪನೆಯಲ್ಲಿ ಮೂಡಿರುವ ಎರಡು ನೆಲೆಗಳು. ಸ್ವರ್ಗದಲ್ಲಿ ಚೆಲುವು ಒಲವು ನಲಿವು ನೆಲೆಗೊಂಡಿದೆ ಮತ್ತು ನರಕದಲ್ಲಿ ನೋವು ಸಂಕಟ ನೆಲೆಗೊಂಡಿದೆ. ಒಳ್ಳೆಯದನ್ನು ಮಾಡಿ ಸತ್ತವರು ಸ್ವರ್ಗಕ್ಕೂ ಮತ್ತು

ಕೆಟ್ಟದ್ದನ್ನು ಮಾಡಿ ಸತ್ತವರು ನರಕಕ್ಕೂ ಹೋಗುತ್ತಾರೆ ಎಂಬುದು ಜನಮನದ ಕಲ್ಪನೆಯಲ್ಲಿದೆ;

ಇವನ್=ಇವನ್ನು; ಒಳಗೊಂಡಿರಲು=ತನ್ನಲ್ಲಿ ಹೊಂದಿದ್ದರೆ;

ಇವನೊಳಗೊಂಡಿರಲು=ದಟ್ಟವಾದ ಮಲೆನಾಡಿನ ಹಚ್ಚಹಸಿರಿನ ಸಿರಿ, ಜುಳುಜುಳು ನಾದವನ್ನು ಮಾಡುತ್ತ ಹರಿಯುವ ತೊರೆ, ಹಕ್ಕಿಗಳ ಇಂಪಾದ ಹಾಡು, ಗೊಲ್ಲನ ಕೊಳಲಿನ ಗಾನ, ಸಿರಿಗನ್ನಡ ಕಾವ್ಯಗಳ ನವರಸಗಳ ಉಣಿಸಿನ ಸವಿ, ಕವಿಯ ಮನಸ್ಸಿಗೆ ಸಮಾನವಾಗಿ ತುಡಿಯುವಂತಹ ಗೆಳೆಯ ಮತ್ತು ಕಾಡಿನಲ್ಲೆಲ್ಲಾ ತನ್ನೊಡನೆ ಅಲೆದಾಡುತ್ತ ಹರಟುವ ನೆಂಟ ತಿಮ್ಮ ಇರುವಂತಹ ಪರಿಸರ;

ಕವಿಗೆ ಸ್ವರ್ಗದ ಬಗ್ಗೆ ಒಲವಾಗಲಿ ಇಲ್ಲವೇ ನರಕದ ಬಗ್ಗೆ ಅಂಜಿಕೆಯಾಗಲಿ ಇಲ್ಲ. ಎಲ್ಲಿ ನಿಸರ್ಗದ ಚೆಲುವು, ಸಿರಿಗನ್ನಡದ ಅರಿವು ಮತ್ತು ಒಳ್ಳೆಯ ಗೆಳೆತನದ ನಂಟು ಇದೆಯೋ ಅದೇ ಅವರ ಪಾಲಿಗೆ ಆನಂದದ ನೆಲೆಯಾಗಿದೆ.

'ನವರಸ' ಎಂದರೆ ಒಂಬತ್ತು ಬಗೆಯ ರಸಗಳು. 'ರಸ' ಎಂದರೆ ಕಾವ್ಯವನ್ನು ಓದುವಾಗ ಇಲ್ಲವೇ ಕೇಳುವಾಗ ವ್ಯಕ್ತಿಯ ಮನದಲ್ಲಿ ಉಂಟಾಗುವ ಒಳಮಿಡಿತಗಳು. 'ಶೃಂಗಾರ–ಹಾಸ್ಯ–ಕರುಣ–ರೌದ್ರ–ವೀರ–ಭಯಾನಕ–ಬೀಭತ್ಸ–ಅದ್ಭುತ–ಶಾಂತ' ಎಂಬ ಒಂಬತ್ತು ಬಗೆಯ ರಸಗಳಿವೆ.)

❖❖

೧೧. ಇಂದ್ರಿಯ ಜಯ

"ನನ್ನಿಂದ್ರಿಯಂಗಳನು ನಾನೆಂದು ಜಯಿಸುವೆನು?"
ಎಂದೊಬ್ಬ ಸನ್ಯಾಸಿ ಕೇಳಿದನನೇಕರನು

ಲೋಕವೆಲ್ಲವು ಮಾಯೆ ಪ್ರೇಮವೆಂಬುದು ಮಿಥ್ಯೆ
ಸೌಂದರ್ಯವೆಂಬುವುದು ಪ್ರಕೃತಿಯೊಡ್ಡಿದ ಜಾಲ
ಸಂಸಾರ ಮರುಭೂಮಿ ಎಲ್ಲ ಬಿಟ್ಟರೆ ಮುಂದೆ
ಎಲ್ಲವೂ ಲಭಿಸುವುದು ಸನ್ಯಾಸದೊಳೆ ಮುಕ್ತಿ
ಎಂದವನು ಕಾವಿಯನು ಉಟ್ಟು ಬೂದಿಯ ತೊಟ್ಟು
ದುಡಿದು ತಿನ್ನುವ ಬದಲು ಬೇಡಿಯುಣುವುದ ಕಲಿತು
ಮಿಂದು ನದಿಯಲಿ ಧ್ಯಾನ ಜಪಗಳನು ಮಾಡುತ್ತ
ಇಂದ್ರಿಯಗಳ ಜಯಕೆ ಮುಕ್ತಿಯಾಸ್ವಾದನೆಗೆ
ಸಾಧನೆಯ ಮಾಡಿದನು ಆದರೂ ಆತನಿಗೆ
ಇಂದ್ರಿಯಂಗಳ ಜಯವು ಸಾಧ್ಯವಾಗಲೆ ಇಲ್ಲ

ಆಗವನು ಕಂಡಕಂಡವರನು ಕೇಳಿದನು
"ನನ್ನಿಂದ್ರಿಯಂಗಳನು ನಾನೆಂದು ಜಯಿಸುವೆನು?"

"ಕಾಶಿಯನು ಕಂಡಂದು." "ಮೋಹಗಳ ಬಿಟ್ಟಂದು."
"ಕಾಮ ಜಯವಾದಂದು." "ದ್ವಂದ್ವಗಳ ಗೆದ್ದಂದು."
"ಕಾನನಕೆ ನಡೆದು ಏಕಾಂತದಲಿ ಕುಳಿತಂದು."
ಎಂದು ಒಬ್ಬೊಬ್ಬರೊಂದನು ಹೇಳಿ ತೆರಳಿದರು.

ಸನ್ಯಾಸಿ ಒಂದೊಂದನೇ ಮಾಡಿ ದೇವರನು
ಕಾಣದೆಯೆ ಕಾಮಜಯಿಯಾಗದೆಯೆ ಬೇಸತ್ತು
ಎದೆಗೆಟ್ಟು ಸೋತವನು ದಾರಿಯಲಿ ಬರುತಿರಲು
ಚೆಲುವೆಯೊಬ್ಬಳ ಕಂಡು ಕೇಳಿದನು. "ಹೇಳಮ್ಮ,
ನನ್ನಿಂದ್ರಿಯಂಗಳನು ನಾನೆಂದು ಜಯಿಸುವೆನು?"

ಸುಂದರಿಯು "ಬಾ" ಎಂದು ಸನ್ಯಾಸಿಯನು ತನ್ನ
ಆಲಯಕೆ ಕರೆದೊಯ್ದು ಬಾಗಿಲಲಿ ನಿಲಹೇಳಿ
ಒಳಗಿಂದ ಏನನೋ ಮುಚ್ಚುಹಿಡಿಯಲಿ ತಂದು
"ಹಿಡಿ" ಎಂದು ನೀಡಿದಳು. ಸಾಧುವೂ ಮುಷ್ಟಿಯಲಿ
ಮುಚ್ಚಿ ಹಿಡಿದದನು ದೂರಕೆ ನಡೆದು ನೋಡಿದನು

ಬರಿಬೂದಿ ಕೈ ಬಿಚ್ಚಿದೊಡನೆಯೇ ಗಾಳಿಯಲಿ
ತೂರಿಹೋಯಿತು. ಸಾಧು ಆಶ್ಚರ್ಯದಲಿ ನಿಂತು
ಚಿಂತಿಸುತ್ತಿರೆ ಬೂದಿ ಇಂತು ನುಡಿಯಿತ್ತಂದು

"ನೀ ಸತ್ತು ಸೂಡಿನಲಿ ಹೆಣ ಬೂದಿಯಾದಂದು
ನಿನಗೆ ಇಂದ್ರಿಯ ಜಯವು ನೀನು ನಾನಾದಂದು!"

ಒಬ್ಬ ಸನ್ಯಾಸಿಯು ತನ್ನ ಮಯ್ ಮನದಲ್ಲಿ ಬಯಕೆಗಳು ಮೂಡುವುದಕ್ಕೆ ಕಾರಣವಾಗುವ ಇಂದ್ರಿಯಗಳನ್ನು ಜಯಿಸಬೇಕೆಂದು ಪ್ರಯತ್ನಿಸಿದಾಗ ನಡೆದ ಪ್ರಸಂಗಗಳನ್ನು ಈ ಕವನದಲ್ಲಿ ನಿರೂಪಿಸಲಾಗಿದೆ.

(ನನ್ನ+ಇಂದ್ರಿಯಂ+ಗಳನು; ಇಂದ್ರಿಯ=ಶಬ್ದವನ್ನು ಕೇಳುವ ಕಿವಿ, ಸೋಂಕುವಿಕೆಯನ್ನು ತಿಳಿಸುವ ತೊಗಲು; ರೂಪವನ್ನು ಕಾಣುವ ಕಣ್ಣು; ರಸವನ್ನು ಸವಿಯುವ ನಾಲಗೆ, ವಾಸನೆಯನ್ನು ಗ್ರಹಿಸುವ ಮೂಗು-ಇವನ್ನು ಅಯ್ದು ಇಂದ್ರಿಯಗಳೆಂದು ಕರೆಯುತ್ತಾರೆ; ನಾನ್+ಎಂದು; ಎಂದು=ಯಾವಾಗ/ಯಾವ ಕಾಲ; ಜಯಿಸು=ವ್ಯಕ್ತಿಯು ಏನನ್ನಾದರೂ ಇಲ್ಲವೇ ಯಾರನ್ನಾದರೂ ಹತೋಟಿಯಲ್ಲಿಟ್ಟು ಕೊಂಡು ತನ್ನ ಇಚ್ಚೆಯಂತೆಯೇ ನಡೆಸಿಕೊಳ್ಳುವುದು ಇಲ್ಲವೇ ಬಳಸಿಕೊಳ್ಳುವುದು; ಎಂದು+ಒಬ್ಬ;

ಸನ್ಯಾಸಿ=ಮಡದಿ ಮಕ್ಕಳನ್ನು ಹೊಂದಿರದೆ ಇಲ್ಲವೇ ಮದುವೆಯನ್ನೇ ಆಗದೆ ಮಾನವ ಸಹಜವಾದ ಸಾಮಾಜಿಕ ವ್ಯವಹಾರಗಳಿಂದ ದೂರನಾಗಿ, ತನ್ನ ಪಾಡಿಗೆ ತಾನು ಬಾಳುತ್ತಿರುವವನು;

ಕೇಳಿದನ್+ಅನೇಕರನು; ಕೇಳಿದನು=ವಿಚಾರಿಸಿದನು; ಅನೇಕರನು=ಬಹಳ ಮಂದಿಯನ್ನು ;

'ಇಂದ್ರಿಯ ಜಯ' ಎಂದರೆ ವ್ಯಕ್ತಿಯು ಅಯ್ದು ಇಂದ್ರಿಯಗಳಿಂದ ಉಂಟಾಗುವ ಸಂವೇದನೆಗಳನ್ನು ತನ್ನ ಹತೋಟಿಯಲ್ಲಿಟ್ಟುಕೊಂಡು ಬಾಳುವುದು. ಎಂತಹ

ಸನ್ನಿವೇಶದಲ್ಲಿಯೂ ಅವುಗಳಿಂದ ಉಂಟಾಗುವ ಸಂವೇದನೆಗಳ ಸೆಳೆತಕ್ಕೆ ತನ್ನ ಮಯ್ ಮನ ಈಡಾಗದಂತೆ ಎಚ್ಚರದಿಂದ ನಡೆದುಕೊಳ್ಳುವುದು;

ಲೋಕ+ಎಲ್ಲವೂ; ಲೋಕ=ಜಗತ್ತು/ಪ್ರಪಂಚ; ಮಾಯೆ=ಮಯ್ ಮನದಲ್ಲಿ ಬಯಕೆಗಳನ್ನು ಕೆರಳಿಸಿ, ತಮ್ಮತ್ತ ಸೆಳೆಯುವ ವಸ್ತು/ಜೀವಿ/ವ್ಯಕ್ತಿಗಳು;

ಲೋಕವೆಲ್ಲವೂ ಮಾಯೆ=ನಮ್ಮ ಕಣ್ಣ ಮುಂದಿನ ಲೋಕದಲ್ಲಿ ಇರುವ ವಸ್ತು ಮತ್ತು ಜೀವರಾಶಿಗಳೆಲ್ಲವೂ ಮಾನವನ ಮಯ್ ಮನದಲ್ಲಿ ಬಹುಬಗೆಯ ಆಸೆಗಳನ್ನು ಕೆರಳಿಸಿ, ಅವನ ಬದುಕನ್ನು ನೂರಾರು ಬಗೆಯ ದುರಂತಕ್ಕೆ ತಳ್ಳುತ್ತವೆ. ಆದ್ದರಿಂದ ಅವುಗಳ ಸೆಳೆತಕ್ಕೆ ಬಲಿಯಾಗಬಾರದು ಎಂಬ ನಿಲುವು;

ಪ್ರೇಮ+ಎಂಬುದು; ಪ್ರೇಮ=ಒಲವು/ಪ್ರೀತಿ; ಎಂಬುದು=ಎನ್ನುವುದು; ಮಿಥ್ಯೆ=ಸುಳ್ಳು;

ಪ್ರೇಮವೆಂಬುದು ಮಿಥ್ಯೆ=ವ್ಯಕ್ತಿಗಳ ಮನಸ್ಸನ್ನು ಪರಸ್ಪರ ಬೆಸೆದು ಒಬ್ಬರ ಒಳಿತಿಗಾಗಿ ಮತ್ತೊಬ್ಬರು ಎಂತಹ ತ್ಯಾಗಕ್ಕಾದರೂ ಮುಂದಾಗಲು ಪ್ರೇರಣೆಯಾಗುವ ಪ್ರೇಮವೇ ಸುಳ್ಳು. ಏಕೆಂದರೆ ಪ್ರತಿಯೊಬ್ಬ ವ್ಯಕ್ತಿಯು ತನ್ನ ಅಂತರಂಗದಲ್ಲಿ ತನ್ನೊಬ್ಬನ ಹಿತಕ್ಕಾಗಿಯೇ ಬಾಳುತ್ತಿರುತ್ತಾನೆ ಎಂಬ ನಿಲುವು;

ಸೌಂದರ್ಯ+ಎಂಬುದು; ಸೌಂದರ್ಯ=ಅಂದವಾಗಿರುವುದು/ಸುಂದರವಾಗಿರುವುದು; ಪ್ರಕೃತಿ+ಒಡ್ಡಿದ; ಪ್ರಕೃತಿ=ಜಗತ್ತಿನಲ್ಲಿರುವ ಚಲಿಸುವ ಜೀವರಾಶಿಗಳಿಂದ ಮತ್ತು ಚಲಿಸದಿರುವ ವಸ್ತುಗಳಿಂದ ಕೂಡಿರುವ ನಿಸರ್ಗ; ಒಡ್ಡು=ಮುಂದೆ ಹಾಕಿರುವ/ಹಿಡಿದಿರುವ ; ಜಾಲ=ಬಲೆ;

ಸೌಂದರ್ಯವೆಂಬುದು ಪ್ರಕೃತಿಯೊಡ್ಡಿದ ಜಾಲ=ನಿಸರ್ಗದಲ್ಲಿರುವ ಸುಂದರವಾಗಿರುವ ವಸ್ತುಗಳು ಮತ್ತು ಜೀವಿಗಳು ಮಾನವನ ಮಯ್ ಮನವನ್ನು ತಮ್ಮತ್ತ ಸೆಳೆದು ಅವನನ್ನು ಮೋಹದ ಬಲೆಯಲ್ಲಿ ಸಿಲುಕಿಸುತ್ತವೆ. ಇದರಿಂದ ಅವನ ಬದುಕು ಬಲೆಯಲ್ಲಿ ಸಿಲುಕಿದ ಪ್ರಾಣಿಯು ವಿಲಮಿಲನೆ ಒದ್ದಾಡಿ ನರಳುವಂತೆ ಜೀವನದ ಉದ್ದಕ್ಕೂ ಬಹುಬಗೆಯ ಸಂಕಟಗಳಿಂದ ನರಳುತ್ತಿರಬೇಕಾಗುತ್ತದೆ ಎಂಬ ನಿಲುವು;

ಸಂಸಾರ=ಗಂಡ ಹೆಂಡತಿ ಮಕ್ಕಳು ಹಾಗೂ ರಕ್ತದ ನಂಟುಳ್ಳ ವ್ಯಕ್ತಿಗಳ ಪರಿವಾರ; ಮರುಭೂಮಿ=ನೀರಿನ ಅಂಶವಿಲ್ಲದೆ ಮರುಳಿನ ಕಣಗಳಿಂದ ತುಂಬಿರುವ ಮರುಳುಗಾಡು;

ಸಂಸಾರ ಮರುಭೂಮಿ=ಇದೊಂದು ನುಡಿಗಟ್ಟಾಗಿ ಬಳಕೆಯಾಗಿದೆ. ಮರುಳುಗಾಡಿನಲ್ಲಿ ನೀರಿನ ಆಸರೆಯಿಲ್ಲದಿರುವಂತೆ ಸಂಸಾರದಲ್ಲಿ ನೆಮ್ಮದಿಯೆಂಬುದು ಇರುವುದಿಲ್ಲ;

ಲಭಿಸು=ದೊರೆಯುವುದು; ಸನ್ಯಾಸದೊಳೆ=ಸನ್ಯಾಸದಿಂದಲೇ;

ಸನ್ಯಾಸದೊಳೆ=ವ್ಯಕ್ತಿಯು ತನ್ನ ನಿತ್ಯ ಜೀವನದಲ್ಲಿ ಸಹಮಾನವರ ಜತೆಯ ನಂಟಿನಿಂದ ಮತ್ತು ಎಲ್ಲಾ ಬಗೆಯ ಸಾಮಾಜಿಕ ವ್ಯವಹಾರಗಳಿಂದ ದೂರಸರಿದು ಸನ್ಯಾಸಿಯಾಗಿ ಬಾಳುವಂತಾದಾಗ;

ಮುಕ್ತಿ=ಹುಟ್ಟು ಬದುಕು ಸಾವಿನ ಸರಪಣಿಯಿಂದ ಜೀವವು ಬಿಡುಗಡೆಯನ್ನು ಪಡೆಯುತ್ತದೆ ಎಂಬ ನಂಬಿಕೆ; ಎಂದು+ಅವನು;

ಕಾವಿ=ಕೆಂಪು ಬಣ್ಣದ ಬಟ್ಟೆ; ಉಟ್ಟು=ಸುತ್ತಿಕೊಂಡು; ಬೂದಿ=ಯಾವುದೇ ವಸ್ತು ಬೆಂಕಿಯಲ್ಲಿ ಸಂಪೂರ್ಣವಾಗಿ ಸುಟ್ಟುಹೋದಾಗ ಕೊನೆಯಲ್ಲಿ ಉಳಿಯುವ ಕಣಗಳು; ತೊಟ್ಟು=ಬಳಿದುಕೊಂಡು;

ದುಡಿದು ತಿನ್ನು=ಒಳ್ಳೆಯ ಉದ್ದೇಶ ಮತ್ತು ಪ್ರಾಮಾಣಿಕತನದಿಂದ ಕಾಯಕವೊಂದನ್ನು ಮಾಡಿ, ಅದರಿಂದ ತನ್ನ ಜೀವನದ ಅಗತ್ಯಗಳನ್ನು ಹೊಂದುವುದು; ಬೇಡಿ+ಉಣುವುದ; ಬೇಡು=ಯಾಚಿಸು/ಕೇಳು;

ಬೇಡಿಯುಣುವುದ ಕಲಿತು=ಮತ್ತೊಬ್ಬರ ಮುಂದೆ ಕಯ್ ಒಡ್ಡಿ ವ್ಯಕ್ತಿಯು ತನ್ನ ಜೀವನಕ್ಕೆ ಬೇಕಾದುದನ್ನು ಯಾಚಿಸಿ ಪಡೆಯುವುದು;

ಮಿಂದು=ಸ್ನಾನ ಮಾಡಿ; ಧ್ಯಾನ=ದೇವರ ಹೆಸರನ್ನು ಉಚ್ಚರಿಸುತ್ತಿರುವುದು; ಜಪ=ದೇವರ ಹೆಸರು ಇಲ್ಲವೇ ದೇವರ ಮಹಿಮೆಯನ್ನು ಕೊಂಡಾಡುವ ಮಂತ್ರಗಳನ್ನು ಹೇಳುತ್ತಿರುವುದು; ಮುಕ್ತಿ+ಆಸ್ವಾದನೆಗೆ; ಆಸ್ವಾದನೆ=ಪಡೆಯುವುದು/ಹೊಂದುವುದು; ಸಾಧನೆ=ಪರಿಶ್ರಮ;

ಆದರೂ ಆತನಿಗೆ ಇಂದ್ರಿಯಗಳ ಜಯವು ಸಾಧ್ಯವಾಗಲೆ ಇಲ್ಲ=ತನ್ನ ಒಳಿತಿನ ಜತೆಗೆ ಸಹಮಾನವರ ಮತ್ತು ಸಮಾಜದ ಒಳಿತಿಗೆ ನೆರವಾಗುವಂತಹ ಕಾಯಕವನ್ನು ಮಾಡುವ ಕ್ರಿಯಾಶೀಲನಾದ ವ್ಯಕ್ತಿಗೆ ಮಾತ್ರ ಇಂದ್ರಿಯ ಜಯ ದೊರಕುತ್ತದೆ; ಜಗದ ಜೀವನವನ್ನು 'ಮಾಯೆ, ಮಿಥ್ಯೆ, ಜಾಲ, ಮರುಭೂಮಿ' ಎಂಬ ನಿಲುವುಗಳನ್ನು ಹೊಂದಿರುವ ಸನ್ಯಾಸಿಗೆ ಎಂದೆಂದಿಗೂ ಇಂದ್ರಿಯ ಜಯ ದೊರೆಯುವುದಿಲ್ಲ. ಏಕೆಂದರೆ ಆತ ತನ್ನ ಕಣ್ಣ ಮುಂದಿನ ಲೋಕದ ಜನಸಮುದಾಯದ ಒಳಿತು ಕೆಡುಕಿನ ಬಗ್ಗೆ ಚಿಂತಿಸದೆ, ವಾಸ್ತವದಲ್ಲಿ ಇಲ್ಲದ ಪರಲೋಕದಲ್ಲಿ ದೊರೆಯುವ ಮುಕ್ತಿಯ ಬಗ್ಗೆ ಚಿಂತಿಸುತ್ತ ಸುಮ್ಮನೆ ಕಾಲವನ್ನು ಕಳೆಯುತ್ತಿರುತ್ತಾನೆ;

ಮಾನವ ಸಮುದಾಯ ಉಳಿದು ಬೆಳೆದು ಬಾಳುವುದಕ್ಕೆ ಅಗತ್ಯವಾದ ಪ್ರೀತಿ, ಕರುಣೆ ಮತ್ತು ಗೆಳೆತನದ ನಡೆನುಡಿಗಳಿಲ್ಲದೆ, ಲೋಕ ಮುನ್ನಡೆಯುವುದಕ್ಕೆ ಬೇಕಾದ ದುಡಿಮೆಯನ್ನು ಕಡೆಗಣಿಸಿ ಪರಾವಲಂಬಿಯಾಗಿ ಬಾಳುತ್ತಿರುವ ಸನ್ಯಾಸಿಯು 'ಇಲ್ಲಿರುವುದು ಸುಮ್ಮನೆ. ಅಲ್ಲಿರುವುದು ನಮ್ಮ ಮನೆ' ಎಂಬ ಕಲ್ಪನೆಯ ಲೋಕದಲ್ಲಿ

ಮೋಹಗೊಂಡಿರುತ್ತಾನೆ. ಇದರಿಂದಾಗಿ ಮಾನವನ ಕ್ರಿಯಾಶೀಲ ಚಟುವಟಿಕೆಯೇ ಮೊಟಕುಗೊಳ್ಳುತ್ತದೆ;

ಕಂಡಕಂಡವರನ್ನು=ತಾನು ನೋಡಿದವರೆಲ್ಲರನ್ನೂ;

ಕಾಶಿ=ಉತ್ತರ ಪ್ರದೇಶ ರಾಜ್ಯದ ವಾರಣಾಸಿ ಜಿಲ್ಲೆಯಲ್ಲಿ ಗಂಗಾ ನದಿಯ ತಟದಲ್ಲಿರುವ ಒಂದು ಪಟ್ಟಣ. ಈ ಪಟ್ಟಣಕ್ಕೆ 'ವಾರಣಾಸಿ/ಬನಾರಸ್/ಕಾಶಿ' ಎಂಬ ಮೂರು ಬಗೆಯ ಹೆಸರುಗಳಿವೆ. ಇಲ್ಲಿರುವ ಶಿವಲಿಂಗವನ್ನು 'ವಿಶ್ವನಾಥ' ಎಂದು ಕರೆಯುತ್ತಾರೆ. ಶಿವಲಿಂಗವನ್ನು ನೋಡುವ ವ್ಯಕ್ತಿಗೆ ಪುಣ್ಯ ದೊರೆಯುವುದೆಂದು, ಕಾಶಿಯಲ್ಲಿ ಸತ್ತರೆ ಮುಕ್ತಿಯನ್ನು ಹೊಂದುತ್ತಾನೆ ಎಂಬ ನಂಬಿಕೆಯು ಜನಮನದಲ್ಲಿದೆ; ಕಂಡ+ಅಂದು; ಅಂದು=ಆಗ/ಆ ಕಾಲ; ಕಂಡಂದು=ನೋಡಿದಾಗ;

ಮೋಹ=ಯಾವುದನ್ನಾದರೂ ಪಡೆಯಲೇಬೇಕೆಂಬ/ತನ್ನದಾಗಿಸಿಕೊಳ್ಳಬೇಕೆಂಬ ತೀವ್ರತರವಾದ ಆಸೆ ; ಬಿಟ್ಟ+ಅಂದು; ಬಿಟ್ಟಂದು=ತೊರೆದಾಗ; ಕಾಮ=ಬಯಕೆ/ಆಸೆ/ ಗಂಡು ಹೆಣ್ಣಿನ ಮಯ್ ಮನಗಳು ಒಂದನ್ನೊಂದು ಜತೆಗೂಡಲೆಂದು ಹಂಬಲಿಸುವ ಒಳಮಿಡಿತ; ಜಯ+ಆದ+ಅಂದು; ದ್ವಂದ್ವ=ಎರಡು/ಇಬ್ಬಗೆಯ ಮನಸ್ಸು/ಆಸೆ ಮತ್ತು ಆದರ್ಶಗಳ ನಡುವೆ ತುಯ್ದಾಡುವ ಮನಸ್ಸು/ಒಳಿತು ಕೆಡುಕಿನ ಒಳಮಿಡಿತಗಳಿಂದ ಕೂಡಿರುವ ಮನಸ್ಸು;

ಗೆದ್ದ+ಅಂದು; ಕಾನನ=ಕಾಡು/ಅರಣ್ಯ; ಏಕಾಂತ=ಒಂಟಿಯಾದ/ರಹಸ್ಯ/ಯಾರು ಇಲ್ಲದ ಜಾಗದಲ್ಲಿ ಒಬ್ಬಂಟಿಯಾಗಿರುವುದು; ಕುಳಿತ+ಅಂದು; ಒಬ್ಬ+ಒಬ್ಬರ್+ಒಂದನು; ತೆರಳು=ಹೋಗು/ನಡೆ;

ದೇವರು=ಜೀವನದಲ್ಲಿ ಬರುವ ಎಡರು ತೊಡರುಗಳನ್ನು ನಿವಾರಿಸಿ ತಮಗೆ ಒಳಿತನ್ನು ಮಾಡಿ ಕಾಪಾಡುವ ವ್ಯಕ್ತಿಯನ್ನು 'ದೇವರು' ಎಂದು ಮಾನವ ಸಮುದಾಯ ನಂಬಿದೆ;

ಕಾಮ+ಜಯಿ+ಆಗದೆಯ;

ಕಾಮಜಯಿಯಾಗದೆಯೆ=ಕಾಮವನ್ನು ಗೆಲ್ಲಲಾಗದೆ ಅಂದರೆ ಕಾಮವನ್ನು ಹತ್ತಿಕ್ಕಿಕೊಳ್ಳಲಾಗದೆ;

ಬೇಸತ್ತು=ಬೇಸರವನ್ನು ಪಟ್ಟುಕೊಂಡು ; ಎದೆ+ಕೆಟ್ಟು; ಎದೆಗೆಟ್ಟು=ಹಿಂಜರಿದು/ ಮುನ್ನಡೆಯುವ ಕೆಚ್ಚನ್ನು ಕಳೆದುಕೊಂಡು;

ಸನ್ಯಾಸಿ ಒಂದೊಂದನೇ ಮಾಡಿ ದೇವರನು ಕಾಣದೆಯೆ ಕಾಮಜಯಿ ಯಾಗದೆಯೆ ಬೇಸತ್ತು ಎದೆಗೆಟ್ಟು ಸೋತವನು=ಯಾವುದೇ ಒಬ್ಬ ವ್ಯಕ್ತಿಯು ದೇವರನ್ನು ಕಾಣಲು ಆಗುವುದಿಲ್ಲ. ಏಕೆಂದರೆ ದೇವರು ಎನ್ನುವುದು "ಮಾನವನ ಮನದಲ್ಲಿ

ರೂಪುಗೊಂಡಿರುವ ನಂಬಿಕೆಯ ಪ್ರತಿರೂಪವೇ ಹೊರತು ವಾಸ್ತವದಲ್ಲಿ ಇರುವ ವ್ಯಕ್ತಿ ಇಲ್ಲವೇ ಶಕ್ತಿಯಲ್ಲ."

ಸಾಗರದಲ್ಲಿ ನೀರಿನ ಅಲೆಗಳ ಉಬ್ಬರವಿಳಿತ ಎಲ್ಲಾ ಕಾಲದಲ್ಲಿಯೂ ಗಾಳಿಯ ಬಡಿತಕ್ಕೆ ತಕ್ಕಂತೆ ತುಸು ಹೆಚ್ಚು ಕಡಿಮೆ ಇದ್ದೇ ಇರುತ್ತದೆಯೋ ಅಂತೆಯೇ ವ್ಯಕ್ತಿಯ ಮಯ್ಯಲ್ಲಿ ಕೊನೆ ಉಸಿರು ಇರುವ ತನಕ ಒಂದಲ್ಲ ಒಂದು ಬಗೆಯ ಬಯಕೆಗಳು ಮೂಡುತ್ತಲೇ ಇರುತ್ತವೆ. ಏಕೆಂದರೆ ಅಯ್ದು ಇಂದ್ರಿಯಗಳಿಂದ ಮಯ್ ಮನವನ್ನು ತಟ್ಟುವ ಮುಟ್ಟುವ ಸಂವೇದನೆಗಳು ನಿರಂತರವಾಗಿ ನೂರಾರು ಬಗೆಯ ಬಯಕೆಗಳನ್ನು ಮೂಡಿಸುತ್ತಲೇ ಇರುತ್ತವೆ.

ಚೆಲುವೆ+ಒಬ್ಬಳ; ಚೆಲುವೆ=ಚೆಲುವೆ; ಆಲಯ=ಮನೆ; ಕರೆದು+ಒಯ್ದು; ಕರೆದೊಯ್ದು=ಕರೆದುಕೊಂಡು ಹೋಗಿ; ನಿಲಹೇಳಿ=ನಿಲ್ಲಲು ತಿಳಿಸಿ; ಮುಚ್ಚುಹಿಡಿ=ಒಂದು ಹಸ್ತದಲ್ಲಿ ಮುಚ್ಚಿಟ್ಟುಕೊಂಡು; ಹಿಡಿ=ತೆಗೆದುಕೊ; ಸಾಧು=ಸನ್ಯಾಸಿ; ಮುಷ್ಟಿ=ಮುಚ್ಚಿದ ಹಸ್ತ; ಬರಿ=ಕೇವಲ; ಕೈಬಿಚ್ಚಿದ+ಒಡನೆಯೆ; ಕೈಬಿಚ್ಚು=ಹಸ್ತವನ್ನು ತೆರೆದಾಗ; ತೂರು=ಗಾಳಿಯಲ್ಲಿ ಹಾರುವುದು; ನುಡಿಯಿತ್ತು+ಅಂದು; ನುಡಿಯಿತ್ತು=ಹೇಳಿತು; ಅಂದು=ಆಗ/ಆ ಸಮಯದಲ್ಲಿ ;

ಸೂಡು=ಹೆಣವನ್ನು ಸುಡಲೆಂದು ಸವುದೆಯ ತುಂಡುಗಳನ್ನು ಓತಿಟ್ಟು ಬೆಂಕಿಯನ್ನು ಹಾಕಿದಾಗ ಉರಿಯುತ್ತಿರುವ ಚಿತೆ;

ಬೂದಿ+ಆದ+ಅಂದು; ನಾನ್+ಆದ+ಅಂದು =ಜೀವಂತವಾಗಿರುವ ನೀನು ಸತ್ತು ಉರಿಯುತ್ತಿರುವ ಚಿತೆಯಲ್ಲಿ ನಿನ್ನ ಹೆಣ ಬೆಂದು ನನ್ನಂತೆಯೇ ಬೂದಿಯಾದಾಗ;

ವ್ಯಕ್ತಿಯು ತನ್ನ ಮಯ್ ಮನದಲ್ಲಿ ಇಂದ್ರಿಯಗಳ ಸಂವೇದನೆಯಿಂದ ಮೂಡುವ ಒಳಿತು ಕೆಡುಕಿನ ಒಳಮಿಡಿತಗಳಲ್ಲಿ ಕೆಟ್ಟದ್ದನ್ನು ಹತ್ತಿಕ್ಕಿಕೊಂಡು ಬಾಳಬಹುದೇ ಹೊರತು, ಕೆಟ್ಟ ಕಾಮನೆಗಳೇ ಬಾರದಂತೆ ತಡೆಯಲು ಆಗುವುದಿಲ್ಲ. ಸುಟ್ಟು ಬೂದಿಯಾಗಿರುವ ಕಣಗಳಿಗೆ ಸಂವೇದನೆಗಳು ಇರುವುದಿಲ್ಲ. ಆದರೆ ಜೀವಂತವಾಗಿರುವ ಪ್ರತಿಯೊಬ್ಬ ವ್ಯಕ್ತಿಯಲ್ಲಿಯೂ ಇಂದ್ರಿಯಗಳಿಂದ ಉಂಟಾಗುವ ಸಂವೇದನೆಗಳು ಇದ್ದೇ ಇರುತ್ತವೆ ಎಂಬ ಕಟು ವಾಸ್ತವವನ್ನು ಈ ಕವನ ಸೂಚಿಸುತ್ತಿದೆ.

❖❖

೧೨. ನಾನು ಕವಿಯಲ್ಲ

ನನ್ನ ಕೃತಿ ಕಲೆಯಲ್ಲ
ನಾನು ಕವಿಯಲ್ಲ
ಕಲೆಗಾಗಿ ಕಲೆಯೆಂಬ
ಹೊಳ್ಳು ನೆಲೆಯಿಲ್ಲ

ಮೆಚ್ಚುಗೆಯೆ ನನಗೆ ಕೊಲೆ
ಬದುಕುವುದೆ ನನಗೆ ಬೆಲೆ
ಸಾಧನೆಯ ಛಾಯೆ ಕಲೆ
ವಿಶ್ವಾತ್ಮವದಕೆ ನೆಲೆ

ನಿನಗದು ಚಮತ್ಕಾರ
ನನಗೊ ಸಾಕ್ಷಾತ್ಕಾರ
ಮೌನದಿಂದನುಭವಿಸು
ಕೋ ನಮಸ್ಕಾರ

ಕಲೆಯೆಂದು ಹೊಗಳುವಡೆ
ಕೋಟಿ ಧಿಕ್ಕಾರ.

ಕಾವ್ಯವೆಂಬ ಕಲೆಯು ಜನಮನದಲ್ಲಿ ಅರಿವು ಮತ್ತು ಸಾಮಾಜಿಕ ಎಚ್ಚರವನ್ನು ಮೂಡಿಸುವಂತಹ ಸಂಗತಿಗಳನ್ನು ಒಳಗೊಂಡಿರಬೇಕು. ಇಲ್ಲದಿದ್ದರೆ ಅದು ಕಾವ್ಯವೂ ಅಲ್ಲ; ಅದನ್ನು ರಚಿಸಿದವನು ಕವಿಯೂ ಅಲ್ಲ ಎಂಬ ನಿಲುವನ್ನು ಈ ಕವನದಲ್ಲಿ ವ್ಯಕ್ತಪಡಿಸಲಾಗಿದೆ.

ಕ್ರಿ.ಶ.ಹತ್ತೊಂಬತ್ತನೆಯ ಶತಮಾನದಲ್ಲಿದ್ದ ಫ್ರೆಂಚ್ ಬರಹಗಾರ **Theophile Gautier** ಎಂಬುವರು ತಾವು ರಚಿಸಿದ ಪುಸ್ತಕವೊಂದರ ಮುನ್ನುಡಿಯಲ್ಲಿ ಕಲೆಯ ತತ್ತ್ವವನ್ನು ಕುರಿತು ಹೇಳಿದ **'I'art pour I'art'** ಎನ್ನುವ ಮಾತುಗಳು ಇಂಗ್ಲಿಶಿನಲ್ಲಿ **`Art for art's sake'** ಮತ್ತು ಕನ್ನಡದಲ್ಲಿ 'ಕಲೆಗಾಗಿ ಕಲೆ' ಎಂದು ಚಲಾವಣೆಗೆ ಬಂದಿವೆ. ಜಗತ್ತಿನ ಕಲಾರಂಗದಲ್ಲಿ ಅಂದಿನಿಂದ ಇಂದಿನ ತನಕ ಈ ಮಾತುಗಳನ್ನು ಒಪ್ಪುವ ಇಲ್ಲವೇ ನಿರಾಕರಿಸುವ ವಾದ ವಿವಾದಗಳು ನಡೆಯುತ್ತಲೇ ಇವೆ.

೧. 'ಕಲೆಗಾಗಿ ಕಲೆ' ಎಂಬ ತತ್ತ್ವ

ಕಲೆಯ ಪ್ರಕಾರಗಳಾದ ಕಾವ್ಯ, ನಾಟಕ, ಚಿತ್ರ, ಶಿಲ್ಪ, ನಾಟ್ಯ ಮುಂತಾದವುಗಳಲ್ಲಿ ಲೋಕದ ಜನಸಮುದಾಯಕ್ಕೆ ನೀತಿಯನ್ನು ಹೇಳುವ, ಜನಮನದಲ್ಲಿ ಸಾಮಾಜಿಕ ಮತ್ತು ರಾಜಕೀಯ ಅರಿವನ್ನು ಮೂಡಿಸುವ ಇಲ್ಲವೇ ಜನರಿಗೆ ತಮ್ಮ ಬದುಕನ್ನು ಒಳ್ಳೆಯ ರೀತಿಯಲ್ಲಿ ರೂಪಿಸಿಕೊಳ್ಳಲು ಬೇಕಾದ ಸಂದೇಶವನ್ನು ನೀಡುವ ಸಂಗತಿಗಳು ಇರಬೇಕಾದ್ದಿಲ್ಲ. ಏಕೆಂದರೆ ಕಲೆ ಎನ್ನುವುದು ವ್ಯಕ್ತಿಗತವಾದ ಜೀವನದ ನೋವು ನಲಿವು, ಪಾಂಡಿತ್ಯ ಮತ್ತು ಒಳನೋಟಗಳ ಒಗ್ಗೂಡುವಿಕೆಯಿಂದ ಹೆಣೆದುಕೊಂಡು ರಚನೆಗೊಂಡಿರುತ್ತದೆ. ಕಲಾಕಾರನು ತನ್ನ ಮಯ್ ಮನದಲ್ಲಿ ಮಿಡಿಯುವಂತಹ ಅಂತರಂಗದ ಒಳಮಿಡಿತಗಳಿಗೆ ಕಲೆಯ ರೂಪವನ್ನು ನೀಡುತ್ತಾನೆ. ಆದ್ದರಿಂದ ವ್ಯಕ್ತಿಗತವಾಗಿ ಹೊರಹೊಮ್ಮುವ ಕಲೆಯನ್ನು ಕೇವಲ ಕಲೆಯಾಗಿ ನೋಡಿ ಆನಂದಿಸಬೇಕೆ ಹೊರತು ಅದರಲ್ಲಿ ಲೋಕಕ್ಕೆ ಪ್ರಯೋಜನಕಾರಿಯಾಗುವ ಇಲ್ಲವೇ ಉಪದೇಶವನ್ನು ನೀಡುವಂತಹ ಸಂಗತಿಗಳನ್ನು ಅರಸಬಾರದು.

೨. 'ಕಲೆಗಾಗಿ ಕಲೆ' ಎಂಬ ತತ್ತ್ವದ ನಿರಾಕರಣೆ

ಕಲೆ ಎಂಬುದು ಜನಸಮುದಾಯದ ಮಯ್ ಮನಕ್ಕೆ ಮುದವನ್ನು ನೀಡುವಂತೆಯೇ ಅರಿವನ್ನು ನೀಡಿ, ಜನಸಮುದಾಯದ ಬದುಕಿನಲ್ಲಿ ಸಾಮಾಜಿಕ ಮತ್ತು ರಾಜಕೀಯ ಎಚ್ಚರವನ್ನು ಮೂಡಿಸಬೇಕು. ಅರಿವು ಮತ್ತು ಎಚ್ಚರದ ಜತೆಜತೆಗೆ ಸಮಾಜದಲ್ಲಿರುವ ಎಲ್ಲ ಬಗೆಯ ಕೆಡುಕನ್ನು ತೊಡೆದುಹಾಕುವ ಅರಿವಿನ ಹತಾರವಾಗಿ ಕಲೆಯು ಬಳಕೆಯಾಗಬೇಕು.

'ಅರಿವು' ಎಂದರೆ ಜನಸಮುದಾಯದ ಜೀವನದಲ್ಲಿ ಯಾವುದು ವಾಸ್ತವ-ಯಾವುದು ಮಾನವ ನಿರ್ಮಿತ; ಯಾವುದು ಸರಿ-ಯಾವುದು ತಪ್ಪು; ಯಾವ ಬಗೆಯ ನಡೆನುಡಿಗಳು ತನಗೆ ಮತ್ತು ತನ್ನ ಕುಟುಂಬಕ್ಕೆ ಒಳಿತನ್ನು ಉಂಟುಮಾಡುವುದರ ಜತೆಗೆ ಸಹಮಾನವರಿಗೂ ಒಳಿತನ್ನುಂಟುಮಾಡುತ್ತವೆ ಇಲ್ಲವೇ ತನಗೆ ಮತ್ತು ತನ್ನ ಕುಟುಂಬಕ್ಕೆ ಮಾತ್ರ ಒಳಿತನ್ನುಂಟುಮಾಡಿ ಸಮಾಜಕ್ಕೆ ಕೇಡನ್ನು ಬಗೆಯುತ್ತವೆ ಎಂಬುದನ್ನು ತಿಳಿಯುವುದು.

'ಸಾಮಾಜಿಕ ಮತ್ತು ರಾಜಕೀಯ ಎಚ್ಚರ' ಎಂದರೆ ಜನಸಮುದಾಯದ ಬದುಕನ್ನು ನಿಯಂತ್ರಿಸಿ ನಡೆಸುತ್ತಿರುವ ಸಾಮಾಜಿಕ ರಚನೆಯಲ್ಲಿರುವ ಮತ್ತು ರಾಜಕೀಯ ಆಡಳಿತದ ರೀತಿಯಲ್ಲಿರುವ ಒಳಿತು ಕೆಡುಕಿನ ಸಂಗತಿಗಳನ್ನು ಗುರುತಿಸಿ, ಕೆಡುಕನ್ನು ತೊಡೆದುಹಾಕಿ, ಒಳಿತನ್ನು ನೆಲೆಗೊಳಿಸಲು ಕ್ರಿಯಾಶೀಲರಾಗುವುದು.

(ಕವಿ=ಕಾವ್ಯವನ್ನು ರಚಿಸುವವನು; ಕೃತಿ=ಕಾವ್ಯ; ಕಲೆ+ಅಲ್ಲ;

ಕಲೆ=ವ್ಯಕ್ತಿಯ ಮನದಲ್ಲಿ ಮೂಡುವ ಕಲ್ಪನೆ ಮತ್ತು ಚಿಂತನೆಯಿಂದ ಜತೆಗೂಡಿ,

ನೋಡುವವರ ಮತ್ತು ಕೇಳುವವರ ಕಣ್ಮನಗಳನ್ನು ಸೆಳೆಯುವ ರೀತಿಯಲ್ಲಿ ಕುಶಲತೆಯಿಂದ ರಚನೆಗೊಂಡಿರುವ ಇಲ್ಲವೇ ಹೊರಹೊಮ್ಮಿರುವ ಕಾವ್ಯ, ನಾಟಕ, ಚಿತ್ರ, ಶಿಲ್ಪ, ನಾಟ್ಯವನ್ನು ಕಲೆಗಳೆಂದು ಕರೆಯುತ್ತಾರೆ;

ಕಲೆಗೆ+ಆಗಿ; ಕಲೆ+ಎಂಬ; ಎಂಬ=ಎನ್ನುವ; ಹೊಳ್ಳು=ಒಳಗೆ ಗಟ್ಟಿಯಾದ ಕಾಳಿಲ್ಲದ ಜಳ್ಳು ದವಸ/ಹೊಟ್ಟು/ತಿರುಳಿಲ್ಲದ್ದು; ನೆಲೆ+ಇಲ್ಲ; ನೆಲೆ=ನಿಲುವು;

ಕಲೆಗಾಗಿ ಕಲೆಯೆಂಬ ಹೊಳ್ಳು ನೆಲೆಯಿಲ್ಲ=ಕಲೆಗಾಗಿ ಕಲೆಯೆಂಬ ಮಾತನ್ನು ನಾನು ಒಪ್ಪುವುದಿಲ್ಲ. ಏಕೆಂದರೆ ಈ ನಿಲುವು ಪೊಳ್ಳುತನದಿಂದ ಕೂಡಿದೆ. ನೋಡುವ ಕಣ್ಮನಗಳಿಗೆ ಆನಂದದ ಜತೆಜತೆಗೆ ವ್ಯಕ್ತಿಯ ಮನದಲ್ಲಿ ಅರಿವು ಮತ್ತು ಎಚ್ಚರವನ್ನು ಮೂಡಿಸದ ಕಲೆಯು ಕಲೆಯೇ ಅಲ್ಲ;

ಮೆಚ್ಚುಗೆ=ಹೊಗಳಿಕೆ/ಕೊಂಡಾಡುವುದು; ಕೊಲೆ=ಹಿಂಸೆ/ಪೀಡೆ/ಸಾಯಿಸುವುದು; ಬದುಕು=ಜೀವನ/ಬಾಳ್ವೆ; ಬೆಲೆ=ಹಿರಿಮೆ/ದೊಡ್ಡದು;

ಮೆಚ್ಚುಗೆಯೆ ನನಗೆ ಕೊಲೆ ಬದುಕುವುದೆ ನನಗೆ ಬೆಲೆ=ಈ ನುಡಿಗಳು ರೂಪಕವಾಗಿ ಬಳಕೆಯಾಗಿವೆ. ಕಾವ್ಯರಚನೆಯಲ್ಲಿನ ಛಂದೋ ವಿನ್ಯಾಸ, ಪದಗಳ ಮೋಡಿ ಮತ್ತು ತಿರುಳಿನ ಸೊಗಸು, ಪಾತ್ರಗಳ ಚಿತ್ರಣ ಮತ್ತು ಬಹುಬಗೆಯ ಸನ್ನಿವೇಶಗಳ ಮನೋಹರತೆಯನ್ನು ಕಂಡು, ಓದಿ ನೋಡಿ ಇಲ್ಲವೇ ಕೇಳಿ ತಿಳಿದು ಮೆಚ್ಚಿ ಕೊಂಡಾಡುವುದರ ಜತೆಜತೆಗೆ ಕವಿಯ ಬರಹದಿಂದ ಒಳ್ಳೆಯ ಅರಿವನ್ನು ವ್ಯಕ್ತಿಯು ಪಡೆದು, ತನ್ನ ಮತ್ತು ಸಹಮಾನವರ ಬದುಕನ್ನು ಉತ್ತಮ ಪಡಿಸುವಂತೆ ಬಾಳಬೇಕೆಂಬ ಪ್ರೇರಣೆಯನ್ನು ಹೊಂದಿ ಕ್ರಿಯಾಶೀಲನಾದರೆ, ಆಗ ಅದು ಕವಿಗೆ ಮತ್ತು ಕಾವ್ಯಕ್ಕೆ ದೊಡ್ಡ ಬೆಲೆಯನ್ನು ನೀಡಿದಂತಾಗುತ್ತದೆ.

ಕವಿಗಿಂತ ಕಾವ್ಯ ದೊಡ್ಡದು. ಕಾವ್ಯಕ್ಕಿಂತ ಬದುಕು ದೊಡ್ಡದು. ಕವಿಯ ಹೆಸರನ್ನು ಹೊತ್ತು ಮೆರೆಸುವ ಬದಲು ಕಾವ್ಯದಲ್ಲಿ ಕವಿಯು ಕಣ್ಣಿಗೆ ಕಟ್ಟುವಂತೆ ಮನಮುಟ್ಟುವಂತೆ ಹೇಳಿರುವ ಒಳಿತಿನ ಸಂಗತಿಗಳನ್ನು ವ್ಯಕ್ತಿಯು ಅರಿತು ಬಾಳುವುದು ಎಲ್ಲಕ್ಕಿಂತ ದೊಡ್ಡದು ಎಂಬ ಇಂಗಿತವನ್ನು ಈ ನುಡಿಗಳು ಸೂಚಿಸುತ್ತಿವೆ.

ಸಾಧನೆ=ಪರಿಶ್ರಮದಿಂದ ಏನನ್ನಾದರೂ ಹೊಂದುವುದು/ಪಡೆಯುವುದು; ಛಾಯೆ=ನೆರಳು/ಪ್ರತಿಬಿಂಬ;

ಸಾಧನೆಯ ಛಾಯೆ ಕಲೆ=ನಿಸರ್ಗದಲ್ಲಿ ಕಂಡುಬರುವ ನೋಟ ಮತ್ತು ಉಂಟಾಗುವ ಕ್ರಿಯೆಗಳು ಹಾಗೂ ಜನಸಮುದಾಯದ ಬದುಕಿನ ಪ್ರಸಂಗಗಳು ಕಲೆಯ ರೂಪದಲ್ಲಿ ಚಿತ್ರಣಗೊಳ್ಳುತ್ತವೆ;

ವಿಶ್ವ+ಆತ್ಮ+ಅದಕೆ; ವಿಶ್ವ=ಜಗತ್ತು/ಪ್ರಪಂಚ; ಆತ್ಮ=ಮನಸ್ಸು/ಒಳಗೊಂಡಿರುವುದು; ನೆಲೆ=ಆಶ್ರಯ/ಜಾಗ;

ವಿಶ್ವಾತ್ಮವದಕೆ ನೆಲೆ=ಕಲೆಯ ಎಲ್ಲ ಪ್ರಕಾರಗಳ ರಚನೆಗೆ ನಿಸರ್ಗ ಮತ್ತು ಜನಸಮುದಾಯದ ಬದುಕು ಮೂಲ ಪ್ರೇರಣೆಯಾಗಿದೆ;

ಸಾಧನೆಯ ಛಾಯೆ ಕಲೆ ವಿಶ್ವಾತ್ಮವದಕೆ ನೆಲೆ=ಕಲಾಕಾರನು ನಿಸರ್ಗದಲ್ಲಿ ಮತ್ತು ಸಕಲ ಜೀವರಾಶಿಗಳ ಬದುಕಿನಲ್ಲಿ ತಾನು ಕಂಡುಂಡ ರುದ್ರ ಮನೋಹರವಾದ ನೋಟಗಳನ್ನು ಮತ್ತು ಒಳಿತು ಕೆಡುಕಿನ ಸಂಗತಿಗಳೆಲ್ಲವನ್ನೂ ಮತ್ತೊಮ್ಮೆ ತನ್ನ ಮನದಲ್ಲಿ ಒರೆಹಚ್ಚಿನೋಡಿ ಕಲೆಯನ್ನು ರಚಿಸುತ್ತಾನೆ. ಆದ್ದರಿಂದಲೇ ಪ್ರತಿಯೊಂದು ಕಲೆಯು ಲೋಕಜೀವನದ ಗತಿಬಿಂಬವಾಗಿರುತ್ತದೆ;

ನಿನಗೆ+ಅದು; ಅದು=ಕಲೆಯ ಪ್ರಕಾರಗಳು; ಚಮತ್ಕಾರ=ನೋಡುವವರ ಮನದಲ್ಲಿ ಅಚ್ಚರಿಯನ್ನುಂಟುಮಾಡುವಂತೆ ವ್ಯಕ್ತಿಯ ಕಯ್ ಚಳಕದಿಂದ ರೂಪುಗೊಳ್ಳುವ ವಸ್ತು ಇಲ್ಲವೇ ಉಂಟಾಗುವ ಕ್ರಿಯೆ;

ನಿನಗದು ಚಮತ್ಕಾರ=ಕಲೆಗಾಗಿಯೇ ಕಲೆಯೆಂಬ ನಿಲುವುಳ್ಳ ವ್ಯಕ್ತಿಯ ಪಾಲಿಗೆ ಕಲೆಯೆಂಬುದು ವ್ಯಕ್ತಿಯ ಕಣ್ಮನವನ್ನು ತನ್ನತ್ತ ಸೆಳೆದು ಬೆರಗನ್ನುಂಟುಮಾಡುವ ವಸ್ತು ಇಲ್ಲವೇ ಕ್ರಿಯೆಯಾಗಿರುತ್ತದೆ;

ನನಗೆ=ಕವಿಗೆ; ಸಾಕ್ಷಾತ್ಕಾರ=ಕಣ್ಣಿಗೆ ಗೋಚರಿಸುವುದು/ವಾಸ್ತವವನ್ನು ಅರಿಯುವುದು;

ನನಗೊ ಸಾಕ್ಷಾತ್ಕಾರ=ಕವಿಯ ಪಾಲಿಗೆ ಕಲೆಯೆಂಬುದು ಬದುಕಿನ ವಾಸ್ತವವನ್ನು ಅರಿಯಲು ನೆರವಾಗುತ್ತದೆ. ಮಾನವ ಸಮುದಾಯದ ಎಲ್ಲ ಬಗೆಯ ಆಗುಹೋಗುಗಳಿಗೆ ನಿಸರ್ಗದಲ್ಲಿನ ಆಗುಹೋಗುಗಳು ಮತ್ತು ಮಾನವರ ಒಳಿತು ಕೆಡುಕಿನ ನಡೆನುಡಿಗಳೇ ಕಾರಣವೆಂಬ ವಾಸ್ತವವನ್ನು ಕಲೆಯು ತೆರೆದು ತೋರಿಸುತ್ತದೆ;

ಮೌನ+ಇಂದ+ಅನುಭವಿಸು; ಮೌನ=ಮಾತಿಲ್ಲದಿರುವಿಕೆ; ಅನುಭವಿಸು=ಹೊಂದು/ಪಡೆ; ಕೋ=ತೆಗೆದುಕೊ/ಕೊಳ್; ನಮಸ್ಕಾರ=ನಮನ/ವಂದನೆ;

ಮೌನದಿಂದನುಭವಿಸು ಕೋ ನಮಸ್ಕಾರ=ಶಾಂತಚಿತ್ತನಾಗಿ ಕಲೆಯ ಸೊಗಸನ್ನು ಸವಿಯುವ ವ್ಯಕ್ತಿಗೆ ಕವಿಯು ತನ್ನ ನಮನವನ್ನು ಸಲ್ಲಿಸುತ್ತಿದ್ದಾನೆ;

ಕಲೆ+ಎಂದು; ಹೊಗಳುವಡೆ=ಹೊಗಳುವುದಾದರೆ; ಕೋಟಿ=ಒಂದು ನೂರು ಲಕ್ಷ/ಬಹಳ; ಧಿಕ್ಕಾರ=ತಿರಸ್ಕಾರ/ನಿರಾಕರಣೆ;

ಕಲೆಯೆಂದು ಹೊಗಳುವಡೆ ಕೋಟಿ ಧಿಕ್ಕಾರ=ಕಲೆಯ ಮೂಲಕ ಲೋಕದ ವಾಸ್ತವವನ್ನು ಅರಿತು ಬದುಕನ್ನು ಒಳ್ಳೆಯ ರೀತಿಯಲ್ಲಿ ರೂಪಿಸಿಕೊಳ್ಳದೆ, ಕೇವಲ ಕಲೆಯಲ್ಲಿನ ಹೊರನೋಟದ ಚೆಲುವನ್ನು ಮಾತ್ರ ಸವಿದು, ಅದನ್ನೇ ದೊಡ್ಡದೆಂದು ಹಾಡಿ ಹೊಗಳುವ ವ್ಯಕ್ತಿಯನ್ನು ಕವಿಯು ನಿರಾಕರಿಸುತ್ತಾನೆ.)

❖❖

೧೩ ಬೆಕ್ಕು - ಇಲಿ

ಊರಿನ ಕೊಳೆಯನೆಲ್ಲ ತೊಳೆವ ನಿನಗೆಯೆ ತೊಳೆಯೆ
ನೀರಿಲ್ಲ ಓ ತೋಟಿ ಹಣವಂತರಿಗೆ ತೊಟ್ಟಿ
ಮನೆಗಳನು ಕಟ್ಟುವ ನಿನಗೆ ಮಲಗೆ ಬಡಹಟ್ಟಿ
ಗತಿಯಿಲ್ಲ ಓ ಕೂಲಿಗಾರ ಪೈರನು ಬೆಳೆಯೆ
ನೀನು ಲೋಕಕೆ ಕೂಳು ಆದರುಣ್ಣಲು ನಿನಗೆ
ಕಾಳಿಲ್ಲ ಓ ರೈತ ತಿಂದು ಧನಿಕರ ಬುತ್ತಿ
ತೇಗುತಿದೆ ಬಡಜನರೊ ಹೊಟ್ಟೆ ಬೆನ್ನಿಗೆ ಹತ್ತಿ
ನರಳಿ ಹೊರಳುತ್ತುರುಳುತಿರುವರು ಜವನ ಮನೆಗೆ
ಕೈಗೆ ಕೈದುಗಳಿಲ್ಲ ಬಾಯ್ಗೆ ವಾಗ್ಮಿತೆಯಿಲ್ಲ
ಮೈಲಿ ರಕ್ತದ ಬಿಂದುವಿಲ್ಲ ರಾಜ್ಯದ ಭಾರ
ನಿಮ್ಮ ಮೂಳೆಯ ಮೇಲೆ ರಾಜ್ಯಭಾರದ ಸೂತ್ರ
ಪಾತ್ರ ನಿಮಗಿಲ್ಲ ಶ್ರೀಮಂತ ಬೆಕ್ಕುಗಳೆಲ್ಲ
ಸಭೆಸೇರ್ದರಾದಂತೆ ಬಡ ಇಲಿಗಳುದ್ಧಾರ
ಕೊಬ್ಬಿದರು ಕುರಿಗಲ್ಲ ಹಬ್ಬ ಕುರುಬಗೆ ಮಾತ್ರ

'ಬೆಕ್ಕು-ಇಲಿ' ಎಂಬ ಕವನದ ಹೆಸರು ಒಂದು ರೂಪಕವಾಗಿದೆ. ಇಲಿಯನ್ನು ಬೇಟೆಯಾಡಿ ಕೊಲ್ಲುವ ಬೆಕ್ಕಿನಂತೆ ಸಿರಿವಂತರು ದುಡಿಯುವ ಶ್ರಮಜೀವಿಗಳಾದ ಬಡಜನರ ಬದುಕನ್ನು ಹೇಗೆ ಸಂಕಟಕ್ಕೆ ಗುರಿಮಾಡಿದ್ದಾರೆ ಎಂಬುದನ್ನು ಈ ಕವನದಲ್ಲಿ ಹೇಳಲಾಗಿದೆ.

'ಸಿರಿವಂತರು' ಎಂದರೆ ಜಾತಿ ಬಲ, ತೋಳ್ಬಲ, ರಾಜಕೀಯ ಗದ್ದುಗೆಯ ಆಡಳಿತ ಬಲ, ಭೂಮಿಯ ಒಡೆತನದ ಜಮೀನ್ದಾರಿಕೆಯ ಬಲ ಮತ್ತು ಹಣದ ಬಲವುಳ್ಳವರು.

(ಊರು=ಜನವಸತಿಯಿರುವ ನೆಲೆ; ಕೊಳೆ+ಅನ್+ಎಲ್ಲ; ಕೊಳೆ=ಗಲೀಜು/ಕೊಚ್ಚೆ/ಹೊಲಸು; ಅನ್=ಅನ್ನು; ತೊಳೆ=ಶುಚಿ ಮಾಡು/ತೊಡೆದು ಹಾಕು/ತೆಗೆದುಹಾಕು; ಓ=ವ್ಯಕ್ತಿಯು ಮತ್ತೊಬ್ಬನ ಗಮನವನ್ನು ತನ್ನತ್ತ ಸೆಳೆದು ಮಾತನಾಡಿಸುವಾಗ ಬಳಸುವ ಶಬ್ದ/ಏನಪ್ಪ/ಏನಯ್ಯ/ಏನಣ್ಣ; ತೋಟಿ=ಜಾಡಮಾಲಿ;

ಊರಿನ ಕೊಳೆಯನೆಲ್ಲ ತೊಳೆವ ನಿನಗೆಯೆ ತೊಳೆಯೆ ನೀರಿಲ್ಲ ಓ ತೋಟಿ =ಇಂಡಿಯಾ ದೇಶದಲ್ಲಿ ಸಾವಿರಾರು ವರುಶಗಳಿಂದಲೂ ಇರುವ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ ಎಂಬ ನಾಲ್ಕು ವರ್ಣಗಳ ಮತ್ತು ಈ ವರ್ಣಗಳಿಂದ ಕವಲುಗೊಂಡು ಬಳಕೆಗೆ ಬಂದ ನೂರೆಂಟು ಬಗೆಯ ಜಾತಿಗಳ ಕಟ್ಟುಪಾಡುಗಳು ಇದಕ್ಕೆ ಕಾರಣವಾಗಿವೆ.

ಮೇಲು ವರ್ಣದವರು ಮತ್ತು ಮೇಲು ಜಾತಿಯವರು ಊರಿನ ಕೆರೆಕಟ್ಟೆಬಾವಿಗಳ ನೀರನ್ನು ಮುಟ್ಟಲು ಕೆಳಜಾತಿಗೆ ಸೇರಿದ ತೋಟಿಯನ್ನು ಬಿಡುತ್ತಿರಲಿಲ್ಲ. ಊರಿನ ಹಾದಿಬೀದಿಗಳಲ್ಲಿ ಚೆಲ್ಲಾಡಿದ್ದ ಕಸಕಡ್ಡಿಯನ್ನು, ಕೊಳೆತು ನಾರುತ್ತಿರುವ ವಸ್ತುವನ್ನು ಮತ್ತು ಚರಂಡಿಯಲ್ಲಿ ತುಂಬಿರುವ ಕೊಚ್ಚೆಯನ್ನು ತೋಟಿಯು ಹೊರತೆಗೆದು ಶುಚಿಗೊಳಿಸುವಾಗ, ಅವನ ಕಯ್ ಮಯ್ ಎಲ್ಲವೂ ಕೊಳೆಯಾಗುತ್ತಿತ್ತು. ಆದರೆ ಆತ ಅದನ್ನು ತೊಳೆದುಕೊಳ್ಳಲು ಊರಿಂದ ದೂರದಲ್ಲಿ ಮೇಲು ವರ್ಣದವರ ಮತ್ತು ಮೇಲುಜಾತಿಯವರ ಒಡೆತನಕ್ಕೆ ಸೇರಿರದ ನೀರಿನ ತಾಣದತ್ತ ಹೋಗಬೇಕಿತ್ತೇ ಹೊರತು, ಊರಿನ ಒಳಗಡೆ ಆತನಿಗೆ ನೀರು ದೊರೆಯುತ್ತಿರಲಿಲ್ಲ;

ಹಣವಂತ=ಸಿರಿವಂತ; ತೊಟ್ಟಿ=ಮನೆಯ ನಡುವಣ ಜಾಗದಲ್ಲಿ ಮೇಲಿನ ಚಾವಣಿಯಿಲ್ಲದೆ ಗಾಳಿ ಬೆಳಕು ಮಳೆಹನಿಗೆ ತೆರೆದುಕೊಂಡಿರುವ ನಾಲ್ಕು ಮೂಲೆಗಳನ್ನುಳ್ಳ ಚಚ್ಚೌಕವಾದ ಜಾಗ; ಮಲಗು=ನಿದ್ರಿಸು; ಹಟ್ಟಿ=ಮನೆ; ಬಡಹಟ್ಟಿ=ಗುಡಿಸಲು; ಗತಿ+ಇಲ್ಲ; ಗತಿ=ಆಶ್ರಯ; ಕೂಲಿಗಾರ=ದಿನ ಬೆಳಗಾದರೆ ಉಳ್ಳವರ ಬಳಿಯಲ್ಲಿ ದುಡಿಮೆಯನ್ನು ಮಾಡಿ ಅಂದಂದಿನ ಹೊಟ್ಟೆಪಾಡನ್ನು ನೀಗಿಸಿಕೊಳ್ಳವವನು;

ಹಣವಂತರಿಗೆ ತೊಟ್ಟಿ ಮನೆಗಳನು ಕಟ್ಟುವ ನಿನಗೆ ಮಲಗೆ ಬಡಹಟ್ಟಿ ಗತಿಯಿಲ್ಲ ಓ ಕೂಲಿಗಾರ=ಸಿರಿವಂತರಿಗೆ ದೊಡ್ಡದೊಡ್ಡ ಮನೆಗಳನ್ನು ಕಟ್ಟಿಕೊಡುವ ಕೂಲಿಯವನಿಗೆ ನೆಮ್ಮದಿಯಿಂದ ಬದುಕಲು ಬೇಕಾದ ಸ್ವಂತ ಮನೆಯಿರುವುದಿಲ್ಲ. ಏಕೆಂದರೆ ನಮ್ಮ ದೇಶದಲ್ಲಿ ಹಣಕಾಸಿನ ವ್ಯವಹಾರವು ಸಿರಿವಂತರು ಹೆಚ್ಚು ಹೆಚ್ಚು ಹಣವನ್ನು ಗೋರಿ ಗುಡ್ಡೆ ಹಾಕಿಕೊಳ್ಳುವಂತಹ ರೀತಿಯಲ್ಲಿ ಮತ್ತು ದೇಹವನ್ನು ದಂಡಿಸಿ ದುಡಿಯುವ ಶ್ರಮಜೀವಿಗಳಾದ ಕೂಲಿಕಾರರು ಅತಿ ಕಡಿಮೆ ಹಣವನ್ನು ಪಡೆಯುವಂತಹ ರೀತಿಯಲ್ಲಿ ರಚನೆಗೊಂಡಿದೆ. ಆದ್ದರಿಂದ ಕೂಲಿಕಾರರಲ್ಲಿ ಬಹುತೇಕ ಮಂದಿ ಜೀವನವಿಡೀ ದುಡಿದರೂ ತಮ್ಮದೇ ಆದ ಒಂದು ಸೂರನ್ನು ಹೊಂದಲಾಗದೆ ನರಳುತ್ತಿರುತ್ತಾರೆ;

ಪೈರು=ಹೊಲಗದ್ದೆಗಳಲ್ಲಿ ಬೆಳೆಯುವ ಬೆಳೆ; ಲೋಕ=ಜಗತ್ತು/ಜನಸಮುದಾಯ; ಕೂಳು=ಅನ್ನ/ಉಣಿಸು ತಿನಸು/ಆಹಾರ; ಆದರೆ+ಉಣ್ಣಲು; ಉಣ್ಣು=ತಿನ್ನು/ಸೇವಿಸು; ಕಾಳು+ಇಲ್ಲ; ಕಾಳು=ದವಸ.

ಪೈರನು ಬೆಳೆಯೆ ನೀನು ಲೋಕಕೆ ಕೂಳು ಆದರುಣ್ಣಲು ನಿನಗೆ ಕಾಳಿಲ್ಲ ಓ ರೈತ=ಹೊಲಗದ್ದೆತೋಟಗಳಲ್ಲಿ ದುಡಿಯುವ ಬೇಸಾಯಗಾರರಲ್ಲಿ ಹೆಚ್ಚಿನವರು ಭೂಮಿಯ ಒಡೆತನವಿಲ್ಲದ ಕೂಲಿಯವರಾಗಿರುತ್ತಾರೆ. ಇಂತಹ ಕೂಲಿಕಾರರ ಬೆವರಿನ ದುಡಿಮೆಯಿಂದ ಬೆಳೆದ ಬೆಳೆಯಲ್ಲಿ ಬಹುದೊಡ್ಡ ಪಾಲು ಜಮೀನ್ದಾರನ ಮನೆಯ ಕಣಜವನ್ನು ಸೇರುತ್ತದೆ. ಜಮೀನ್ದಾರಿಕೆಯ ಒಡೆತನದಲ್ಲಿ ಕೂಲಿಯಾಳಾಗಿ ದುಡಿದ ಬೇಸಾಯಗಾರನು ಹಸಿವಿನ ಸಂಕಟದಿಂದ ಜೀವನದ ಉದ್ದಕ್ಕೂ ನರಳುತ್ತಿರುತ್ತಾನೆ;

ಧನಿಕ=ಸಿರಿವಂತ/ಹಣವಂತ; ಬುತ್ತಿ=ದೂರದ ಊರಿಗೆ ಹೋಗುವವರು ಹಾದಿಯ ನಡುವೆ ತಂಗಿದಾಗ ಉಣಲೆಂದು ಜತೆಯಲ್ಲಿ ತೆಗೆದುಕೊಂಡು ಹೋಗುವ ತಿನಸು ಉಣಿಸಿನ ಗಂಟು; ತೇಗು=ಹೊಟ್ಟೆಯ ತುಂಬಾ ಉಂಡ ನಂತರ, ಕೆಲವೊಮ್ಮೆ ಗಂಟಲಿಂದ ಹೊರಹೊಮ್ಮುವ ದನಿ; ಬಡಜನ=ಉಣಲು ಅನ್ನವಿಲ್ಲದೆ, ತೊಡಲು ಬಟ್ಟೆಯಿಲ್ಲದೆ, ವಾಸಿಸಲು ಮನೆಯಿಲ್ಲದೆ ಹಸಿವು ಮತ್ತು ಅಪಮಾನದಿಂದ ನರಳುತ್ತಿರುವ ಮಂದಿ;

ಹೊಟ್ಟೆಗೆ ಬೆನ್ನು ಹತ್ತಿ=ಇದೊಂದು ನುಡಿಗಟ್ಟು, ಹಸಿವಿನ ಸಂಕಟದಿಂದ ಬಹುಕಾಲ ನರಳುತ್ತಿರುವ ವ್ಯಕ್ತಿಯ ಹೊಟ್ಟೆಯ ಕರುಳುಗಳೆಲ್ಲ ಸುಂಡುಹೋದಂತಾಗಿ ಹೊಟ್ಟೆಯು ತೆಳ್ಳಗಾಗುತ್ತದೆ. ಹೊಟ್ಟೆ ಮತ್ತು ಬೆನ್ನು ಒಂದೇ ಏನೋ ಎನ್ನುವಂತೆ ಕಾಣುತ್ತದೆ. ವ್ಯಕ್ತಿಯು ತುಂಬ ಹಸಿವಿನಿಂದ ನರಳುತ್ತ ಜೀವನ ಸಾಗಿಸುತ್ತಿರುವುದನ್ನು ಈ ನುಡಿಗಟ್ಟು ಸೂಚಿಸುತ್ತದೆ;

ಹೊರಳುತ್ತ+ಉರುಳುತ+ಇರುವರು; ಹೊರಳು=ಪಕ್ಕಕ್ಕೆ ತಿರುಗು; ಉರುಳು=ಕೆಳಕ್ಕೆ ಬೀಳು; ಜವ=ಯಮ; ಜವನ ಮನೆ=ಸಾವಿನ ಮನೆ/ಯಮಲೋಕ. ಸತ್ತವರು ಯಮ ಲೋಕಕ್ಕೆ ಹೋಗುತ್ತಾರೆ ಎಂಬ ಕಲ್ಪನೆಯು ಜನಮನದಲ್ಲಿದೆ–

ತಿಂದು ಧನಿಕರ ಬುತ್ತಿ ತೇಗುತಿದೆ ಬಡಜನರೊ ಹೊಟ್ಟೆ ಬೆನ್ನಿಗೆ ಹತ್ತಿ ನರಳಿ ಹೊರಳುತ್ತುರುಳುತಿರುವರು ಜವನ ಮನೆಗೆ=ಕೋಟಿಗಟ್ಟಲೆ ಸಂಪತ್ತುಳ್ಳ ಸಿರಿವಂತರು ಉಂಡು ತಿಂದು ತೇಗಿ ಮೆರೆಯುತ್ತಿದ್ದರೆ, ಅಂತಹ ಸಂಪತ್ತೆಲ್ಲವನ್ನೂ ತಮ್ಮ ದುಡಿಮೆಯಿಂದ ನಾಡಿಗೆ ನೀಡಿದ ಬಡಜನತೆಯು ಹಸಿವಿನ ಸಂಕಟದಲ್ಲಿ ಬೆಂದು ನೊಂದು ಹೊರಳಾಡಿ ನರಳುತ್ತ ಸಾವನ್ನಪ್ಪುತ್ತಿದ್ದಾರೆ. ದೇಶದಲ್ಲಿರುವ ಜನರೆಲ್ಲರ ನೆಮ್ಮದಿಯ ಜೀವನಕ್ಕೆ ಆಗಿ ಮಿಗುವ ಮೊತ್ತದ ಸಂಪತ್ತು ನಮ್ಮ ದೇಶದಲ್ಲಿದ್ದರೂ, ನಾಡಿನ ಜನರೆಲ್ಲರಿಗೂ ಸಮಾನವಾಗಿ ಸಂಪತ್ತು ಹಂಚಿಕೆಯಾಗದಂತಹ ಸಾಮಾಜಿಕ ರಚನೆ ಮತ್ತು ಹಣಕಾಸಿನ ವ್ಯವಸ್ಥೆಯು ಇರುವುದರಿಂದ ದುಡಿಯುವ ಶ್ರಮಜೀವಿಗಳು ಅಕಾಲ ಮರಣಕ್ಕೆ ತುತ್ತಾಗುತ್ತಿದ್ದಾರೆ;

ಕೈದುಗಳ್+ಇಲ್ಲ; ಕೈದು=ಹತಾರ/ಶಸ್ತ್ರ; ವಾಗ್ಮಿತೆ+ಇಲ್ಲ; ಬಾಯ್ಗೆ=ಬಾಯಿಗೆ; ವಾಗ್ಮಿತೆ=ಚೆನ್ನಾಗಿ ಮಾತನಾಡುವ ಕುಶಲತೆ/ಮಾತುಗಾರಿಕೆ; ಮೈಲಿ=ದೇಹದಲ್ಲಿ; ಬಿಂದು+ಇಲ್ಲ; ಬಿಂದು=ಒಂದು ಹನಿ/ತೊಟ್ಟು;

ಕೈಗೆ ಕೈದುಗಳಿಲ್ಲ ಬಾಯ್ಗೆ ವಾಗ್ಮಿತೆಯಿಲ್ಲ ಮೈಲಿ ರಕ್ತದ ಬಿಂದುವಿಲ್ಲ=ಜೀವನಕ್ಕೆ ಅಗತ್ಯವಾದ ಅನ್ನ ಬಟ್ಟೆ ವಸತಿ ವಿದ್ಯೆ ಆರೋಗ್ಯದಿಂದ ವಂಚಿತರಾಗಿ ಕಡುಬಡತನದ ಬೇಗೆಯಲ್ಲಿ ಬೇಯುತ್ತಿರುವ ದುಡಿಯುವ ಶ್ರಮಜೀವಿಗಳೆಲ್ಲ ಒಂದಾಗಿ ಜತೆಗೂಡಿ ತಮ್ಮನ್ನು ಇಂತಹ ಸಂಕಟಕ್ಕೆ ಗುರಿಮಾಡಿರುವ ವ್ಯವಸ್ಥೆ ಮತ್ತು ಸಿರಿವಂತರ ಎದುರಾಗಿ ಹೋರಾಡಲು ಬೇಕಾದ ಶಕ್ತಿಯು ಬಡವರ ದೇಹದಲ್ಲಿಲ್ಲ; ಎದುರಾಳಿಗಳನ್ನು ಮಾತಿನಲ್ಲಿ

ಮಣಿಸಬಲ್ಲ ಚಾಕಚಕ್ಯತೆಯು ಬಡವರಿಗೆ ಗೊತ್ತಿಲ್ಲ; ಹಗೆಗಳನ್ನು ಸದೆಬಡಿಯಲು ಬಡವರ ಬಳಿ ಯಾವುದೇ ಹತಾರಗಳಿಲ್ಲ;

ರಾಜ್ಯ=ರಾಜನ ಇಲ್ಲವೇ ಆಡಳಿತದ ಗದ್ದುಗೆಯಲ್ಲಿರುವವರ ನಿಯಂತ್ರಣಕ್ಕೆ ಒಳಪಟ್ಟ ಪ್ರದೇಶ; ಭಾರ=ಹೊರೆ/ಹೊಣೆಗಾರಿಕೆ/ಜವಾಬ್ದಾರಿ; ರಾಜ್ಯದ ಭಾರ=ರಾಜ್ಯದ ಜನಸಮುದಾಯದ ಹಿತವನ್ನು ಕಾಪಾಡುವ ಹೊಣೆಗಾರಿಕೆ;

ರಾಜ್ಯದ ಭಾರ ನಿಮ್ಮ ಮೂಳೆಯ ಮೇಲೆ=ರಾಜ್ಯದ ಜನಸಮುದಾಯದ ನೆಮ್ಮದಿಯ ಜೀವನಕ್ಕೆ ಬೇಕಾದ ಕಾಳು ಕಡ್ಡಿ, ಸೊಪ್ಪುಸದೆ, ದವಸಗಳನ್ನು ಬೆಳೆಯುವ ಮತ್ತು ಸಮಾಜಕ್ಕೆ ಅಗತ್ಯವಾದುದೆಲ್ಲವನ್ನೂ ನಿರ್ಮಿಸುವ ಹೊರೆಯೆಲ್ಲವೂ ಕೋಟಿಗಟ್ಟಲೆ ಶ್ರಮಜೀವಿಗಳ ಮಯ್ ಮನಗಳನ್ನೇ ಅವಲಂಬಿಸಿದೆ; ಹೆದ್ದಾರಿಗಳು, ಅಣೆಕಟ್ಟೆಗಳು, ದೊಡ್ಡ ದೊಡ್ಡ ಕಟ್ಟಡಗಳು ಮೊದಲುಗೊಂಡು ನಾಡನ್ನು ಕಟ್ಟುವ ಎಲ್ಲ ಬಗೆಯ ಕೆಲಸಗಳ ಹೊರೆಯು ಬಡಜನರ ಮೇಲೆಯೆ ಬಿದ್ದಿದೆ;

ರಾಜ್ಯಭಾರ=ರಾಜ್ಯವನ್ನು ಆಳುವುದು; ಸೂತ್ರ=ಯಾವುದೇ ವಸ್ತುವಿಗೆ ನೂಲನ್ನು ಪೋಣಿಸಿ, ಅದನ್ನು ನಮ್ಮ ಇಚ್ಚೆಗೆ ತಕ್ಕಂತೆ ಆಡಿಸಲು ಇಲ್ಲವೇ ನಿಯಂತ್ರಿಸಲು ಬಳಸುವುದು; ಪಾತ್ರ=ಯಾವುದೇ ಒಂದು ಕೆಲಸವನ್ನು ಮಾಡುವಾಗ ವ್ಯಕ್ತಿಯ ತಾನು ಅದರಲ್ಲಿ ಸಕ್ರಿಯವಾಗಿ ತೊಡಗುವುದು; ಸೂತ್ರಪಾತ್ರ=ಆಡಳಿತವನ್ನು ಮಾಡುವ ಅವಕಾಶ ಮತ್ತು ಹೊಣೆಗಾರಿಕೆ; ನಿಮಗೆ+ಇಲ್ಲ;

ರಾಜ್ಯಭಾರದ ಸೂತ್ರ ಪಾತ್ರ ನಿಮಗಿಲ್ಲ=ರಾಜ್ಯವನ್ನು ಆಳುವ ಅಂಗಗಳಾದ ಶಾಸಕಾಂಗ, ಕಾರ್ಯಾಂಗ ಮತ್ತು ನ್ಯಾಯಾಂಗಗಳಲ್ಲಿ ಆಡಳಿತವನ್ನು ಮಾಡುವ ಅವಕಾಶ ಮತ್ತು ಹೊಣೆಗಾರಿಕೆಯು ದುಡಿಯುವ ಶ್ರಮಜೀವಿಗಳಾದ ಬಡಜನತೆಯ ಪಾಲಿಗೆ ಇಲ್ಲ;

ಶ್ರೀಮಂತ=ಸಿರಿವಂತ/ಹಣವಂತ; ಬೆಕ್ಕುಗಳ್+ಎಲ್ಲ;

ಶ್ರೀಮಂತ ಬೆಕ್ಕುಗಳು=ಇದೊಂದು ರೂಪಕ. ಜಾತಿ ಬಲ, ತೋಳ್ಬಲ, ರಾಜಕೀಯ ಗದ್ದುಗೆಯ ಆಡಳಿತ ಬಲ, ಭೂಮಿಯ ಒಡೆತನದ ಜಮೀನ್ದಾರಿಕೆಯ ಬಲ ಮತ್ತು ಹಣದ ಬಲವುಳ್ಳ ವ್ಯಕ್ತಿಗಳು;

ಸಭೆ+ಸೇರ್ದರೆ+ಆದ+ಅಂತೆ; ಸಭೆ ಸೇರ್ದರೆ=ಒಟ್ಟಾಗಿ ಜತೆಗೂಡಿ ಮಾತನಾಡತೊಡಗಿದರೆ/ಚಿಂತಿಸತೊಡಗಿದರೆ/ಯೋಜನೆಗಳನ್ನು ಹಾಕತೊಡಗಿದರೆ; ಆದಂತೆ=ಆದ ಹಾಗೆಯೇ ಎಂಬ ವ್ಯಂಗ್ಯದ ದನಿ/ನಿಶ್ಚಯವಾಗಿ ಆಗುವುದಿಲ್ಲ; ಇಲಿಗಳ+ಉದ್ಧಾರ;

ಬಡ ಇಲಿಗಳು=ಇದೊಂದು ರೂಪಕ. ಜಾತಿಬಲವಿಲ್ಲದ, ರಾಜಕೀಯ ಗದ್ದುಗೆಯ ಆಡಳಿತ ಬಲವಿಲ್ಲದ, ಭೂಮಿ ಒಡೆತನವಿಲ್ಲದ ಮತ್ತು ಸಂಪತ್ತಿಲ್ಲದ ದುಡಿಯುವ ಶ್ರಮಜೀವಿಗಳಾದ ಬಡಜನರು;

ಉದ್ಧಾರ=ಏಳಿಗೆ;

ಶ್ರೀಮಂತ ಬೆಕ್ಕುಗಳೆಲ್ಲ ಸಭೆಸೇರ್ದರಾದಂತೆ ಬಡ ಇಲಿಗಳುದ್ಧಾರ=ಯಾರು ನಾಡಿನ ಸಂಪತ್ತನ್ನು ಲೂಟಿ ಮಾಡುತ್ತಿದ್ದಾರೆಯೋ; ಯಾರು ಜಾತಿ ಮತ ದೇವರ ಹೆಸರಿನಲ್ಲಿ ಜನಸಮುದಾಯಗಳಲ್ಲಿ ಪರಸ್ಪರ ಅಪನಂಬಿಕೆ, ಅಸೂಯೆ, ಹಗೆತನವನ್ನುಂಟು ಮಾಡಿ ಸಮಾಜದ ನೆಮ್ಮದಿಯ ಬದುಕನ್ನು ಹಾಳು ಮಾಡುತ್ತಿದ್ದಾರೆಯೋ; ಯಾರು ಬಡಜನರ ದುಡಿಮೆಯಿಂದ ಉತ್ಪನ್ನವಾದ ಸಂಪತ್ತು ಎಲ್ಲರಿಗೂ ಸಮಾನವಾಗಿ ಹಂಚಿಕೆಯಾಗದಂತೆ ತಡೆಯೊಡ್ಡುತ್ತಿದ್ದಾರೆಯೋ ಅಂತಹ ವ್ಯಕ್ತಿಗಳು ಜತೆಗೂಡಿ ನಡೆಸುವ ಚಿಂತನೆಯಾಗಲಿ ಇಲ್ಲವೇ ನಡೆಸುವ ಆಡಳಿತವಾಗಲಿ ಎಂದೆಂದಿಗೂ ಬಡಜನರ ಬದುಕಿನ ಬವಣೆಗಳನ್ನು ನಿವಾರಿಸಿ, ಅವರಿಗೆ ಒಳ್ಳೆಯ ಬದುಕನ್ನು ನೀಡುವುದಿಲ್ಲ ಎಂಬ ವ್ಯಂಗ್ಯದ ದನಿಯಲ್ಲಿ ಈ ನುಡಿಗಳು ಬಳಕೆಯಾಗಿವೆ;

ಕೊಬ್ಬು=ದಪ್ಪನಾಗುವುದು/ಬಲಿಯುವುದು/ದೇಹದಲ್ಲಿ ನೆಣ ಹೆಚ್ಚಾಗುವುದು; ಹಬ್ಬ=ಉತ್ಸವ/ಆನಂದ; ಕುರುಬ=ಕುರಿಯನ್ನು ಮೇಯಿಸುವವನು;

ಕೊಬ್ಬಿದರು ಕುರಿಗಲ್ಲ ಹಬ್ಬ ಕುರುಬಗೆ ಮಾತ್ರ=‘ಕುರಿ ಕೊಬ್ಬಿದಷ್ಟು ಕುರುಬನಿಗೆ ಲಾಭ’ ಎಂಬ ಗಾದೆಯು ಇಲ್ಲಿ ಒಂದು ರೂಪಕವಾಗಿ ಬಳಕೆಯಾಗಿದೆ. ದುಡಿಯುವ ಶ್ರಮಜೀವಿಗಳಾದ ಬಡಜನತೆಗೆ ಅನ್ನ, ಬಟ್ಟೆ, ವಸತಿ, ವಿದ್ಯೆ ಮತ್ತು ಆರೋಗ್ಯ ದೊರಕುವಂತಾಗಬೇಕೆಂದು ಸರ್ಕಾರದ ವತಿಯಿಂದ ಕಯ್ಗೊಳ್ಳುವ ದೊಡ್ಡ ದೊಡ್ಡ ಯೋಜನೆಗಳ ಕೋಟಿಗಟ್ಟಲೆ ಹಣದಲ್ಲಿ ಬಹುದೊಡ್ಡ ಮೊತ್ತವನ್ನು ನಾಡನ್ನಾಳುವ ಗದ್ದುಗೆಯಲ್ಲಿ ಕುಳಿತಿರುವ ವ್ಯಕ್ತಿಗಳೇ ಲಪಟಾಯಿಸಿ, ಇನ್ನೂ ಹೆಚ್ಚಿನ ಸಿರಿವಂತರಾಗಿ ಮೆರೆಯತೊಡಗುತ್ತಾರೆ. ಶ್ರಮಜೀವಿಗಳಾದ ಬಡವರ ಪಾಲಿಗೆ ದೊರೆಯಬೇಕಾಗಿದ್ದ ಸಂಪತ್ತು ಕೊನೆಗೂ ಸಿರಿವಂತರಿಗೆ ಸೇರುತ್ತದೆ ಎಂಬ ತಿರುಳಿನಲ್ಲಿ ಈ ನುಡಿಗಳು ಬಳಕೆಯಾಗಿವೆ.)

❖❖

೧೪. ಪೊದೆಯ ಹಕ್ಕಿ..... ಎದೆಯ ಹಕ್ಕಿ

ಟುವ್ವಿ ಟುವ್ವಿ ಟುವ್ವಿ ಟುವ್ವಿ
ಎಂದು ಹಕ್ಕಿ ಕೂಗಿತು
ಅದರ ಹಾಡು ಬಂದು ಎನ್ನ
ಎದೆಯ ಗೂಡ ತಾಗಿತು

ಟುವ್ವಿ ಟುವ್ವಿ ಟುವ್ವಿ ಟುವ್ವಿ
ಎಂದು ಎನ್ನ ಎದೆಯೊಳೊಂದು
ಹಕ್ಕಿ ಕೂಗತೊಡಗಿತು
ಆಗ ಎನ್ನ ಎದೆಯೊಳೊಂದು
ಹಕ್ಕಿ ಇರುವುದೆಂಬುದನ್ನು
ನಾನು ಗೊತ್ತು ಹಿಡಿದೆನು

ಟುವ್ವಿ ಟುವ್ವಿ ಟುವ್ವಿ ಟುವ್ವಿ
ಎಂದು ಹಕ್ಕಿ ಹಾಡಿತು
ಎದೆಯ ಹಕ್ಕಿ ಟುವ್ವಿ ಟುವ್ವಿ
ಎನ್ನುತದನು ಕೂಡಿತು

ಪೊದೆಯ ಮೇಲೆ ಇದ್ದ ಹಕ್ಕಿ
ಮೋಹಿಸೆದೆಯ ಹಕ್ಕಿಯ
ಟುವ್ವಿ ಟುವ್ವಿ ಟುವ್ವಿ ಟುವ್ವಿ
ಎಂದು ಮತ್ತೆ ಹಾಡಿತು

ಎದೆಯ ಹಕ್ಕಿ ಟುವ್ವಿ ಎಂದು
ಮತ್ತೆ ಅದನು ಕೂಡಿತು
ಒಂದು ಬೇಡಿತೊಂದು ಕಾಡಿ
ತೊಂದು ಸುಮ್ಮನಾಡಿತು

ಎದೆಯ ದನಿಯ ಪೊದೆಯ ಉಲಿಯ
ಆಲಿಸುತ್ತ ನಲಿದೆನು
ಎದೆಯ ಹಕ್ಕಿಗಾಗಿ ಪೊದೆಯ
ಹಕ್ಕಿಯನ್ನು ಒಲಿದೆನು.

ಹಕ್ಕಿಯ ಕೊರಳಿನಿಂದ ಹೊರಹೊಮ್ಮುತ್ತಿರುವ ಇಂಪಾದ ದನಿಯನ್ನು ಕೇಳಕೇಳುತ್ತಿದ್ದಂತೆಯೇ ಕವಿಯ ಮನದಲ್ಲಿ ಉಂಟಾದ ಒಳಮಿಡಿತಗಳನ್ನು ಈ ಕವನದಲ್ಲಿ ಹೇಳಲಾಗಿದೆ.

(ಪೊದೆ=ದಟ್ಟವಾಗಿ ಬೆಳೆದು ಒಂದಕ್ಕೊಂದು ಹೆಣೆದುಕೊಂಡಂತಿರುವ ಮರಗಿಡಬಳ್ಳಿಗಳ ಗುಂಪು; ಹಕ್ಕಿ=ರೆಕ್ಕೆಪುಕ್ಕಗಳನ್ನು ಹೊಂದಿ ಆಕಾಶದಲ್ಲಿ ಹಾರಾಡಬಲ್ಲ ಒಂದು ಬಗೆಯ ಜೀವಿ;

ಪೊದೆಯ ಹಕ್ಕಿ=ನಿಸರ್ಗದ ಮಡಲಲ್ಲಿ ಪೊದೆಯೊಂದರ ಮೇಲೆ ಕುಳಿತಿರುವ ಹಕ್ಕಿ; ಎದೆ=ಮನಸ್ಸು;

ಎದೆಯ ಹಕ್ಕಿ='ಕವಿಯ ಮನಸ್ಸು' ಎಂಬ ರೂಪಕದ ತಿರುಳಿನಲ್ಲಿ ಬಳಕೆಯಾಗಿದೆ;

ಟುವ್ವಿ ಟುವ್ವಿ ಟುವ್ವಿ ಟುವ್ವಿ=ಹಕ್ಕಿಯ ಕೊರಳಿನಿಂದ ಹೊರಹೊಮ್ಮುತ್ತಿರುವ ದನಿಯ ನಾದ ಮತ್ತು ಲಯದ ಸ್ವರೂಪವನ್ನು ಸೂಚಿಸಲು ಈ ಪದಗಳನ್ನು ಬಳಸಲಾಗಿದೆ; ಕೂಗು=ದನಿ ಮಾಡು; ಹಾಡು=ನುಡಿ ರಚನೆಯನ್ನು ರಾಗ ಮತ್ತು ಲಯಕ್ಕೆ ಅನುಗುಣವಾಗಿ ಹೇಳುವುದು; ಅದರ ಹಾಡು=ಹಕ್ಕಿಯ ಕೊರಳಿನಿಂದ ಹೊರಹೊಮ್ಮುತ್ತಿರುವ ದನಿಯು ಇಂಪಾದ ಹಾಡಿನ ರೂಪದಲ್ಲಿ ಕೇಳಿಬರುತ್ತಿದೆ; ಎನ್ನ=ನನ್ನ; ಗೂಡು=ನೆಲೆ; ತಾಗು=ಮುಟ್ಟು;

ಎನ್ನ ಎದೆಯ ಗೂಡ ತಾಗಿತು=ನನ್ನ ಮನಸ್ಸನ್ನು ಮುಟ್ಟಿತು; ಎದೆ+ಒಳ್+ಒಂದು;

ಎನ್ನ ಎದೆಯೊಳೊಂದು ಹಕ್ಕಿ=ಕವಿಯ ಮನಸ್ಸಿನಲ್ಲಿ ಉಂಟಾಗುವ ಒಳಮಿಡಿತ ಗಳನ್ನು ಸೂಚಿಸಲು ಈ ನುಡಿಗಳು ರೂಪಕವಾಗಿ ಬಳಕೆಯಾಗಿವೆ;

ಎನ್ನ ಎದೆಯೊಳೊಂದು ಹಕ್ಕಿ ಕೂಗತೊಡಗಿತು=ಪೊದೆಯ ಹಕ್ಕಿಯ ಹಾಡಿನ ದನಿಯನ್ನು ಕೇಳುತ್ತಿದ್ದಂತೆಯೇ, ಅದರಿಂದ ಪ್ರೇರಣೆಗೊಂಡು ಕವಿಯ ಮನದಲ್ಲಿ ಬಹುಬಗೆಯ ಒಳಮಿಡಿತಗಳು ಮೂಡತೊಡಗಿದವು; ಆಗ=ಹಕ್ಕಿಯ ದನಿಯನ್ನು ಕೇಳುತ್ತಿರುವ ಗಳಿಗೆಯಲ್ಲಿ; ಇರುವುದು+ಎಂಬುದನ್ನು; ಗೊತ್ತು ಹಿಡಿದೆನು= ಅರಿತುಕೊಂಡೆನು;

ಎನ್ನ ಎದೆಯೊಳೊಂದು ಹಕ್ಕಿ ಇರುವುದೆಂಬುದನ್ನು ನಾನು ಗೊತ್ತು ಹಿಡಿದೆನು =ನಿಸರ್ಗದಲ್ಲಿನ ನೋಟ ಮತ್ತು ತನ್ನ ಜೀವನದ ಪ್ರಸಂಗಗಳಿಂದ ಉಂಟಾದ ಒಳಮಿಡಿತಗಳನ್ನು ಹೊರಹಾಕಲು ಪೊದೆಯ ಹಕ್ಕಿಯು ಹೇಗೆ ದನಿ ಮಾಡುತ್ತಿದೆಯೋ

ಅಂತೆಯೇ ಮಾನವ ಜೀವಿಯಾದ ನಾನು ಕೂಡ ಜಗತ್ತಿನಲ್ಲಿ ಕಾಣುವ ನೋಟಗಳನ್ನು ಮತ್ತು ನನ್ನ ಬದುಕಿನ ಒಳಮಿಡಿತಗಳನ್ನು ನುಡಿಗಳ ಮೂಲಕ ಹೇಳಿಕೊಳ್ಳಬಲ್ಲೆನು ಎಂಬುದನ್ನು ಅರಿತುಕೊಂಡೆನು;

ಎದೆಯ ಹಕ್ಕಿ=ಕವಿಯ ಮನಸ್ಸು; ಎನ್ನುತ+ಅದನು; ಅದನು=ಹಕ್ಕಿಯ ಹಾಡನ್ನು; ಕೂಡು=ಸೇರು;

ಟುವ್ವಿ ಟುವ್ವಿ ಟುವ್ವಿ ಟುವ್ವಿ ಎಂದು ಹಕ್ಕಿ ಹಾಡಿತು ಎದೆಯ ಹಕ್ಕಿ ಟುವ್ವಿ ಟುವ್ವಿ ಎನ್ನುತದನು ಕೂಡಿತು=ಪೊದೆಯ ಹಕ್ಕಿಯ ಹಾಡಿನ ಜತೆ ಕವಿಯ ಮನದ ಹಾಡು ಜತೆಗೂಡಿತು;

ಮೋಹಿಸಿ+ಎದೆಯ; ಮೋಹ=ಒಲವು/ಮನಸೋಲುವುದು; ಮೋಹಿಸಿ= ಮೋಹಗೊಂಡು; ಮತ್ತೆ=ಇನ್ನೊಮ್ಮೆ;

ಪೊದೆಯ ಮೇಲೆ ಇದ್ದ ಹಕ್ಕಿ ಮೋಹಿಸೆದೆಯ ಹಕ್ಕಿಯ ಟುವ್ವಿ ಟುವ್ವಿ ಟುವ್ವಿ ಟುವ್ವಿ ಎಂದು ಮತ್ತೆ ಹಾಡಿತು=ಇದೊಂದು ಕವಿ ಕಲ್ಪನೆ. ಕವಿಯ ಮನದ ಒಳಮಿಡಿತಗಳ ದನಿಯನ್ನು ಆಲಿಸಿ ಮೋಹಗೊಂಡ ಪೊದೆಯ ಹಕ್ಕಿಯು ಕವಿಯ ಮನದ ಹಕ್ಕಿಯೊಡನೆ ಒಲವಿನಿಂದ ಜತೆಗೂಡಿ ಟುವ್ವಿ ಟುವ್ವಿ ಎಂದು ಹಾಡತೊಡಗಿತು;

ಎದೆಯ ಹಕ್ಕಿ ಟುವ್ವಿ ಎಂದು ಮತ್ತೆ ಅದನು ಕೂಡಿತು=ಈಗ ಪೊದೆಯ ಹಕ್ಕಿ ಮತ್ತು ಕವಿ ಮನದ ಹಕ್ಕಿ ಜತೆಗೂಡಿ ಹಾಡತೊಡಗಿದವು;

ಬೇಡಿತು+ಒಂದು; ಬೇಡು=ಯಾಚಿಸು/ಕೇಳು; ಕಾಡಿತು+ಒಂದು; ಕಾಡು= ಬಯಸಿದ್ದನ್ನು ಪಡೆಯಲೇಬೇಕೆಂಬ ಹಂಬಲಕ್ಕೆ ಒಳಗಾಗುವುದು; ಸುಮ್ಮನೆ+ಆಡಿತು;

ಒಂದು ಬೇಡಿತೊಂದು ಕಾಡಿತೊಂದು ಸುಮ್ಮನಾಡಿತು=ಕವಿಯ ಮನಸ್ಸು ಪೊದೆಯ ಹಕ್ಕಿಯಂತೆಯೇ ತಾನೂ ಹಾಡಬೇಕೆಂದು ಹಂಬಲಿಸುತ್ತಿದೆ; ಎದೆಯ ದನಿ=ಕವಿಯ ಮನಸ್ಸಿನಲ್ಲಿ ತುಡಿಯುತ್ತಿರುವ ಒಳಮಿಡಿತ; ಉಲಿ=ದನಿ/ಕೂಗು; ಪೊದೆಯ ಉಲಿ=ಪೊದೆಯ ಹಕ್ಕಿಯ ಹಾಡು; ಆಲಿಸು=ಮನವಿಟ್ಟು ಕೇಳು/ತಲ್ಲೀನನಾಗಿ ಕೇಳುವುದು; ನಲಿ=ಆನಂದಿಸು;

ಎದೆಯ ದನಿಯ ಪೊದೆಯ ಉಲಿಯ ಆಲಿಸುತ್ತ ನಲಿದೆನು=ಈ ಸನ್ನಿವೇಶದಲ್ಲಿ ಕವಿಯು ತನ್ನ ಮನದಲ್ಲಿ ಉಂಟಾದ ಒಳಮಿಡಿತಗಳನ್ನು ಮತ್ತು ಪೊದೆಯ ಹಕ್ಕಿಯ ದನಿಯನ್ನು ಕೇಳುತ್ತ ಆನಂದಗೊಂಡನು;

ಒಲಿ=ಮೆಚ್ಚು/ಬಯಸು/ಮೋಹಗೊಳ್ಳು;

ಎದೆಯ ಹಕ್ಕಿಗಾಗಿ ಪೊದೆಯ ಹಕ್ಕಿಯನ್ನು ಒಲಿದೆನು=ಹಕ್ಕಿಯಂತೆಯೇ ಹಾಡುತ್ತ ನನ್ನ ಮನದೊಳಗಿನ ಒಳಮಿಡಿತಗಳನ್ನು ನುಡಿಯ ರೂಪದಲ್ಲಿ ಹೊರಹೊಮ್ಮಿಸಬೇಕೆಂಬ ಬಯಕೆಯಿಂದ ಪೊದೆಯ ಹಕ್ಕಿಯನ್ನು ಮೆಚ್ಚಿಕೊಂಡೆನು.)

❖❖

೧೫ ಸರ್ವಾಧಿಕಾರಿ

ಹತ್ತಿಯಾಯ್ತು ಹುಲಿಯ ಬೆನ್ನು
ಮತ್ತೆ ಇಳಿವುದೆಂತು ಇನ್ನು
ಇಲ್ಲಗೈವುದೆನ್ನ ತಿಂದು
ಬಂದುದೆಲ್ಲ ಬರಲಿ ಎಂದು
ಕೊಂದು ಕೊಂದು ನಡೆವೆ ಮುಂದು.

ಒಂದು ನಾಡಿನ ಆಡಳಿತ ಸೂತ್ರವನ್ನು ತನ್ನ ಇಚ್ಛೆಗೆ ತಕ್ಕಂತೆ ಮಣಿಸಿ ವಂಚನೆ, ಹಿಂಸೆ ಮತ್ತು ದಬ್ಬಾಳಿಕೆಯಿಂದ ಆಡಳಿತವನ್ನು ನಡೆಸುವ ಸರ್ವಾಧಿಕಾರಿಯ ಮನದ ಒಳಮಿಡಿತಗಳನ್ನು ಈ ಕವನದಲ್ಲಿ 'ಹುಲಿ ಸವಾರಿ' ರೂಪಕದ ಮೂಲಕ ಚಿತ್ರಿಸಲಾಗಿದೆ.

'ಹುಲಿ ಸವಾರಿ' ರೂಪಕವು ವ್ಯಕ್ತಿಯು ಕಯ್ಗೊಂಡ ಕೆಲಸ ಅತ್ಯಂತ ಅಪಾಯಕಾರಿ ಯಾಗಿದೆ ಎಂಬುದನ್ನು ಸೂಚಿಸುತ್ತದೆ.

"ಹುಲಿಯ ಬೆನ್ನಿನ ಮೇಲೆ ಕುಳಿತ ವ್ಯಕ್ತಿಯು ಇತ್ತ ಹುಲಿಯನ್ನು ಹತೋಟಿ ಯಲ್ಲಿಟ್ಟುಕೊಂಡು ಸವಾರಿಯನ್ನು ಮಾಡಲಾಗದೆ, ಅತ್ತ ಇಳಿದು ಜೀವಂತವಾಗಿ ಪಾರಾಗಲಾಗದೆ ಯಾವ ಗಳಿಗೆಯಲ್ಲಾದರೂ ಹುಲಿಯ ಬಾಯಿಗೆ ಬಲಿಯಾಗುವುದು ನಿಶ್ಚಿತವಾಗಿರುವುದರಿಂದ, ಸವಾರಿಯನ್ನು ಬಿಡಲಾಗದೆ ಮುಂದುವರಿಸಿದ್ದಾನೆ" ಎಂಬ ರೂಪಕದ ಮೂಲಕ ಸರ್ವಾಧಿಕಾರಿಯು ತನ್ನ ಜೀವಿತದ ಕೊನೆಗಳಿಗೆಯ ತನಕ ಕ್ರೂರತನದಿಂದಲೇ ಆಡಳಿತವನ್ನು ನಡೆಸುತ್ತಾನೆ ಎಂಬುದನ್ನು ಹೇಳಲಾಗಿದೆ.

ಸರ್ವಾಧಿಕಾರಿಯಾದವನು "ತಾನೊಬ್ಬ ಅತಿ ಮಾನವ; ತಾನೊಬ್ಬನೇ ಸರ್ವಶಕ್ತ ಹಾಗೂ ಎಲ್ಲವನ್ನೂ ಬಲ್ಲವನು; ತನ್ನೊಬ್ಬನಿಂದಲೇ ನಾಡು ಏಳಿಗೆಯನ್ನು ಹೊಂದಬಲ್ಲುದು" ಎಂಬ ಸ್ವಮೋಹಕ್ಕೆ ಒಳಗಾಗಿ, ತನ್ನ ಕಾಲದವರೆಗೂ ನಡೆದುಕೊಂಡು ಬಂದಿದ್ದ ನಾಡಿನ ಆಡಳಿತ ಸೂತ್ರವನ್ನು ಸಂಪೂರ್ಣವಾಗಿ ಹಾಳುಮಾಡುತ್ತಾನೆ. ತನ್ನ ಆಡಳಿತದಲ್ಲಿನ ತಪ್ಪುಗಳನ್ನು ಗುರುತಿಸಿ ತಿಳಿಯ ಹೇಳಿದವರನ್ನು ಸೆರೆಮನೆಗೆ ತಳ್ಳಿ ಕ್ರೂರತನದಿಂದ ಅವರನ್ನು ದಮನಮಾಡಿ, "ತಾನು ಆಡಿದ್ದೇ ಸತ್ಯ; ಮಾಡಿದ್ದೇ ನ್ಯಾಯ" ಎಂಬ ಮೊಂಡುತನದಿಂದ ಮಾಡಬಾರದ್ದನ್ನು ಮಾಡುತ್ತಲೇ ಸಾಗುತ್ತಾನೆ. ಸರ್ವಾಧಿಕಾರಿಯು ಆಡಳಿತದ ಗದ್ದುಗೆಯಿಲ್ಲದೆ ಜೀವನದಲ್ಲಿ ಒಂದು ಅರೆಗಳಿಗೆಯು ನೆಮ್ಮದಿಯಿಂದ ಇರಲಾರ.

ಮಾನವ ಸಮುದಾಯ ಉಳಿದು ಬೆಳೆದು ಬಾಳುವುದಕ್ಕೆ ಬೇಕಾದ ಪ್ರೀತಿ, ಕರುಣೆ ಹಾಗೂ ಗೆಳೆತನದ ಸಹಬಾಳ್ವೆಯ ಸಂಗತಿಗಳಾಗಲಿ ಇಲ್ಲವೇ ನಾಡಿನ ಸಂವಿಧಾನದತ್ತವಾದ

ಕಾನೂನು ಕಟ್ಟಲೆಗಳಾಗಲಿ ಸರ್ವಾಧಿಕಾರಿಯ ಪಾಲಿಗೆ ಎಂದೆಂದಿಗೂ ದೊಡ್ಡದಾಗಿ ಕಾಣಿಸುವುದಿಲ್ಲ.

(ಸರ್ವ+ಅಧಿಕಾರಿ; ಸರ್ವ=ಎಲ್ಲ/ಸಕಲ; ಅಧಿಕಾರಿ=ಆಡಳಿತವನ್ನು ನಡೆಸುವವನು; ಸರ್ವಾಧಿಕಾರಿ=ನಾಡಿನ ಆಡಳಿತ ಸೂತ್ರವನ್ನು ತನ್ನೊಬ್ಬನ ಹತೋಟಿಯಲ್ಲಿಯೇ ಇಟ್ಟುಕೊಂಡಿರುವವನು; ಹತ್ತಿ+ಆಯ್ತು; ಹತ್ತು=ಏರು; ಹುಲಿ=ಇತರ ಜೀವಿಗಳನ್ನು ಕೊಂದು ತಿಂದು ಬದುಕುವ ಒಂದು ಬಗೆಯ ಪ್ರಾಣಿ ; ಮತ್ತೆ=ತಿರುಗಿ/ಬಳಿಕ; ಇಳಿವುದು+ಎಂತು; ಇಳಿ=ಕೆಳಕ್ಕೆ ಬರುವುದು/ಕೆಳಕ್ಕೆ ದುಮುಕುವುದು; ಎಂತು=ಯಾವ ರೀತಿಯಲ್ಲಿ;

ಇಲ್ಲ+ಗೈವುದು+ಎನ್ನ; ಗೆಯ್=ಮಾಡು/ನೆರವೇರಿಸು ; ಗೈವುದು=ಮಾಡುವುದು; ಇಲ್ಲಗೈವುದು=ಇಲ್ಲದಂತೆ ಮಾಡುವುದು; ಎನ್ನ=ನನ್ನನ್ನು ; ತಿನ್=ಕೊಲ್ಲು;

ಇಲ್ಲಗೈವುದೆನ್ನ ತಿಂದು=ನನ್ನನ್ನು ಕೊಂದು ತಿನ್ನುತ್ತದೆ;

ಬಂದುದೆಲ್ಲ ಬರಲಿ=ಆಗುವುದೆಲ್ಲಾ ಆಗಿಯೇ ಹೋಗಲಿ; ನಡೆವೆ=ಮುಂದೆ ಸಾಗುತ್ತೇನೆ;

ಕೊಂದು ಕೊಂದು ನಡೆವೆ ಮುಂದು=ಇದುವರೆಗೂ ಮಾಡಿದ ವಂಚನೆ, ಕ್ರೂರತನ ಮತ್ತು ದಬ್ಬಾಳಿಕೆಯ ಆಡಳಿತವನ್ನೇ ಎಲ್ಲ ಕಾಲಕ್ಕೂ ಮುಂದುವರಿಸುತ್ತೇನೆ.)

❖❖

೧೬ ಮೋಹ

(ಬಂಗಾಳಿ ಕವಿ ರವೀಂದ್ರನಾಥ ಟಾಗೋರ್ ಅವರ ಕವನದ ಅನುವಾದ. ಇವರ ಕಾಲ: ಕ್ರಿ.ಶ.೧೮೬೧–೧೯೪೧.)

ನಿಡುಸುಯ್ದು ನದಿಯ ಈ ದಡ ಹೇಳಿತತಿ ನೊಂದು
"ಬಲ್ಲೆ ಸುಖವೆಲ್ಲ ಆ ದಡದೊಳಿದೆ" ಎಂದು
ಆ ದಡವೊ ಬಿಸುಸುಯ್ದು ನಿಡು ನುಡಿಯಿತೆದೆ ಬೆಂದು
"ಸುಖವಿದ್ದರೆಲ್ಲ ಆ ದಡದೊಳಿದೆ" ಎಂದು.

ಪ್ರತಿಯೊಬ್ಬ ವ್ಯಕ್ತಿಯು ತನ್ನ ಜೀವನದ ಯಾವುದಾದರೊಂದು ಹಂತದಲ್ಲಿ ತನ್ನ ಬದುಕಿನ ರೀತಿನೀತಿಗಳನ್ನು ಮತ್ತು ಆಗುಹೋಗುಗಳನ್ನು ಮತ್ತೊಬ್ಬರ ಬದುಕಿನೊಡನೆ ಹೋಲಿಸಿ ನೋಡಿಕೊಂಡು, ತನ್ನ ಬದುಕಿನಲ್ಲಿ ತಾನು ಕಾಣದ ಒಲವು ನಲಿವು ನೆಮ್ಮದಿಯು ಅವರ ಬದುಕಿನಲ್ಲಿ ಇದೆಯೆಂದು ಪರಿತಪಿಸುವ ಬಗೆಯನ್ನು ಈ ಕವನದಲ್ಲಿ ನದಿಯೊಂದರ ಎರಡು ದಡಗಳ ನಡುವೆ ನಡೆಯುವ ಮಾತಿನ ರೂಪಕದ ಮೂಲಕ ಚಿತ್ರಿಸಲಾಗಿದೆ.

(ಮೋಹ=ತಪ್ಪು ತಿಳುವಳಿಕೆ; ನಿಡಿದು+ಸುಯ್=ನಿಡುಸುಯ್; ನಿಡಿದು= ಉದ್ದವಾದುದು/ನೀಳವಾದುದು; ಸುಯ್=ಉಸಿರು; ನಿಡುಸುಯ್=ಜೀವನದಲ್ಲಿ ನಿರಾಶೆ, ಸಂಕಟ ಮತ್ತು ಬಹು ಬಗೆಯ ವೇದನೆಗೆ ಗುರಿಯಾಗಿ ವ್ಯಕ್ತಿಯು ನರಳುವಾಗ ಬಿಡುವ ನಿಟ್ಟುಸಿರು;

ನದಿ=ಹೊಳೆ/ತೊರೆ; ದಡ=ತೀರ/ದಂಡೆ/ಅಂಚು; ಈ ದಡ=ನದಿಯ ಒಂದು ಪಕ್ಕದಲ್ಲಿರುವ ದಡ; ಆ ದಡ=ನದಿಯ ಮತ್ತೊಂದು ಪಕ್ಕದಲ್ಲಿರುವ ದಡ; ಹೇಳಿತು+ಅತಿ; ಹೇಳು=ನುಡಿ; ಅತಿ=ಹೆಚ್ಚು; ನೊಂದು=ಸಂಕಟಪಡುತ್ತ;

ಬಲ್=ತಿಳಿ/ಅರಿ; ಬಲ್ಲೆ=ತಿಳಿದಿದ್ದೇನೆ/ಅರಿತಿದ್ದೇನೆ; ಸುಖ+ಎಲ್ಲ; ಸುಖ=ಒಲವು, ನಲಿವು, ನೆಮ್ಮದಿಯಿಂದ ಕೂಡಿದ ಬದುಕು; ದಡ+ಒಳ್+ಇದೆ; ಒಳ್=ಅಲ್ಲಿ; ದಡದೊಳ್=ದಡದಲ್ಲಿ;

ಬಿಸಿದು+ಸುಯ್; ಬಿಸಿದು=ಬಿಸಿಯಾದ/ಬೆಚ್ಚನೆಯ; ಬಿಸುಸುಯ್=ಸಂಕಟದಿಂದ ನೋಯುತ್ತಿರುವಾಗ ವ್ಯಕ್ತಿಯಿಂದ ಹೊರಹೊಮ್ಮುವ ಬಿಸಿಯುಸಿರು; ನುಡಿಯಿತು+ಎದೆ; ನಿಡು ನುಡಿಯಿತು=ವಿವರವಾಗಿ ಹೇಳಿತು; ಎದೆ=ಮನಸ್ಸು; ಎದೆ ಬೆಂದು=ಮನಸ್ಸು ಸಂಕಟದಿಂದ ಬೇಯುತ್ತ; ಸುಖ+ಇದ್ದರೆ+ಎಲ್ಲ;

"ಬಲ್ಲೆ ಸುಖವೆಲ್ಲ ಆ ದಡದೊಳಿದೆ / ಸುಖವಿದ್ದರೆಲ್ಲ ಆ ದಡದೊಳಿದೆ"=ಇದೊಂದು ರೂಪಕವಾಗಿ ಬಳಕೆಯಾಗಿದೆ. ಪ್ರತಿಯೊಬ್ಬ ವ್ಯಕ್ತಿಯೂ ತಾನು ಹೊಂದಿರುವುದಕ್ಕಿಂತ

ಹೆಚ್ಚಾಗಿ ತನ್ನಲ್ಲಿ ಇಲ್ಲದ್ದನ್ನೇ ಕುರಿತು ಚಿಂತಿಸುವುದರಿಂದ, ಮತ್ತೊಬ್ಬನತ್ತ ಬೆರಳುಮಾಡಿ ತೋರಿಸುತ್ತಾ, ಅವನು ಪರಿಪೂರ್ಣವಾದ ರೀತಿಯಲ್ಲಿ ಒಲವು ನಲಿವು ನೆಮ್ಮದಿಯ ಬದುಕನ್ನು ಹೊಂದಿದ್ದಾನೆ ಎಂಬ ತಪ್ಪುಗ್ರಹಿಕೆಯಿಂದ ನರಳುತ್ತಿರುತ್ತಾನೆ.

ಈ ಬಗೆಯ ತಪ್ಪುಗ್ರಹಿಕೆಯು ಎಲ್ಲ ವ್ಯಕ್ತಿಗಳಲ್ಲಿಯೂ ತುಸು ಹೆಚ್ಚು ಕಡಿಮೆ ಬೇರೆ ಬೇರೆ ಪ್ರಮಾಣದಲ್ಲಿರುತ್ತದೆ ಎಂಬ ಸಾಮಾಜಿಕ ವಾಸ್ತವವನ್ನು ಈ ರೂಪಕ ಸೂಚಿಸುತ್ತಿದೆ.

❖❖

೧೭. ಪಶುಗಳೊಡನೆ ಪಶುವಾಗಿಯಾದರೂ ಬದುಕಲೇ

(ವಾಲ್ಟ್ ವಿಟ್ಮನ್ ಕವಿಯ ವಚನ ಕವನದ ಅನುವಾದ. ವಾಲ್ಟ್ ವಿಟ್ಮನ್ ಅವರು ಅಮೆರಿಕ ದೇಶದ ಕವಿ. ಇವರ ಕಾಲ: ೧೮೧೯ ರಿಂದ ೧೮೯೨.)

ಪಶುಗಳೊಡನೆ ಪಶುವಾಗಿಯಾದರೂ ಬದುಕಲೇ
ಅವಕ್ಕೆನಿತು ಶಾಂತಿ ಎನಿತು ತೃಪ್ತಿ
ನೋಡುತ್ತಾ ನಿಂತೆನೆಂದರೆ
ಘಂಟೆ ಘಂಟೆ ಹರಿದರೂ ಹೊತ್ತು ಗೊತ್ತಾಗುವುದಿಲ್ಲ
ತಮ್ಮ ಇರವಿಗೆ ಮರುಗಿ ಅವು ಕುದಿಯುವುದಿಲ್ಲ
ಬಾಯಿ ಬಡಿದುಕೊಳ್ಳುವುದಿಲ್ಲ ಪರದಾಡುವುದಿಲ್ಲ
ಇರುಳೆಲ್ಲಾ ನಿದ್ದೆಗೆಟ್ಟು
ಪಾಪಗಳಿಗಾಗಿ ಪಶ್ಚಾತ್ತಾಪಪಡುವುದಿಲ್ಲ
ದೇವರು ಧರ್ಮಗಳನ್ನು ಕುರಿತು ಜಿಜ್ಞಾಸೆ ಮಾಡುತ್ತಾ
ನನಗೆ ರೇಜಿಗೆ ಹಿಡಿಸುವುದಿಲ್ಲ
ಅವುಗಳಲ್ಲಿ ಯಾವೊಂದಕ್ಕೂ ಅತ್ಯಾಸೆಯಿಲ್ಲ
ಯಾವೊಂದೂ ವಸ್ತುಗಳಿಗೆ ಒಡೆಯನಾಗಬೇಕೆಂದು ತಲೆಕೆಡಿಸಿಕೊಂಡಿಲ್ಲ
ಒಂದಾದರೂ ಮತ್ತೊಂದಕ್ಕೆ ಮೊಣಕಾಲು ಮಣಿಯುವುದಿಲ್ಲ
ಕಾಲಿಗೆ ಬೀಳುವುದಿಲ್ಲ
ಜೊತೆ ಇರುವವಕ್ಕಾಗಲಿ ಶತಮಾನಗಳಿಗೆ ಹಿಂದೆ ಬದುಕಿದ್ದವುಗಳಿಗಾಗಲಿ
ಯಾವೊಂದೂ ಶ್ರೀ ಶ್ರೀ ಶ್ರೀಯಾಗಿಲ್ಲ
ಹುಡುಕಿದರೂ ಮತ್ಸರದ ಅಸುಖ ದೊರೆಯುವುದಿಲ್ಲ
ಯಾವೊಂದೂ ಬಿರುದುವೊತ್ತು ಗೌರವ ಪದವಿಗೇರಿಲ್ಲ.

ಜಗತ್ತಿನ ಜೀವರಾಶಿಗಳಲ್ಲಿ ಮಾನವ ಜೀವಿಯು ಮಾತ್ರ ಪರಿಪೂರ್ಣವಾದ ನೆಮ್ಮದಿಯಿಲ್ಲದೆ ಜೀವನದ ಉದ್ದಕ್ಕೂ ಒಂದಲ್ಲ ಒಂದು ಬಗೆಯ ಮಾನಸಿಕ ಒಳಮಿಡಿತಗಳಿಂದ ತಲ್ಲಣಗೊಳ್ಳುತ್ತಿರುವುದನ್ನು ಈ ಕವನದಲ್ಲಿ ಚಿತ್ರಿಸಲಾಗಿದೆ.

'ನೆಮ್ಮದಿ' ಎಂದರೆ ವ್ಯಕ್ತಿಯು ಜೀವನದಲ್ಲಿ ತನಗೆ ಬೇಕಾದುದೆಲ್ಲವನ್ನೂ ಪಡೆದುಕೊಂಡು ಎಲ್ಲರೊಡನೆ ಒಲವು ನಲಿವಿನಿಂದ ಜತೆಗೂಡಿ ಬಾಳುವುದು.

(ಪಶು+ಗಳ್+ಒಡನೆ; ಪಶು=ಹಸು/ದನ; ಒಡನೆ=ಸಂಗಡ/ಜೊತೆ; ಪಶು+ ಆಗಿ+ಆದರೂ; ಬದುಕು=ಬಾಳು/ಜೀವನ; ಅವಕ್ಕೆ+ಎನಿತು; ಎನಿತು=ಯಾವ ಪ್ರಮಾಣದಲ್ಲಿ; ಶಾಂತಿ=ಜೀವನದಲ್ಲಿ ಯಾವುದೇ ಬಗೆಯ ನೋವಾಗಲಿ ಇಲ್ಲವೇ ತಳಮಳವಾಗಲಿ ಇಲ್ಲದೆ ನೆಮ್ಮದಿಯಿಂದಿರುವುದು; ತೃಪ್ತಿ=ತನಗೆ ಬೇಕಾದುದೆಲ್ಲವೂ ದೊರಕಿದೆ ಎಂಬ ಆನಂದ; ನಿಂತು+ಎನ್+ಎಂದರೆ; ಹರಿ=ಚಲಿಸು/ಉರುಳು; ಹೊತ್ತು=ಸಮಯ/ಕಾಲ; ಗೊತ್ತಾಗು=ತಿಳಿಯುವುದು;

ಇರವು=ಇರುವ ರೀತಿ/ಬಗೆ;

ತಮ್ಮ ಇರವಿಗೆ=ಈಗ ತಾವು ಬದುಕುತ್ತಿರುವ ರೀತಿಗೆ;

ಮರುಗು="ಅಯ್ಯೋ ಹೀಗೆ ಇರುವೆನಲ್ಲ ಇಲ್ಲವೇ ನನ್ನ ಬದುಕು ಹೀಗಾಯಿತಲ್ಲ" ಎಂದು ಸಂಕಟಗೊಳ್ಳುವುದು/ತಳಮಳಗೊಳ್ಳುವುದು; ಕುದಿ=ಕೋಪದಿಂದ ಕೆರಳು/ ಸಿಟ್ಟಾಗು; ಬಡಿ=ಹೊಡೆ/ತಟ್ಟು ;

ಬಾಯಿ ಬಡಿದುಕೊಳ್ಳುವುದು=ಇದೊಂದು ನುಡಿಗಟ್ಟು, ವ್ಯಕ್ತಿಯು ತನಗಾದ ಸಂಕಟವನ್ನು ಹೊರಹಾಕಲು "ಅಯ್ಯಯ್ಯೋ.. ಅಯ್ಯಯ್ಯಪ್ಪೋ" ಎಂದು ಉಚ್ಚರಿಸುತ್ತ ತನ್ನ ಕಯ್ಗಳಿಂದ ತನ್ನ ಬಾಯನ್ನು ಬಡಿದುಕೊಳ್ಳುವುದು. ವ್ಯಕ್ತಿಯ ಮಯ್ ಮನದ ಸಂಕಟದ ತೀವ್ರತೆಯನ್ನು ಈ ಬಗೆಯ ವರ್ತನೆಯು ಹೊರಹಾಕುತ್ತದೆ; ಪರದಾಡು=ತೊಳಲಾಡು/ಒದ್ದಾಡು/ಅಲೆದಾಡು;

ಇರುಳ್+ಎಲ್ಲಾ; ಇರುಳ್=ರಾತ್ರಿ; ನಿದ್ದೆ+ಕೆಟ್ಟು; ನಿದ್ದೆಗೆಟ್ಟು=ನಿದ್ದೆಯನ್ನು ಮಾಡಲಾಗದೆ/ನಿದ್ರೆಬಾರದೆ;

ಪಾಪ=ಕೆಟ್ಟ ನಡೆನುಡಿ; ಪಶ್ಚಾತ್ತಾಪ=ವ್ಯಕ್ತಿಯು ತಾನು ಮಾಡಿದ ತಪ್ಪನ್ನು ಅರಿತುಕೊಂಡು, ಅದಕ್ಕಾಗಿ ತಾನೇ ನೊಂದುಕೊಳ್ಳುವುದು; ದೇವರು=ಜೀವನದಲ್ಲಿ ಬರುವ ಎಡರು ತೊಡರುಗಳನ್ನು ಪರಿಹರಿಸಿ, ತಮಗೆ ಒಳಿತನ್ನು ಮಾಡಿ ಕಾಪಾಡುವ ವ್ಯಕ್ತಿಯನ್ನು/ಶಕ್ತಿಯನ್ನು ದೇವರೆಂದು ಮಾನವ ಸಮುದಾಯ ನಂಬಿದೆ; ಧರ್ಮ=ನಿಯಮ/ ಆಚಾರ/ಸಂಪ್ರದಾಯ/ಕಟ್ಟುಪಾಡು; ಜಿಜ್ಞಾಸೆ=ತಿಳಿಯುವ ಬಯಕೆ/ಪರಿಶೀಲನೆ/ಯಾವುದೇ ಬಗೆಯ ಸಂಗತಿಗಳನ್ನು ಒರೆಹಚ್ಚಿ ನೋಡುವುದು; ರೇಜಿಗೆ=ಗದ್ದಲ/ರಗಳೆ/ರಂಪ;

ರೇಜಿಗೆ ಹಿಡಿಸು=ವ್ಯಕ್ತಿಯು ವಿಚಿತ್ರವಾದ ಇಲ್ಲವೇ ಅಸಹ್ಯಕರವಾದ ನಡೆನುಡಿಗಳಿಂದ ಇತರರ ಮನಸ್ಸಿಗೆ ಕಿರಿಕಿರಿಯನ್ನುಂಟುಮಾಡುವುದು;

ಯಾವ+ಒಂದಕ್ಕೂ; ಅತ್ಯಾಸೆ+ಇಲ್ಲ; ಅತ್ಯಾಸೆ=ಅತಿಯಾದ ಆಸೆ/ಬಯಸಿದ್ದೆಲ್ಲವನ್ನೂ ತನ್ನದಾಗಿಸಿಕೊಳ್ಳಬೇಕೆಂಬ ದುರಾಸೆ; ವಸ್ತು=ಸಾಮಗ್ರಿ/ಉಪಕರಣ; ಒಡೆಯನ್+ ಆಗಬೇಕೆಂದು; ಒಡೆಯ=ಯಜಮಾನ/ದಣಿ;

ತಲೆಕೆಡಿಸಿಕೊಳ್ಳುವುದು=ಇದೊಂದು ನುಡಿಗಟ್ಟು, ವ್ಯಕ್ತಿಯು ತಾನು ಆಸೆಪಟ್ಟದ್ದನ್ನು ಪಡೆಯುವುದಕ್ಕಾಗಿ ಇಲ್ಲವೇ ತನ್ನ ಬದುಕಿನಲ್ಲಿ ಉಂಟಾಗಿರುವ ಜಂಜಾಟದಿಂದ

ತಪ್ಪಿಸಿಕೊಳ್ಳುವುದಕ್ಕಾಗಿ ನಾನಾ ಬಗೆಗಳಲ್ಲಿ ಚಿಂತಿಸುತ್ತಿರುವುದು; ಮೊಣಕಾಲು=ಮಂಡಿಚಿಪ್ಪಿನಿಂದ ಕೆಳಗಡೆಯಿರುವ ಕಾಲು; ಮಣಿ=ಬಾಗು/ಬಗ್ಗು;

ಮೊಣಕಾಲು ಮಣಿಯುವುದು, ಕಾಲಿಗೆ ಬೀಳುವುದು=ಇವು ನುಡಿಗಟ್ಟುಗಳಾಗಿ ಬಳಕೆಯಾಗಿವೆ. ವ್ಯಕ್ತಿಯು ಹಣ, ಆಸ್ತಿ, ಆಡಳಿತದ ಗದ್ದುಗೆಯನ್ನು ಪಡೆಯುವುದಕ್ಕಾಗಿ ಇಲ್ಲವೇ ತನ್ನ ಬೇಡಿಕೆಗಳನ್ನು ಈಡೇರಿಸಿಕೊಳ್ಳುವುದಕ್ಕಾಗಿ ಮತ್ತೊಬ್ಬನ ಮುಂದೆ ದೀನತೆಯಿಂದ ಕುಗ್ಗಿ ಬಾಳುವುದು/ಮತ್ತೊಬ್ಬನ ಅಡಿಯಾಳಾಗುವುದು;

ಜೊತೆ ಇರುವುವು=ಈಗ ವ್ಯಕ್ತಿಯ ಜತೆಯಲ್ಲಿ ಬದುಕಿ ಬಾಳುತ್ತಿರುವ ಜೀವಿಗಳು; ಶತಮಾನ=ಒಂದು ನೂರು ವರುಶದ ಕಾಲಮಾನ; ಬದುಕಿ+ಇದ್ದವುಗಳಿಗೆ+ಆಗಲಿ;

ಶ್ರೀ+ಆಗಿಲ್ಲ; ಶ್ರೀ=ಮಂಗಳ ಸೂಚಕವಾದ ಪದ/ವ್ಯಕ್ತಿಯ ಹೆಸರಿನ ಮುಂದೆ ಒಲವಿನ ಸೂಚಕವಾಗಿ ಹಾಕುವ ಪದ;

ಶ್ರೀ ಶ್ರೀ ಶ್ರೀಯಾಗುವುದು=ಇದೊಂದು ನುಡಿಗಟ್ಟು. ಯಾವುದೇ ಒಂದು ಜಾತಿ ಇಲ್ಲವೇ ಮತದ ಜನಸಮುದಾಯಕ್ಕೆ ಗುರುವಾಗುವುದು; ಜನರು ಒಬ್ಬ ವ್ಯಕ್ತಿಯನ್ನು ಬಹಳ ದೊಡ್ಡವನೆಂದು ಪರಿಗಣಿಸಿ ಅಪಾರವಾದ ಒಲವು ನಲಿವಿನಿಂದ ಪೂಜಿಸುತ್ತ, ಆತನ ಹೆಸರಿನ ಮುಂದೆ ಮಂಗಳ ಸೂಚಕವಾಗಿ "ಶ್ರೀ" ಎಂಬ ಪದವನ್ನು ಮೂರು ಸಾರಿ ಬಳಸುತ್ತಾರೆ. ಜಾತಿ ಇಲ್ಲವೇ ಮತದ ಹೆಸರಿನ ನೆಲೆಯಲ್ಲಿ ಈ ರೀತಿ ಒಬ್ಬನನ್ನು ಗುರುವನ್ನಾಗಿ ಮಾಡಿಕೊಂಡು, ಅವನ ಮೂಲಕ ತಮ್ಮ ಜಾತಿ/ಮತದವರನ್ನು ಜತೆಗೂಡಿಸಿ, ಸಮಾಜದ ಸಂಪತ್ತು ಮತ್ತು ನಾಡಿನ ಆಡಳಿತದ ಗದ್ದುಗೆಯು ತಮ್ಮ ಜಾತಿ/ಮತದವರಿಗೆ ದೊರೆಯುವಂತೆ ನೋಡಿಕೊಳ್ಳುತ್ತಾರೆ;

ಹುಡುಕು=ಅರಸು/ತಡಕಾಡು; ಮತ್ಸರ=ಹೊಟ್ಟೆಕಿಚ್ಚು/ಹಗೆತನ; ಅಸುಖ=ಒಲವು ನಲಿವು ನೆಮ್ಮದಿಯಿಲ್ಲದಿರುವುದು; ಬಿರುದು+ಪೊತ್ತು; ಬಿರುದು=ಕೀರ್ತಿಸೂಚಕವಾಗಿ ಕೊಡುವ ಹೆಸರು/ಪ್ರಶಸ್ತಿ; ಪೊತ್ತು=ಪಡೆದು; ಬಿರುದುವೊತ್ತು=ಬಿರುದನ್ನು ಪಡೆದುಕೊಂಡು; ಗೌರವ+ಪದವಿಗೆ+ಏರಿಲ್ಲ; ಗೌರವ=ದೊಡ್ಡತನ/ಹಿರಿಮೆ; ಪದವಿ=ಅಂತಸ್ತು/ಮನ್ನಣೆ; ಏರು=ಹತ್ತು;

ಬಿರುದುವೊತ್ತು ಗೌರವಪದವಿಗೇರುವುದು=ಜನಸಮುದಾಯದ ನಡುವೆ ಮಹಾ ವ್ಯಕ್ತಿಯೆಂದು ಬಿರುದನ್ನು ಪಡೆದು, ಇನ್ನುಳಿದವರಿಗಿಂತ ತಾನೇ ಉತ್ತಮನೆಂದು ಮೆರೆಯುವುದು;

ಕವಿಗೆ ಪಶುಗಳ ನೆಮ್ಮದಿಯ ಜೀವನವನ್ನು ನೋಡನೋಡುತ್ತಾ ತಾನು ಅವುಗಳಂತೆಯೇ ಬಾಳಬೇಕೆಂಬ ಆಸೆಯಾಗುತ್ತದೆ. ಅವನ್ನೇ ಕೆಲಸಮಯ ತದೇಕ ಚಿತ್ತದಿಂದ ದಿಟ್ಟಿಸಿ ನೋಡುತ್ತ, ಮಾನವ ಜೀವಿಗಳ ನಡೆನುಡಿಗಳೊಂದಿಗೆ ಪಶುಗಳ ವರ್ತನೆಗಳನ್ನು ಹೋಲಿಸಿ, ಅವು ಆ ಬಗೆಯಲ್ಲಿ ನೆಮ್ಮದಿಯಿಂದಿರಲು ಕಾರಣವಾಗಿರುವ ಸಂಗತಿಗಳನ್ನು

ಒರೆಹಚ್ಚಿ ನೋಡುತ್ತಾ, ಪಶುಗಳ ಬದುಕಿನಲ್ಲಿ ಇಲ್ಲದ, ಆದರೆ ಮಾನವರ ಬದುಕಿನಲ್ಲಿ ಕಂಡುಬರುವ ಸಂಗತಿಗಳನ್ನು ನಿರೂಪಿಸುತ್ತಾನೆ.

ಪಶುಗಳ ನೆಮ್ಮದಿಯ ಬದುಕಿಗೂ ಮತ್ತು ಮಾನವರ ನೆಮ್ಮದಿಯಿಲ್ಲದ ಬದುಕಿಗೂ ಕಾರಣವೇನೆಂದರೆ ಮಾನವರೇ ಕಟ್ಟಿಕೊಂಡಿರುವ ಕುಟುಂಬ, ಜಾತಿ, ಮತ, ದೇಗುಲ, ಆಸ್ತಿಯ ಹಕ್ಕು, ಆಡಳಿತದ ಗದ್ದುಗೆ, ಶಾಲೆ, ನ್ಯಾಯಾಲಯ ಮುಂತಾದ ಸಾಮಾಜಿಕ ಒಕ್ಕೂಟಗಳು. ಈ ಬಗೆಯ ಒಕ್ಕೂಟಗಳು ಪಶುಗಳ ಪಾಲಿಗೆ ಇಲ್ಲ. ಪಶುಗಳು ನಿಸರ್ಗದ ನಡುವೆ ಬೆತ್ತಲೆಯಾಗಿ ಹುಟ್ಟಿ, ಬೆತ್ತಲೆಯಾಗಿಯೇ ಅಂದರೆ ಮಯ್ ಮೇಲೆ ಬಟ್ಟೆಯನ್ನು ತೊಡದೆ ಬಾಳಿ ಅಳಿಯುತ್ತವೆ. ಬದುಕಿನ ಉದ್ದಕ್ಕೂ ತಮ್ಮ ಹೊಟ್ಟೆಯ ಹಸಿವು ಮತ್ತು ಕಾಮದ ಬಯಕೆಯನ್ನು ಹಿಂಗಿಸಿಕೊಳ್ಳುತ್ತ, ಹಿಂದಿನ ದಿನಗಳಲ್ಲಿ ನಡೆದ ಯಾವೊಂದು ಪ್ರಸಂಗಗಳ ನೆನಪಿನ ತಾಕಲಾಟವಿಲ್ಲದೆ, ಮುಂದಿನ ದಿನಗಳಲ್ಲಿ ಏನಾಗುವುದೋ ಎನ್ನುವ ಆತಂಕವಿಲ್ಲದೆ ವರ್ತಮಾನದಲ್ಲಿ ಬಾಳುತ್ತಿರುತ್ತವೆ. ಆದರೆ ಮಾನವರ ಮನಸ್ಸು ಮಾತ್ರ ಹಿಂದಿನ, ಇಂದಿನ ಮತ್ತು ಮುಂದಿನ ಈ ಮೂರು ಕಾಲಗಳಲ್ಲಿಯೂ ಎಡೆಬಿಡದೆ ತುಯ್ದಾಡುತ್ತಿರುವುದರಿಂದ, ನೆಮ್ಮದಿಯೆಂಬುದು ಮಾನವ ಸಮುದಾಯದ ಪಾಲಿಗೆ ಇಲ್ಲವಾಗಿದೆ.

ನಿಸರ್ಗದ ನೆಲೆಯಲ್ಲಿರುವ ಸಾವಿರಾರು ಬಗೆಯ ಪ್ರಾಣಿ ಹುಳ ಹುಪ್ಪಟೆ ಹಕ್ಕಿಗಳಂತೆಯೇ ಮಾನವ ಜೀವಿಯು ಒಂದು ಬಗೆಯ ಪ್ರಾಣಿಯಾಗಿದ್ದರೂ, ತಾನೇ ಕಟ್ಟಿಕೊಂಡಿರುವ ಸಾಮಾಜಿಕ ಒಕ್ಕೂಟಗಳಿಂದಾಗಿ ಎರಡು ನೆಲೆಗಳಲ್ಲಿ ಬಾಳುತ್ತಿದ್ದಾನೆ. ಇತ್ತ ನಿಸರ್ಗದ ನೆಲೆಯಲ್ಲಿ ಕೇವಲ ಪ್ರಾಣಿಯಾಗಿದ್ದರೆ, ಅತ್ತ ಸಾಮಾಜಿಕ ನೆಲೆಯಲ್ಲಿ ಸಾಮಾಜಿಕ ಪ್ರಾಣಿಯಾಗಿದ್ದಾನೆ. ಆದ್ದರಿಂದಲೇ ಬದುಕಿನ ಉದ್ದಕ್ಕೂ ಮಾನವ ಜೀವಿಯ ಮಯ್ ಮನಸ್ಸು ನಿಸರ್ಗ ಸಹಜವಾದ ಕಾಮನೆಗಳು ಮತ್ತು ಸಾಮಾಜಿಕ ಕಟ್ಟುಪಾಡುಗಳ ನಡುವೆ ಸಿಲುಕಿ, ಇಬ್ಬಗೆಯ ತಾಕಲಾಟಗಳಿಂದ ಪರಿತಪಿಸುತ್ತಾ, ನೆಮ್ಮದಿಯನ್ನು ಪಡೆಯಲಾಗದೆ ತೊಳಲಾಡುತ್ತಿದೆ.

ಎಲ್ಲ ಜೀವಿಗಳಂತೆಯೇ ಮೊದಲು ಅಲೆಮಾರಿಯಾಗಿ ಆಹಾರದ ಸಂಗ್ರಹಣೆ ಮತ್ತು ಬೇಟೆಯಿಂದ ಬದುಕನ್ನು ನಡೆಸುತ್ತಿದ್ದ ಮಾನವ ಸಮುದಾಯ ತುಸು ಹೆಚ್ಚು ಕಡಿಮೆ ಪ್ರಾಣಿಗಳಂತೆಯೇ ಜೀವನವನ್ನು ನಡೆಸುತ್ತಿತ್ತು. ಆಗ ಯಾವುದೇ ಬಗೆಯ ಮೇಲು ಕೀಳು ಎಂಬ ಅಸಮಾನತೆಯು ಮಾನವ ಸಮುದಾಯದ ಬುಡಕಟ್ಟುಗಳಲ್ಲಿ ಇರಲಿಲ್ಲ. ಎಂದಿನಿಂದ ಬೇಸಾಯವನ್ನು ಮಾಡತೊಡಗಿ ಮಾನವ ಸಮಾಜ ಎಂಬುದು ರೂಪುಗೊಂಡಿತೋ ಅಂದಿನಿಂದ ಮಾನವ ಸಮುದಾಯದ ಬದುಕಿನ ರೀತಿನೀತಿಗಳು ಬದಲಾಗತೊಡಗಿದವು. ಕಾಲಕ್ರಮೇಣ ಕುಟುಂಬ ರಚನೆ ಮತ್ತು ಆಸ್ತಿಯ ಹಕ್ಕಿನ ವ್ಯವಸ್ಥೆಯು ಜಾರಿಗೆ ಬರುತ್ತಿದ್ದಂತೆಯೇ, ಅವನ್ನು ಕಾಪಾಡಿಕೊಳ್ಳುವುದಕ್ಕಾಗಿ ಜಾತಿ, ಮತ, ದೇವರುಗಳ

ಪರಿಕಲ್ಪನೆಯು ದೊಡ್ಡದಾಗಿ ಬೆಳೆದು ವರ್ಣ ತಾರತಮ್ಯ, ಜಾತಿ/ಮತಗಳ ತಾರತಮ್ಯ, ಲಿಂಗ ತಾರತಮ್ಯ ಮತ್ತು ವರ್ಗ ತಾರತಮ್ಯಗಳು ನೆಲೆಗೊಂಡು ಎಲ್ಲ ಬಗೆಯ ವಂಚನೆ, ಅತ್ಯಾಚಾರ, ಕೊಲೆ ಸುಲಿಗೆಯ ನಡೆನುಡಿಗಳು ಮಾನವ ಸಮುದಾಯದ ಜೀವನದಲ್ಲಿ ತಲೆದೋರಿದವು.

ಜಗತ್ತಿನಲ್ಲಿರುವ ಜೀವಿಗಳಲ್ಲಿ ಮಾನವ ಜೀವಿಯನ್ನು ಹೊರತುಪಡಿಸಿದರೆ, ಇನ್ನುಳಿದ ಜೀವಿಗಳೆಲ್ಲವೂ ಸ್ವಾವಲಂಬಿಗಳಾಗಿಯೇ ಬಾಳುತ್ತಿವೆ. ಆದರೆ ಮಾನವ ಜೀವಿ ಮಾತ್ರ ಹುಟ್ಟಿನಿಂದ ಸಾವಿನ ತನಕ ತನ್ನ ಬದುಕಿನುದ್ದಕ್ಕೂ ಒಂದಲ್ಲ ಒಂದು ಬಗೆಯಲ್ಲಿ ಪರಾವಲಂಬಿಯಾಗಿರುತ್ತಾನೆ. ಇದರಿಂದಾಗಿ ಯಾವುದೇ ಒಬ್ಬ ವ್ಯಕ್ತಿಯ ಬದುಕಿನ ಆಗುಹೋಗುಗಳ ಮೇಲೆ ಅವನು ಅವಲಂಬಿಸಿರುವ ಇಲ್ಲವೇ ಅವನನ್ನು ಅವಲಂಬಿಸಿರುವ ವ್ಯಕ್ತಿಗಳ ಬದುಕಿನ ಒಳಿತು ಕೆಡುಕುಗಳು ಪರಿಣಾಮ ಬೀರುವುದರಿಂದ ನೆಮ್ಮದಿಯಿಂದ ಮಾನವ ಜೀವಿಯು ಬಾಳಲು ಆಗುತ್ತಿಲ್ಲ.)

❖❖

ಬರಹಗಾರ

ಹೆಸರು: ಸಿ.ಪಿ. ನಾಗರಾಜ (1945)

ತಾಯಿ: ಲಕ್ಷ್ಮಿದೇವಮ್ಮ, ಮದ್ದೂರು, ಮಂಡ್ಯ ಜಿಲ್ಲೆ.

ತಂದೆ: ಪುಟ್ಟೇಗೌಡ, ಚೆಕ್ಕೆರೆ, ಚೆನ್ನಪಟ್ಟಣ ತಾಲ್ಲೂಕು, ರಾಮನಗರ ಜಿಲ್ಲೆ.

ಓದು: ಎಂ.ಎ., ಪಿಎಚ್.ಡಿ.,

ಕೆಲಸ: ಕನ್ನಡ ಅಧ್ಯಾಪಕ

1971–72 ಅರ್ಜುನಪುರಿ ಕಾಲೇಜು, ಮದ್ದೂರು, ಮಂಡ್ಯ ಜಿಲ್ಲೆ

1972–2003 ಭಾರತಿ ಕಾಲೇಜು, ಕಾಳಮುದ್ದನ ದೊಡ್ಡಿ, ಮದ್ದೂರು ತಾಲ್ಲೂಕು, ಮಂಡ್ಯ ಜಿಲ್ಲೆ.

2006–2021 ಸ್ನಾತಕೋತ್ತರ ಕೇಂದ್ರ, ಮಹಾರಾಣಿ ಲಕ್ಷ್ಮೀ ಅಮ್ಮಣ್ಣಿ ಮಹಿಳಾ ಕಾಲೇಜು, ಮಲ್ಲೇಶ್ವರಂ, ಬೆಂಗಳೂರು.

ಬರಹ

1. ಮುದ್ರಿತ ಪುಸ್ತಕಗಳು

ನಾಟಕ: ಭಾಗೀರಥಿ — ಅಂಬೆ — ಹಾವು
ಅಂಗಿಬಟ್ಟೆ — ಒಂದು ರೂಪಾಯಿ — ಕಳ್ಳರಿದ್ದಾರೆ ಎಚ್ಚರಿಕೆ
ಹೆಣದ ಹಣ. — ಮೂರು ಸಾಮಾಜಿಕ ನಾಟಕಗಳು

ಗದ್ಯ: ಕರಿಯನ ಪುರಾಣ — ಕನಕನ ಅವ್ವ
ಹಳ್ಳಿಗಾಡಿನ ರೂವಾರಿ — ಡಾ. ಬಂದೀಗೌಡ
ಆಣೆ ಪ್ರಮಾಣಗಳು — ಬಯ್ಗುಳ
ಸರ್ವಜ್ಞ ವಚನಗಳ ಓದು — ಅಲ್ಲಮ ವಚನಗಳ ಓದು
ಶಿವಶರಣೆಯರ ವಚನಗಳ ಓದು — ಶಿವಶರಣರ ವಚನಗಳ ಓದು
ಬಸವಣ್ಣ ವಚನಗಳ ಓದು — ಮುದ್ದೆ ಗಂಟು
ಶಿವಶರಣಶರಣೆಯರ ವಚನಗಳ ಓದು
ಪಂಪ ಭಾರತ ಓದು — ಸರ್ವಜ್ಞಮತ್ತು ಅಲ್ಲಮ ವಚನಗಳ ಓದು
ವಚನದಿಂದ ಆಯ್ದ ಸಾಲುಗಳ ಓದು ಕುವೆಂಪು ಕವನಗಳ ಓದು

2. ಮೈಲಾಂಗ್ ಡಿಜಿಟಲ್ ಪುಸ್ತಕಗಳು

https://mylang.in/collection/cpnagaraja

ಏಳು ನಾಟಕಗಳು (ಇಬುಕ್); ಭಾಗೀರಥಿ (ನಾಟಕ–ಇಬುಕ್); ಅಂಬೆ (ನಾಟಕ–ಇಬುಕ್); ಹಾವು (ನಾಟಕ–ಇಬುಕ್); ಅಂಗಿ ಬಟ್ಟೆ (ನಾಟಕ–ಇಬುಕ್); ಒಂದು ರೂಪಾಯಿ (ನಾಟಕ–ಇಬುಕ್); ಕಳ್ಳರಿದ್ದಾರೆ.. ಎಚ್ಚರಿಕೆ (ನಾಟಕ–ಇಬುಕ್); ಹೆಣದ ಹಣ(ನಾಟಕ–ಇಬುಕ್); ಶಿವಶರಣಶರಣೆಯರ ವಚನಗಳ ಓದು(ಇಬುಕ್);

ಬಯ್ಗುಳ (ಆಡಿಯೋ ಬುಕ್); ಸರ್ವಜ್ಞನ ವಚನಗಳ ಓದು (ಆಡಿಯೋ ಬುಕ್); ಅಲ್ಲಮನ ವಚನಗಳ ಓದು (ಆಡಿಯೋ ಬುಕ್); ಬಸವಣ್ಣನ ವಚನಗಳ ಓದು (ಆಡಿಯೋ ಬುಕ್); ಶಿವಶರಣಶರಣೆಯರ ವಚನಗಳ ಓದು–1–(ಆಡಿಯೋ ಬುಕ್); ಶಿವಶರಣಶರಣೆಯರ ವಚನಗಳ ಓದು–2–(ಆಡಿಯೋ ಬುಕ್); ವಚನದಿಂದ ಆಯ್ದ ಸಾಲುಗಳ ಓದು–1–(ಆಡಿಯೋ ಬುಕ್); ವಚನದಿಂದ ಆಯ್ದ ಸಾಲುಗಳ ಓದು–2–(ಆಡಿಯೋ ಬುಕ್); ಮುದ್ದೆಗಂಟು (ಆಡಿಯೋ ಬುಕ್).

3. C P Nagaraj - You Tube

Play Lists

ಸರ್ವಜ್ಞನ ವಚನಗಳ ಓದು– 13 ಎಪಿಸೋಡ್

ಅಲ್ಲಮನ ವಚನಗಳ ಓದು– 36 ಎಪಿಸೋಡ್

ಬಸವಣ್ಣನ ವಚನಗಳ ಓದು– 26 ಎಪಿಸೋಡ್

ಶಿವಶರಣಶರಣೆಯರ ವಚನಗಳ ಓದು– 52 ಎಪಿಸೋಡ್

ವಚನದಿಂದ ಆಯ್ದ ಸಾಲುಗಳ ಓದು– 162 ಎಪಿಸೋಡ್

ಮುದ್ದೆಗಂಟು– 60 ಎಪಿಸೋಡ್

ಹಳ್ಳಿಗಾಡಿನ ರೂವಾರಿ ಜಿ.ಮಾದೇಗೌಡ – 15 ಎಪಿಸೋಡ್

ಜನಪರ ಚೇತನ ಡಾ.ಬಂದೀಗೌಡ – 15 ಎಪಿಸೋಡ್

ಕುವೆಂಪು ಕವನಗಳ ಓದು – 13 ಎಪಿಸೋಡ್

ವಿಳಾಸ: ಸಿ.ಪಿ.ನಾಗರಾಜ, 75, 'ಎ' ಬ್ಲಾಕ್, 5ನೆಯ ಕ್ರಾಸ್, ಕ್ರಿಷ್ಣ ಗಾರ್ಡನ್, ಆರ್.ವಿ. ಕಾಲೇಜು ಪೋಸ್ಟ್, ಬೆಂಗಳೂರು–560059, ಮೊ: 9986347521.

e-mail : ngy7777@gmail.com

❖❖❖



• ಕಡಿಯುವರದೊ ಬಡಿಯುವರದೊ ಯಾರದಾದರೆ ಏನು
ಸಾಮ್ರಾಜ್ಯವಾವುದಂ ಸುಲಿಗೆ ರೈತರಿಗೆ
ವಿಜಯನಗರದೊ ಮೊಗಲರಾಜ್ಯಗಳೊ ಇಂಗ್ಲೀಷರದೊ
ಎಲ್ಲವೂ ಜಿಗಣೆಗಳೆ ನನ್ನ ನೆತ್ತರಿಗೆ
ಕತ್ತಿ ಪರದೇಶಿಯಾದರೆ ಮಾತ್ರ ನೋವೆ
ನಮ್ಮವರೆ ಹದಹಾಕಿ ತಿವಿದರದು ಹೂವೆ

'ರೈತನ ದೃಷ್ಟಿ' - ಕುವೆಂಪು.

ನಾಗು ಸ್ಮಾರಕ ಪ್ರಕಾಶನ, ಬೆಂಗಳೂರು.

ರೂ. 100/-